ಬೆನಗಲ್ ರಾಮರಾವ್

ಜೀವನ - ಕಾರ್ಯ



ವಜ್ರಮಹೋತ್ಸವ ವರ್ಷ
ಪಂಚವಾರ್ಷಿಕ ಯೋಜನೆಯ ಪುಸ್ತಕ ಮಾಲೆ-೨೬

ಬೆನಗಲ್ ರಾಮರಾಯರು

ಶೇಖರ ಇಡ್ಯ

ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ,
ಬೆಂಗಳೂರು-೧೮

BENAGAL RAMA RAO.—A life sketch of Benagal Rama Rao by Sri Shekhar Edya and published by Kannada Sahitya Parishat, Bangalore-18.
PP 12 + 56 ; Price : Rs. 2-00 ; 1976.

ಮೊದಲನೆಯ ಮುದ್ರಣ : ೧೯೭೬

ಬೆಲೆ : ರೂ. ೨-೦೦

ಮುದ್ರಕರು :

ಬಿ. ಎಂ. ಶ್ರೀಕಂಠಯ್ಯ ಅಚ್ಚುಕೂಟ
ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ
ಬೆಂಗಳೂರು-೧೮.

ಪ್ರಸ್ತಾವನೆ

೧೯೧೫ರಲ್ಲಿ ಸ್ಥಾಪಿತವಾದ ಕನ್ನಡ ಸಾಹಿತ್ಯ ಪರಿಷತ್ತು ಕಾಲಾನುಕ್ರಮದಲ್ಲಿ ಅನೇಕ ವಿದ್ವತ್ಪೂರ್ಣ ಗ್ರಂಥಗಳನ್ನು ಪ್ರಕಟಿಸಿ, ಕನ್ನಡಿಗರ ಮನ್ನಣೆಗೆ ಪಾತ್ರವಾಗಿದೆ. ೧೯೭೦ರಲ್ಲಿ ಪರಿಷತ್ತು ರೂಪಿಸಿದ ತ್ರೈವಾರ್ಷಿಕ ಯೋಜನೆಯ ಪ್ರಕಾರ, ಮೂರು ವರ್ಷಗಳ ಅವಧಿಯಲ್ಲಿ ಒಂದು ನೂರು ಪುಸ್ತಕಗಳನ್ನು ಪ್ರಕಟಿಸುವ ನಿರ್ಧಾರವನ್ನು ಅದು ಕೈಗೊಂಡಿತು. ಅದರಂತೆ ೧೯೭೧ರಿಂದ ೭೩ರವರೆಗಿನ ಮೂರು ವರ್ಷದ ಅವಧಿಯಲ್ಲಿ ಶಾಸ್ತ್ರ, ಸಾಹಿತ್ಯ, ಕಲೆ, ವಿಜ್ಞಾನ, ಇತ್ಯಾದಿ ವಿಷಯಗಳಿಗೆ ಸಂಬಂಧ ಪಟ್ಟಂತೆ ಒಂದು ನೂರು ಪುಸ್ತಕಗಳನ್ನು ಹೊರತರಲಾಯಿತು. ಈ ಗ್ರಂಥಗಳು ವಿಷಯವೈವಿಧ್ಯದಿಂದ ಕೂಡಿವೆ; ಪುಸ್ತಕಗಳ ಬೆಲೆ ಸಾಮಾನ್ಯರ ಕೈಗೆ ಎಟಕುವಂತಿದೆ; ವಿದ್ವಾಂಸರ ಮತ್ತು ಜನಸಾಮಾನ್ಯರ ಮೆಚ್ಚುಗೆಗೆ ಪಾತ್ರವಾಗಿವೆ.

ತ್ರೈವಾರ್ಷಿಕ ಯೋಜನೆಯನ್ನು ಯಶಸ್ವಿಯಾಗಿ ಕಾರ್ಯಗತ ಮಾಡಿದ ಕನ್ನಡ ಸಾಹಿತ್ಯ ಪರಿಷತ್ತು ಕನ್ನಡ ನಾಡು, ನುಡಿ ಮತ್ತು ಸಂಸ್ಕೃತಿಯ ಪುರೋಭಿವೃದ್ಧಿಗಾಗಿ ಈಗ ಪಂಚವಾರ್ಷಿಕ ಯೋಜನೆಯನ್ನು ರೂಪಿಸಿ, ಈ ಯೋಜನೆಗೆ ಸಾರ್ವಜನಿಕರ ಮತ್ತು ಸರ್ಕಾರದ ಪ್ರೋತ್ಸಾಹವನ್ನೂ ಬೆಂಬಲವನ್ನೂ ಪಡೆದಿದೆ. ೧೯೭೩ರಲ್ಲಿ ಆರಂಭಿಸಲಾದ ಪಂಚವಾರ್ಷಿಕ ಯೋಜನೆಯ ಪ್ರಕಾರ, ೫ ವರ್ಷಗಳ ಅವಧಿಯಲ್ಲಿ ಒಂದು ನೂರಐವತ್ತು ಪುಸ್ತಕಗಳನ್ನು ಹೊರತರಬೇಕಾಗಿದೆ. ಕೆಲವು ಪ್ರಾಚೀನ ಗ್ರಂಥಗಳನ್ನು ಕನ್ನಡಕ್ಕೆ ಅನುವಾದಿಸಿ ಮೂಲಪಾಠದೊಡನೆ ಪ್ರಕಟಿಸುವುದು, ಕೆಲವು ಅಮೂಲ್ಯ ಗ್ರಂಥಗಳ ಪುನರ್ಮುದ್ರಣ, ಭಾಷಾಂತರ ಕೃತಿಗ. ಮುದ್ರಣ, ಜನ ಸಾಮಾನ್ಯರಿಗಾಗಿ ಶಾಸ್ತ್ರ, ಸಾಹಿತ್ಯ, ಕಲೆ, ವಿಜ್ಞಾನ, ಜನಪದ ಸಾಹಿತ್ಯ ಮೊದಲಾದ ನಾನಾ ವಿಷಯಗಳನ್ನು ಕುರಿತ ಗ್ರಂಥಗಳ ಪ್ರಕಟಣೆ—ಇವು ಪರಿಷತ್ತಿನ ಪಂಚ ವಾರ್ಷಿಕ ಯೋಜನೆಯ ಪ್ರಕಟಣೆಯ ಉದ್ದೇಶಗಳಲ್ಲಿ ಅಡಕವಾಗಿವೆ. ಅಲ್ಲದೆ ಸಂಗೀತ, ಚಿತ್ರಕಲೆ, ಗಮಕ ಮುಂತಾದ ವಿಷಯಗಳನ್ನು ಸಾಮಾನ್ಯರಿಗೆ ಪರಿಚಯ ಮಾಡಿ ಕೊಡುವ ಪುಸ್ತಕಗಳನ್ನೂ ವಿಜ್ಞಾನದ ವಿವಿಧ ಅಂಶಗಳನ್ನು ವಿವರಿಸುವ ಜನಪ್ರಿಯ ಹೊತ್ತಿಗೆಗಳನ್ನೂ ಪ್ರಕಟಿಸಲಾಗುವುದು. ಮಕ್ಕಳ ಸಾಹಿತ್ಯ, ಮಹಿಳೆಯರಿಗೆ

ಉಪಯುಕ್ತವಾದ ಗ್ರಂಥಗಳು—ಇವುಗಳ ಪ್ರಕಟಣೆಯೂ ಈ ಉದ್ದೇಶದ ಅಂಗವಾಗಿದೆ. ಕನ್ನಡ ಬಾರದವರು ಕನ್ನಡ ಕಲಿಯಲು ಸಹಾಯಕವಾಗಬಹುದಾದ ಸ್ವಯಂಬೋಧಿನಿಗಳೂ ಈ ಯೋಜನೆಯಲ್ಲಿ ಸೇರಿಕೊಂಡಿವೆ.

ಕನ್ನಡ ಜನತೆಗೆ ಉತ್ತಮ ಸಾಹಿತ್ಯವನ್ನು ಸುಲಭ ಬೆಲೆಯಲ್ಲಿ ಒದಗಿಸಬೇಕೆಂಬ ಪರಿಷತ್ತಿನ ಆಶಯವನ್ನು ಗಮನಿಸಿ, ಕರ್ನಾಟಕ ರಾಜ್ಯ ಸರ್ಕಾರ ಪರಿಷತ್ತಿಗೆ ಆರ್ಥಿಕ ಸಹಾಯವನ್ನು ನೀಡಲು ಮುಂದೆ ಬಂದಿರುವುದರಿಂದ, ಪರಿಷತ್ತಿನ ಪ್ರಕಟಣ ಕಾರ್ಯಕ್ಕೆ ವಿಶೇಷ ಪ್ರೋತ್ಸಾಹ ದೊರೆತಂತಾಗಿದೆ. ಅದೇ ರೀತಿ ನಾಡಿನ ವಿದ್ವಾಂಸರು ಪರಿಷತ್ತಿನ ಮೇಲೆ ಅಭಿಮಾನವಿಟ್ಟು, ಪರಿಷತ್ತಿನ ಪ್ರಕಟಣ ಕಾರ್ಯದಲ್ಲಿ ಆಸಕ್ತಿವಹಿಸಿ, ಎಲ್ಲ ರೀತಿಯಿಂದಲೂ ತಮ್ಮ ಸಹಕಾರ ನೀಡುತ್ತಿದ್ದಾರೆ. ಪರಿಷತ್ತಿನ ಗ್ರಂಥ ಪ್ರಕಟಣಾ ಸಮಿತಿಯ ಪ್ರಧಾನ ಸಂಪಾದಕರಾದ ಡಾ|| ರಂ. ಶ್ರೀ. ಮುಗಳಿಯವರೂ ಇತರ ಸದಸ್ಯರೂ ತುಂಬ ಉತ್ಸಾಹದಿಂದ ಕಾರ್ಯ ನಿರ್ವಹಿಸುತ್ತಿದ್ದಾರೆ. ಈ ಎಲ್ಲ ಮಹನೀಯರ ಪ್ರೋತ್ಸಾಹ ಮತ್ತು ಬೆಂಬಲದಿಂದ ಕನ್ನಡ ಸಾಹಿತ್ಯ ಪರಿಷತ್ತು ತನ್ನ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಮೇಲಿನ ಉದ್ದೇಶಗಳನ್ನು ಪೂರೈಸುತ್ತದೆಂಬ ನಂಬಿಕೆ ನನಗಿದೆ. ಈ ಕಾರ್ಯದಲ್ಲಿ ಸಹಕಾರ ನೀಡುತ್ತಿರುವ ಈ ಎಲ್ಲ ಮಹನೀಯರಿಗೂ ರಾಜ್ಯ ಸರ್ಕಾರಕ್ಕೂ ಪರಿಷತ್ತು ಆಭಾರಿಯಾಗಿದೆ.

ಪರಿಷತ್ತಿನ ಪ್ರಕಟಣೆಗಳ ಲಾಭವನ್ನು ಎಲ್ಲ ಕನ್ನಡಿಗರೂ ಪಡೆದು ನಾಡುನುಡಿಯ ಸೇವೆಯಲ್ಲಿ ಭಾಗಿಗಳಾಗಬೇಕೆಂದು ಈ ಮೂಲಕ ಪ್ರಾರ್ಥಿಸುತ್ತೇನೆ.

ದೇಶಹಳ್ಳಿ ಜಿ. ನಾರಾಯಣ
ಅಧ್ಯಕ್ಷ
ಕನ್ನಡ ಸಾಹಿತ್ಯ ಪರಿಷತ್ತು

ಬೆಂಗಳೂರು
೧೩-೧೧-೧೯೭೬

ಮುನ್ನುಡಿ

ದಿವಂಗತ ಬೆನಗಲ್ ರಾಮರಾವ್ ಅವರು ಸುಪ್ರಸಿದ್ಧ ಮನೆತನವೊಂದರಲ್ಲಿ ಜನಿಸಿ ಕನ್ನಡನಾಡಿನ ಸುಪುತ್ರರು ಎನಿಸಿಕೊಂಡ ಮಹಾನುಭಾವರು. ಇವರು ಮದ ರಾಸಿನಲ್ಲಿ—ಎಂದರೆ ಆಗ್ಗೆ ಕನ್ನಡ ಪ್ರದೇಶದಿಂದ ದೂರವಿದ್ದ ಮದರಾಸಿನಲ್ಲಿ—ತಮ್ಮ ವೃತ್ತಿಜೀವನವನ್ನು ನಡಸಿದರೂ ಕಾಯಿದೇ ಶಾಸ್ತ್ರದ ವ್ಯಾಸಂಗವನ್ನು ಮಾಡಿದ್ದರೂ ಕನ್ನಡ ನಾಡು ನುಡಿಯ ಸೇವೆಗಾಗಿ ಮನಸ್ಸನ್ನು ತಂದವರು. ಕರ್ನಾಟಕದ ಏಕೀಕರಣ, ಕನ್ನಡ ಸಾಹಿತ್ಯ ಪರಿಷತ್ತಿನ ಹುಟ್ಟು, ಬೆಳವಣಿಗೆ, ಕನ್ನಡ ಅಭ್ಯಾಸ ಇವುಗಳೇ ಅವರ ಜೀವನಧ್ಯೇಯವಾಗಿತ್ತು. 'ಕನ್ನಡವನುಳಿದೆನಗೆ ಅನ್ಯ ಜೀವನವಿಲ್ಲ' ಎಂದು ಮನಸಾ ತಿಳಿದು ಅದರಂತೆ ಆಚರಿಸಿದ ನಿಷ್ಠಾವಂತ ಕನ್ನಡಿಗರು. ಅವರ ಜೀವನ ಚರಿತ್ರೆಯನ್ನೂ ಮತ್ತು ಅವರು ಕನ್ನಡಕ್ಕೆ ಸಲ್ಲಿಸಿದ ಸೇವೆಯನ್ನೂ ಶ್ರೀ ಶೇಖರ ಇಡ್ಯ ಅವರು ಈ ಸಣ್ಣ ಪುಸ್ತಕದಲ್ಲಿ ಮಾಡಿಕೊಟ್ಟಿದ್ದಾರೆ. ದಿವಂಗತ ರಾಮರಾಯರ ನಿಷ್ಕಾಮ ಸೇವೆ ಯಾವ ಆತ್ಮಚರಿತ್ರೆಯಲ್ಲಾಗಲಿ ಅವರ ದಿನಚರಿಯಲ್ಲಾಗಲಿ ವಿವರವಾಗಿ ದೊರಕುವುದಿಲ್ಲ. ಅವರ ಜೀವನದ ಬಗ್ಗೆ ವಿಷಯ ವನ್ನು ಸಂಗ್ರಹಿಸುವುದೇ ಕಷ್ಟ. ಇಂಥ ಕಷ್ಟತರವಾದ ಕೆಲಸವನ್ನು ಕೈಕೊಂಡು ಶ್ರೀ ಶೇಖರ ಇಡ್ಯ ಅವರು ಶ್ರಮವಹಿಸಿ ವಿಷಯಗಳನ್ನು ಸಂಗ್ರಹಿಸಿ ಈ ಪುಸ್ತಕ ವನ್ನು ಪರಿಷತ್ತಿಗಾಗಿ ಬರೆದುಕೊಟ್ಟಿದ್ದಾರೆ. ಅವರು ಸುರತ್ಕಲ್ಲಿನ ಗೋವಿಂದದಾಸ್ ಕಾಲೇಜಿನಲ್ಲಿ ಕನ್ನಡದ ಉಪಾಧ್ಯಾಯರಾಗಿದ್ದಾರೆ. ಸರಳವಾದ ಭಾಷೆಯಲ್ಲಿ ಸುಲಭ ವಾಗಿ ಎಲ್ಲರಿಗೂ ತಿಳಿಯುವಂತೆ ಬಿ. ರಾಮರಾಯರ ಜೀವನ ಚಿತ್ರವನ್ನು ರೂಪಿಸಿದ್ದಾರೆ. ಅವರಿಗೆ ಪರಿಷತ್ತಿನ ಪರವಾಗಿ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ರಂ. ಶ್ರೀ. ಮುಗಳಿ
ಪ್ರಧಾನ ಸಂಪಾದಕರು,
ಗ್ರಂಥ ಪ್ರಕಟಣ ಸಲಹಾ ಸಮಿತಿ.

ಬೆಂಗಳೂರು
೧–೧೦–೧೯೭೬

ಮೊದಲ ಮಾತು

ಬೆನಗಲ್ ರಾಮರಾಯರು ಹುಟ್ಟಿ ಈ ವರ್ಷದ ಏಪ್ರಿಲ್ ತಿಂಗಳಿಗೆ ಒಂದು ಶತಮಾನವಾಯಿತು. ಕನ್ನಡ ಸೇವೆಯನ್ನು ಶ್ರದ್ಧೆಯಿಂದ ನಡೆಸಿ ಕನ್ನಡ ನಾಡನ್ನು ಕಟ್ಟಿದವರಲ್ಲಿ ಮುಖ್ಯರಾಗಿದ್ದ ಅವರ ಜನ್ಮಶತಾಬ್ದಿಯ ಈ ಸಂದರ್ಭದಲ್ಲಿ ರಾಮರಾಯರ ಜೀವನ ಮತ್ತು ಕಾರ್ಯದ ಸ್ಥೂಲ ಪರಿಚಯವನ್ನು ಓದುಗರ ಕೈಯಲ್ಲಿರಿಸಲು ಸಂತೋಷವಾಗುತ್ತಿದೆ. ರಾಮರಾಯರ ಒಡನಾಡಿಗಳಲ್ಲಿ ಅನೇಕರು ಕಣ್ಮರೆಯಾಗಿದ್ದಾರೆ. ರಾಮರಾಯರು ನಮ್ಮನ್ನು ಅಗಲಿ ಸುಮಾರು ಮೂರೂವರೆ ದಶಕಗಳ ಬಳಿಕ ಮೊತ್ತಮೊದಲಿಗೆ ಈ ಪರಿಚಯ ಸಿದ್ಧವಾಗಿದೆ. ಅವರು ಜತನದಿಂದ ಬರೆದಿರಿಸಿದ ದಿನಚರಿಗಳು ಅಲಭ್ಯವಾಗಿವೆ. ಹೀಗಾಗಿ ಈ ಪರಿಚಯವು ಸಾಕಷ್ಟು ಸಮಗ್ರವಾಗಿದೆ ಯೆನ್ನುವಂತಿಲ್ಲ.

'ಗುಣ ಪಕ್ಷಪಾತಿ', ದ. ಕೃ. ಭಾರದ್ವಾಜ, ತಿ. ತಾ. ಶರ್ಮ ಮತ್ತು ಪಾನ್ಯಂ ಸುಂದರ ಶಾಸ್ತ್ರಿಯವರ ಪ್ರಕಟಿತ ಲೇಖನಗಳು ರಾಮರಾಯರನ್ನು ಕುರಿತು ಉಪಯುಕ್ತ ಮಾಹಿತಿಯನ್ನು ಒದಗಿಸಿವೆ. ರಾಮರಾಯರ ಪತ್ನಿಯವರಾದ ರತ್ನಾಬಾಯಿ ಮತ್ತು ಸುಪುತ್ರ ಭಾಸ್ಕರರಾಯರು ಈ ಕಾರ್ಯದಲ್ಲಿ ನೆರವಿತ್ತಿದ್ದಾರೆ. ರಾಮರಾಯರ ಇನ್ನೊಬ್ಬ ಸುಪುತ್ರರಾದ ಬೆನಗಲ್ ನಾಗೇಶರಾಯರ ಸಹಕಾರವು ಬಲು ದೊಡ್ಡದು. ಪಡುಕೋಣೆ ರಮಾನಂದ ರಾಯರು ತಮ್ಮ ಸಂಬಂಧಿಯವರಾದ ರಾಮರಾಯರನ್ನು ಕುರಿತು ಬರೆದ ಪತ್ರಗಳು ಆತ್ಮೀಯವಾಗಿವೆ. ಕಲಾಮಂದಿರದ ಅ. ನ. ಸುಬ್ಬರಾಯರು, ಪ್ರಾ|| ಮರಿಯಪ್ಪ ಭಟ್, ಮಾ. ನಾ. ಚೌಡಪ್ಪ, ಡಾ|| ಎ. ಎಸ್. ಕೆದಿಲಾಯರು ರಾಮರಾಯರ ಜೀವನದ ವಿವರಗಳನ್ನು ಪೂರೈಸಿದ್ದಾರೆ. ಡಾ|| ಶ್ರೀನಿವಾಸ ಹಾವನೂರರು ರಾಮರಾಯರ ಹಾಗೂ ಅವರ ಸಮಕಾಲೀನರ ಬಗ್ಗೆ ತಜ್ಞರು. ಈ ಬರವಣಿಗೆಯನ್ನು ಅವರು ಆಮೂಲಾಗ್ರವಾಗಿ ಪರಿಶೋಧಿಸಿ ಬೆಲೆಬಾಳುವ ವಿವರಗಳನ್ನು ಒದಗಿಸಿದ್ದಾರೆ. ಭಾಷೆ ಮತ್ತು ನಿರೂಪಣೆಯು

ಸುಧಾರಿಸುವಂತೆ ಮಾರ್ಗದರ್ಶನವು ವಿದ್ವಾನ್ ರಾಮಚಂದ್ರ ಉಚ್ಚಿಲರಿಂದ ದೊರಕಿದೆ. ನನ್ನ ಸಹೋದ್ಯೋಗಿಗಳಲ್ಲಿ ಹಲವರು ಈ ಬರಹವನ್ನು ಓದಿ ಸೂಕ್ತ ಸಲಹೆ, ಅಭಿಪ್ರಾಯ ಕೊಟ್ಟು ಸಹಕರಿಸಿದ್ದಾರೆ. ವಿದ್ಯಾವರ್ಧಕ ಸಂಘದ ಅಧ್ಯಕ್ಷರಾದ ಕೆ. ಎಸ್. ದೇಶಪಾಂಡೆಯವರು 'ವಾಗ್ಭೂಷಣ'ದಲ್ಲಿ ಪ್ರಕಟವಾದ ಲೇಖನದ ಪ್ರತಿಯನ್ನು ಕಳುಹಿಸಿ ಉಪಕರಿಸಿದ್ದಾರೆ. ಉಡುಪಿಯ ಎಂ. ಜಿ. ಎಂ. ಕಾಲೇಜಿನಲ್ಲಿರುವ ರಾಷ್ಟ್ರಕವಿ ಗೋವಿಂದ ಪೈ ಸ್ಮಾರಕ ಸಂಶೋಧನ ಕೇಂದ್ರದ ನಿರ್ದೇಶಕ ಕು. ಶಿ. ಹರಿದಾಸ ಭಟ್ಟರು ಆ ಕೇಂದ್ರದಲ್ಲಿದ್ದ 'ಸುವಾಸಿನಿ'ಯ ಸಂಚಿಕೆಗಳನ್ನು ಒದಗಿಸಿದ್ದಾರೆ. ರಾಮರಾಯರ ಜೀವನವೃತ್ತವನ್ನು ಬರೆಯುವ ಅವಕಾಶ ಕಲ್ಪಿಸಿದ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಜಿ. ನಾರಾಯಣ, ಡಾ|| ರಂ. ಶ್ರೀ. ಮುಗಳಿ, ವೆಂಕಟೇಶ ಸಾಂಗ್ಲಿ ಇವರುಗಳ ವಿಶ್ವಾಸ, ಆದರಗಳಿಂದ ಈ ಕೃತಿ ಸಿದ್ಧವಾಗಿದೆ. ಈ ಎಲ್ಲ ಮಹನೀಯರ ಉಪಕಾರವನ್ನು ನಾನು ಸಂತೋಷದಿಂದ ನೆನಸುತ್ತೇನೆ. ರಾಮರಾಯರ ಜೀವನ ಮತ್ತು ಕಾರ್ಯವನ್ನು ಕುರಿತಾದ ಇನ್ನಷ್ಟು ವಿವರ ಬಲ್ಲವರು ಈ ಲೇಖಕನಿಗೆ ತಿಳಿಸಿದರೆ ಉಪಕಾರವಾಗುತ್ತದೆ.

ಬೆನಗಲ್ ರಾಮರಾಯರ ಸ್ಮರಣೆಯು ಕನ್ನಡಿಗರ ಹೃದಯದಲ್ಲಿ ನೆಲೆಗೊಳ್ಳುವಂತೆ ಅವರ ಜನ್ಮ ಶತಾಬ್ದಿಯು ನಾಡಿನ ಬಹು ಎಡೆಗಳಲ್ಲಿ ಆಚರಿಸಲ್ಪಡಲೆಂದು ಹಾರೈಕೆ.

ಶೇಖರ ಇಡ್ಯ.

ವಿಷಯ ಸೂಚಿ

ಜೀವನ

ಹಲವು ರಾಜಕೀಯ ಆಡಳಿತಗಳಲ್ಲಿ ಹರಿದು ಹಂಚಿ ಹೋಗಿದ್ದ ಕನ್ನಡ ಪ್ರದೇಶಗಳು ಅನೇಕ ಹಿರಿಯರ ಪ್ರಯತ್ನ, ತ್ಯಾಗಗಳ ಫಲವಾಗಿ ಸುಮಾರು ಎರಡು ದಶಕಗಳ ಹಿಂದೆ ಏಕೀಕರಣಗೊಂಡುವು. ಇದೀಗ ಕರ್ನಾಟಕವೆಂದು ನಾಮಕರಣವಾಗಿ ಕನ್ನಡ ಜನಕೋಟಿಯು ಸಂತಸದಿಂದ ಹಿಗ್ಗಿದೆ. ನಾಡಿನ ಏಕೀಕರಣಕ್ಕಾಗಿ ಕಷ್ಟನಷ್ಟಗಳನ್ನನುಭವಿಸಿದ ಮಹನೀಯರನ್ನು ಈ ಶುಭ ಸಂದರ್ಭದಲ್ಲಿ ಕೃತಜ್ಞತೆಯಿಂದ ನೆನಸಿಕೊಳ್ಳುವುದು ನಮ್ಮ ಕರ್ತವ್ಯ. ಹೀಗೆ ಸ್ಮರಿಸಲೇಬೇಕಾದವರಲ್ಲಿ ಬೆನಗಲ್ ರಾಮರಾಯರು ನಿಸ್ಸಂದೇಹವಾಗಿ ಒಬ್ಬರಾಗಿದ್ದಾರೆ.

ನಮ್ಮ ನುಡಿ ಹಾಗೂ ನಾಡಿನ ಉತ್ಕರ್ಷಕ್ಕಾಗಿ ಬೆನಗಲ್ ರಾಮರಾಯರಿಗಿಂತಲೂ ಹಿಂದೆ ಕೆಲವು ಮಹನೀಯರು ದುಡಿದಿದ್ದರು. ಅವರಂತೆಯೇ ದುಡಿದ ರಾಮರಾಯರಲ್ಲಿ ಹೆಚ್ಚಳವೊಂದು ಎದ್ದುಕಾಣುವಂತಹದ್ದು. ಭವ್ಯ ಇತಿಹಾಸ, ಉತ್ತಮ ಸಂಸ್ಕೃತಿ, ಸಾಕಷ್ಟು ಶ್ರೀಮಂತ ಸಾಹಿತ್ಯ ಸಂಪತ್ತುಗಳನ್ನು ಪಡೆದಿದ್ದೂ ಕನ್ನಡಿಗರು ಬ್ರಿಟಿಷ್ ಆಳ್ವಿಕೆಯ ಹೊತ್ತಿನಲ್ಲಿ ಜೀವನ್ಮೃತಾವಸ್ಥೆಗೆ ಬಂದಿದ್ದರು. ಕನ್ನಡ ನೆಲದಲ್ಲಿ ಅನ್ಯಭಾಷೆಗಳಿಗೆ ಅಗ್ರಪೂಜೆ, ಕನ್ನಡಕ್ಕೆ ಮಾತ್ರ ತೊತ್ತಿನ ಸ್ಥಾನ. ಪರಿಸ್ಥಿತಿ ಹೀಗಿದ್ದರೂ ಕನ್ನಡ ಪ್ರದೇಶಗಳು ಒಂದಾಗಬೇಕೆಂಬ ವಿಚಾರ ಯಾರಲ್ಲೂ ಮೂಡಿದಂತಿಲ್ಲ. ಉತ್ತರ ಕರ್ನಾಟಕದಲ್ಲಿ ಡೆಪ್ಯೂಟಿ ಚೆನ್ನಬಸಪ್ಪ, ವೆಂಕಟರಂಗೋ ಕಟ್ಟಿ, ರಾಮಚಂದ್ರ ಹನುಮಂತ ದೇಶಪಾಂಡೆ ಮುಂತಾದವರು ಕನ್ನಡ ಹಿತಚಿಂತನೆಗಾಗಿ ಶ್ರಮಿಸುತ್ತಿದ್ದರು.

ಒಂದೇ ಆಡಳಿತದೊಳಗೆ ಕನ್ನಡಿಗರು ಬಾಳುವುದರಿಂದ ಕನ್ನಡಿಗರ ಸರ್ವಾಂಗೀಣ ಅಭ್ಯುದಯ ಸಾಧ್ಯವೆಂದು ಮನಗಂಡು ಹಾಗೆ ಸಾರಿದವರು ರಾಮರಾಯರು. ಈ ಮಹತ್ವದ ಸತ್ಯವನ್ನು ಅವರು ೧೯೦೭ ರಲ್ಲಿ ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘದ ಆಶ್ರಯದಲ್ಲಿ ಜರುಗಿದ ಸಭೆಯಲ್ಲಿ ಸಾರಿದರು. ಈ ಐತಿಹಾಸಿಕವಾದ ಸಂದರ್ಭವನ್ನು ದಿ|| ಆಲೂರು ವೆಂಕಟರಾಯರು.[1] ೧೯೭೯ ರಲ್ಲಿ ಕನ್ನಡ ಸಾಹಿತ್ಯ ಪರಿಷನ್ಮಂದಿರದಲ್ಲಿ ಜರುಗಿದ ನಾಡಹಬ್ಬದ ಸಮಾರಂಭದಲ್ಲಿ ಹೇಳಿದ ಮಾತುಗಳು ಇಂತಿವೆ :

" ೧೯೦೫ ರ ಹಿಂದೆ ಉತ್ತರಕರ್ನಾಟಕವು ಶೋಚನೀಯ ಸ್ಥಿತಿಯಲ್ಲಿತ್ತು. ಒಟ್ಟಿನ ಮೇಲೆ ಯಾವ ಕನ್ನಡಿಗನಿಗೂ ನಮ್ಮ ಕನ್ನಡ ನಾಡು ಎಂದರೇನು ಎಂಬ ಕರ್ನಾಟಕ ಭಾವನೆಯೂ ಇರಲಿಲ್ಲ. ಅಖಿಲ ಕರ್ನಾಟಕದ ಭಾವನೆಯನ್ನು ಮೊತ್ತ ಮೊದಲಿಗೆ ಹರಡಿದ ಕೀರ್ತಿಯು ಮಂಗಳೂರಿನವರಿಗೆ ಸಲ್ಲುತ್ತದೆ. ಹೇಗೆಂದರೆ ಮಂಗಳೂರಿನವರಾದ ಶ್ರೀ ಬೆನಗಲ್ ರಾಮರಾಯರು ೧೯೦೭ ರಲ್ಲಿ ಧಾರವಾಡಕ್ಕೆ ಬಂದು ಅಲ್ಲಿನ ಕರ್ನಾಟಕ ವಿದ್ಯಾವರ್ಧಕ ಸಂಘದಲ್ಲಿ ಭಾಷಣ ಮಾಡಿದಾಗ ಅವರು ಏಕೀಕರಣದ ಬೀಜವನ್ನು ನೆಟ್ಟರು. ಈ ಮಾತನ್ನು ಮುದವೀಡು ಕೃಷ್ಣರಾಯರು ತಮ್ಮ ಎರಡು ಲೇಖನಗಳಲ್ಲಿ ಸ್ಮರಿಸಿದ್ದಾರೆ.[2] ಇತ್ತೀಚೆಗೆ ಬಂದ ಏಕೀಕರಣದ ಕುರಿತಾದ ಗ್ರಂಥಗಳಲ್ಲಿ ಬೆನಗಲ್ ರಾಮರಾಯರ ಪ್ರಥಮ ಹೇಳಿಕೆ ಹಾಗೂ ಆ ಬಳಿಕದ ಅವರ ಪ್ರಯತ್ನಗಳ ಉಲ್ಲೇಖಗಳಿಲ್ಲದಿರುವುದು ನ್ಯಾಯವಲ್ಲ.

' ಕನ್ನಡವನುಳಿದೆನಗೆ ಅನ್ಯ ಜೀವನವಿಲ್ಲ ' ವೆಂಬುದು ರಾಮರಾಯರ ಪ್ರಸಿದ್ಧವಾದ ಕವನದ ಆರಂಭದ ಸೊಲ್ಲು. ಈ ತತ್ವವು ಅವರ ಬಾಳಿನ ಮೂಲಸೂತ್ರಗಳಲ್ಲೊಂದಾಗಿತ್ತು. ತಮ್ಮ ಸಂಪತ್ತು, ಶಕ್ತಿ, ಸಮಯ, ಬುದ್ಧಿಗಳನ್ನೆಲ್ಲವನ್ನೂ ಅವರು ಕರ್ನಾಟಕ ಪ್ರಾಂತ್ಯವು ರೂಪಿತವಾಗಲು ವಿನಿಯೋಗಿಸಿದರು. ಈ ಕವಿಯ ಪಾಂಡಿತ್ಯವು ಹಿರಿದಾಗಿತ್ತು. ಅವರ ಸಾಹಿತ್ಯ ಸೃಷ್ಟಿ,

---

1. 'ಕನ್ನಡ ನುಡಿ', ನವಂಬರ್, ೧೯೭೯
2. 'ಕಂಠೀರವ' ದಸರಾ ಸಂಚಿಕೆ, ೧೯೭೮, ಪುಟ ೨೭ ಮತ್ತು 'ನವಯುಗ' ಮಕರಸಂಕ್ರಾಂತಿ ಸಂಚಿಕೆ, ೧೯೭೪, ಪುಟ ೯೧.

ಸಾಹಿತ್ಯ ಸೇವೆಗಳೂ ಕಿರಿದಾಗಿರಲಿಲ್ಲ. ಕನ್ನಡ ಸೇವೆಯಲ್ಲೇ ಬಾಳಿನ ಸಾರ್ಥಕತೆಯನ್ನು ಕಂಡುಕೊಂಡ ರಾಮರಾಯರ ಬಾಳಿನ ಕತೆಯು ನಮ್ಮನ್ನು ಪುಲಕಿತರನ್ನಾಗಿ ಮಾಡುವ ಸ್ಫೂರ್ತಿಯ ಸೆಲೆಯಾಗಿದೆ.

ವ್ಯಕ್ತಿಯ ಭಾವೀಜೀವನದ ರೂಪರೇಷೆಗಳು ಬಹುಮಟ್ಟಿಗೆ ಆತನ ಬಾಲ್ಯದಲ್ಲೇ ನಿರ್ಧಾರಗೊಳ್ಳುತ್ತವೆ. ಬಾಲ್ಯ ಜೀವನದ ಸೂತ್ರಗಳಿಂದ ರಾಮರಾಯರ ಜೀವನವನ್ನು ಅರಿಯೋಣವೆಂದರೆ ಬೇಕಾಗುವ ಮಾಹಿತಿಗಳು ಈಗ ಸಿಗುತ್ತಿಲ್ಲ. ಬಾಲ್ಯದಿಂದಲೂ ಅವರ ಆತ್ಮೀಯರಾಗಿದ್ದ ಪಂಜೆಯವರೂ ಉಳ್ಳಾಲರೂ ನಮ್ಮನ್ನು ಅಗಲಿದ್ದಾರೆ. ರಾಮರಾಯರ ಎಳವೆಯ ಕುರಿತು ಬರೆದಿರಿಸಿದ ವಿವರಗಳು ಅತ್ಯಲ್ಪ. ಹೀಗಾಗಿ ದೊರಕುವ ಅತ್ಯಲ್ಪ ವಿವರಗಳಿಂದಲೇ ನಮ್ಮ ಕುತೂಹಲ ಆಸಕ್ತಿಗಳು ತಣಿಯಬೇಕು.

ಬೆನಗಲ್ ಮನೆತನವು ದಕ್ಷಿಣ ಕನ್ನಡ ಜಿಲ್ಲೆಯ ಹೆಸರಾಂತ ಚಿತ್ರಾಪುರ ಸಾರಸ್ವತ ಕುಟುಂಬಗಳಲ್ಲೊಂದು.[1] ಪಾಶ್ಚಾತ್ಯ ವೈದ್ಯಕೀಯವನ್ನು ಈ ಜಿಲ್ಲೆಯಲ್ಲಿ ಕಲಿತವರಲ್ಲಿ ಮೊತ್ತಮೊದಲಿಗರೆಂದರೆ ಬೆನಗಲ್ ರಾಘವೇಂದ್ರಯ್ಯನವರು. ಮಂಗಳೂರಿನಲ್ಲಿ ಹುಟ್ಟಿ ಬೆಳೆದ ಅವರು ತಮ್ಮ ವೃತ್ತಿ ನೈಪುಣ್ಯದಿಂದ ಮದರಾಸು ಸರಕಾರದ ಮೇಲಿನ ಹಂತದ ಅಧಿಕಾರಿಗಳಾಗಿ ಹೆಸರನ್ನು ಗಳಿಸಿದವರು. ಶ್ರೀಯುತರ ಸುಪುತ್ರರೆಲ್ಲರೂ ರಾಷ್ಟ್ರಜೀವನದಲ್ಲಿ ಮಹತ್ವದ ಸೇವೆಯನ್ನು ಸಲ್ಲಿಸಿ ಗಣ್ಯರಾಗಿ ನಮ್ಮ ನಾಡಿಗೆ ಸತ್ಕೀರ್ತಿಯನ್ನು ತಂದಿದ್ದಾರೆ. ಭಾರತದ ಸಂವಿಧಾನ ರಚನೆಯಲ್ಲಿ ಅಗ್ರಪಾತ್ರವನ್ನು ವಹಿಸಿದ ಹಾಗೂ ಅಂತರರಾಷ್ಟ್ರೀಯ ನ್ಯಾಯಾಲಯದ ನ್ಯಾಯಾಧೀಶರಾಗಿದ್ದ ಸರ್ ಬಿ.ಎನ್. ರಾವ್, ಐ. ಸಿ. ಎಸ್ ಮತ್ತು ಇನ್ನೊಬ್ಬ ಸುಪ್ರಸಿದ್ಧ ಐ. ಸಿ. ಎಸ್. ಅಧಿಕಾರಿ ಬೆನಗಲ್ ರಾಘವೇಂದ್ರಯ್ಯನವರ ಮಕ್ಕಳು. ಇವರ ಸೋದರರಾದ ಸಂಜೀವ ರಾಯರು ಕೇಂಬ್ರಿಜ್ ಟ್ರೈಪೊ. ಗಳಿಸಿ ಉತ್ತರ ಭಾರತದಲ್ಲಿ ಶಿಕ್ಷಣ ಇಲಾಖೆಯಲ್ಲಿ ಕೀರ್ತಿಪಡೆದವರು. ಬೆನಗಲ್ ಸಹೋದರರಲ್ಲಿ ಇನ್ನೊಬ್ಬರೆಂದರೆ ಖ್ಯಾತಪತ್ರಕರ್ತ ಹಾಗೂ ಪಾರ್ಲಿಮೆಂಟ್ ಸದಸ್ಯರಾಗಿದ್ದ ಶಿವರಾಯರು. ಈ ಮನೆತನವು ಮಂಗಳೂರಲ್ಲಿ ನೆಲಸಿತ್ತು.

1. ಬೆನಗಲ್ ಮನೆತನದವರು ಕೆಳದಿ ಸಂಸ್ಥಾನದಲ್ಲಿ ಅಧಿಕಾರಿಗಳಾಗಿದ್ದರು.

ಸಾಹಿತ್ಯಲೋಕದಲ್ಲಿ ಬೆಳಗಿದ ರಾಮರಾಯರು ಮುಲ್ಕಿ ಮುನಸೀಫ ಕೋರ್ಟಿನ ಪ್ರಧಾನ ಗುಮಾಸ್ತರಾಗಿದ್ದ ಬೆನಗಲ್ ಸುಬ್ಬರಾಯರ (೧೮೨೨–೧೮೮೫) ಮೊಮ್ಮಗ, ಸುಬ್ಬರಾಯರ ಪುತ್ರ ಮಂಜುನಾಥಯ್ಯನ ಹಿರಿಯ ಮಗ. ವೃತ್ತಿಯಲ್ಲಿ ವಕೀಲರಾಗಿದ್ದ ಮಂಜುನಾಥಯ್ಯನವರು ಪುತ್ತೂರಲ್ಲಿ ನೆಲಸಿದ್ದರು. ಮಂಜುನಾಥಯ್ಯ ಮತ್ತು ಅವರ ಮಡದಿ ರಮಾಬಾಯಿಯವರ ಚೊಚ್ಚಲ ಕೂಸಾಗಿ ೧೮೭೬ ನೆಯ ಇಸವಿ ಏಪ್ರಿಲ್ ಎರಡರಂದು ರಾಮ ರಾಯನ ಜನನವಾಯಿತು. ಈ ಜನನವು ರಮಾಬಾಯಿಯ ತವರ್ಮನೆಯಿದ್ದ ಮಂಗಳೂರಲ್ಲಿ ರಾಮನವಮಿಯಂದು. ಆದಕಾರಣ ಮಗುವಿಗೆ ರಾಮನೆಂಬ ಹೆಸರನ್ನಿಡಲಾಯಿತಂತೆ.

ಬಾಲಕನಾದ ರಾಮನನ್ನು ಹೆತ್ತವರೀರ್ವರೂ ವಿದ್ಯಾವಂತರೂ ಸುಸಂಸ್ಕೃತರೂ ಕಲಾಪ್ರೇಮಿಗಳೂ ಆಗಿದ್ದರು. ಮಂಜುನಾಥಯ್ಯನವರಿಗೆ ನಾಟಕ, ಸಂಗೀತ ಸಾಹಿತ್ಯ–ಇವುಗಳಲ್ಲಿ ಅಭಿರುಚಿ, ಆಸಕ್ತಿಗಳಿದ್ದುವು. ಅವರು 'ಲಾವಣ್ಯಮಯೀ' ಎಂಬ ನಾಟಕವನ್ನು ರಚಿಸಿ ಪ್ರಕಟಿಸಿದ್ದಾರೆಂದು ಹೇಳ ಲಾಗಿದೆ. ತಂದೆಯಿಂದ ದೊರಕಿದ ಈ ಕಲಾರಸಿಕತೆಯು ರಾಮರಾಯನ ಬಾಳಿನಲ್ಲಿ ವಿಪುಲವಾಗಿ ಬೆಳೆದು ಬೆಳಗಿದ್ದನ್ನು ಆತನ ಮುಂದಿನ ಜೀವನದಲ್ಲಿ ನಾವು ಕಾಣಬಹುದಾಗಿದೆ. ರಾಮರಾಯನ ಮಾತೆಯಾದ ರಮಾಬಾಯಿ ಕನ್ನಡ ಓದುಬರಹವನ್ನೂ ಬಲ್ಲವಳು. ಮರಾಠಿ ಭಾಷೆಯ ಪರಿಚಯವೂ ಆಕೆಗೆ ಸಾಕಷ್ಟಿತ್ತು. ತನ್ನ ತಾಯಿಯಿಂದಲೇ ರಾಮರಾಯನಿಗೆ ದೇವನಾಗರಿ ಅಕ್ಷರಾಭ್ಯಾಸವೂ, ಮರಾಠಿ ಭಾಷೆಯ ಪರಿಚಯವೂ ಆಯಿತು. ರಮಾಬಾಯಿ ಕನ್ನಡ ಮರಾಠಿಹಾಡುಗಳನ್ನು ಹಾಡುವುದರಲ್ಲೂ ಪರಿಣತರಿದ್ದರು.

ಮುಲ್ಕಿಯ ಮಿಶನ್ ಹೈಸ್ಕೂಲಿನಲ್ಲಿ ರಾಮರಾಯನ ವಿದ್ಯಾಭ್ಯಾಸದ ಆರಂಭವಾಗಿ ೧೮೮೯ ರಲ್ಲಿ ಪುತ್ತೂರಿನ ಲೋಕಲ್ ಫಂಡ್ ಮಾಧ್ಯಮಿಕ ಶಾಲೆಯಲ್ಲಿ ಮುಂದುವರಿಯಿತು. ಈ ಮಧ್ಯೆ ಮಂಗಳೂರಿನ ಗಣಪತಿ ಮಾಧ್ಯಮಿಕ ಶಾಲೆಯಲ್ಲಿ ಸ್ವಲ್ಪಕಾಲ ವಿದ್ಯಾರ್ಥಿಯಾಗುವ ಅವಕಾಶವೂ ಪ್ರಾಪ್ತವಾಗಿತ್ತು. ಅವನ ಮುಂದಿನ ಶಿಕ್ಷಣವೂ ಮಂಗಳೂರಿನ ಸರಕಾರೀ ಕಾಲೇಜಿನಲ್ಲಾಯಿತು. ಮಂಗಳೂರಿನಲ್ಲಿ ಪಂಜೆ ಮಂಗೇಶರಾಯರೂ ಉಳ್ಳಾಲ ಮಂಗೇಶರಾಯರೂ ರಾಮರಾಯನ ಗೆಳೆಯರಾಗಿ ದೊರೆತದ್ದರಿಂದ

ಸಾಹಿತ್ಯಾಸಕ್ತಿಯು ವೃದ್ಧಿಯಾಗಿರಬೇಕು. ಉಡುಪಿಯಲ್ಲಿ ಪ್ರಕಟವಾಗುತ್ತಿದ್ದ 'ಸುದರ್ಶನ' ಪತ್ರಿಕೆಗೆ ಆತನು ವಿದ್ಯಾರ್ಥಿ ದೆಸೆಯಲ್ಲೇ ಲೇಖನಗಳನ್ನು ಕಳುಹಿಸುತ್ತಿದ್ದನು. ಕನ್ನಡದ ಹಿತಚಿಂತನೆಯತ್ತ ರಾಮರಾಯನ ಲಕ್ಷ್ಯವು ಎಳೆಯ ಪ್ರಾಯದಲ್ಲೇ ಹರಿದಿತ್ತು. ಸರಕಾರೀ ಕಾಲೇಜಿನ ವಿದ್ಯಾರ್ಥಿ ದೆಸೆಯಲ್ಲೇ ಆತನು 'ಕರ್ಣಾಟಕ ವಿದ್ಯಾಭಿವರ್ಧಿನಿ' ಸಂಘವನ್ನು ಸ್ಥಾಪಿಸಿದ್ದು ಇದಕ್ಕೆ ನಿದರ್ಶನ. ಕನ್ನಡ ಅಧ್ಯಾಪಕರು ಅಸ್ವಸ್ಥರಾಗಿದ್ದಾಗ ರಾಮರಾಯನೇ 'ನಳೋಪಾಖ್ಯಾನ' ವೆಂಬ ಕಾವ್ಯವನ್ನು ತನ್ನ ಸಹಪಾಠಿಗಳಿಗೆ ಕಲಿಸಿದ್ದನು. ಕವನ ರಚಿಸುವ ಶಕ್ತಿಯೂ ಈ ಕಾಲದಲ್ಲಿ ಬೆಳೆಯುತ್ತಿತ್ತು.

ಮಂಗಳೂರಿನಲ್ಲಿ ಇಂಟರ್‌ಮಿಡಿಯೇಟ್ ಶಿಕ್ಷಣವಾದ ಬಳಿಕ ರಾಮರಾಯನು ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಮದರಾಸಿಗೆ ತೆರಳಿ ಅಲ್ಲಿ ಕ್ರಿಶ್ಚಿಯನ್ ಕಾಲೇಜಿನ ವಿದ್ಯಾರ್ಥಿಯಾದನು. ಇಂಗ್ಲಿಷ್, ಕನ್ನಡಗಳಲ್ಲದೆ ಭೂಗರ್ಭಶಾಸ್ತ್ರ (Geology) ಮತ್ತು ಜೀವಶಾಸ್ತ್ರ (Biology) ಗಳನ್ನು ಆರಿಸಿ ಆತನು ಬಿ. ಎ. ಅಭ್ಯಾಸ ನಡೆಸಿದನು. ಅಲ್ಲಿ ಕನ್ನಡ ಕಲಿಸುವವರು ಖ್ಯಾತರಾಗಿದ್ದ ಬ್ರಹ್ಮಸಿದ್ಧಾಂತಿ ಶಂಕರಶಾಸ್ತ್ರಿಯವರು. ಅವರ ನೇತೃತ್ವದಲ್ಲಿ ರಾಮರಾಯನ ಸಾಹಿತ್ಯ ಪ್ರೇಮ, ಕನ್ನಡದ ಅಭಿಮಾನ ಇನ್ನಷ್ಟು ಹೆಚ್ಚಿದವು. ರಾಮರಾಯನ ಉತ್ಸಾಹದಿಂದ 'ಕರ್ನಾಟಕ ಭಾಷಾಸಂಜೀವಿನೀ ಸಂಘ'ವು ಪುನರುಜ್ಜೀವನಗೊಂಡಿತು. ಮದರಾಸು ವಿಶ್ವವಿದ್ಯಾಲಯಕ್ಕೆ ಎರಡನೆಯವನಾಗಿ ಬಿ. ಎ. ಪರೀಕ್ಷೆಯಲ್ಲಿ ರಾಮರಾಯನು ತೇರ್ಗಡೆ ಹೊಂದಿದುದು ಆತನ ಕುಶಾಗ್ರಮತಿಗೂ ಪ್ರಯತ್ನಶೀಲಗತೆಗೂ ಸಾಕ್ಷಿ. ಇದೊಂದು ಸಣ್ಣ ಸಾಧನೆಯಲ್ಲ. ಆ ದಿನಗಳಲ್ಲಿ ದಕ್ಷಿಣ ಭಾರತಕ್ಕೆ ಒಂದೇ ವಿಶ್ವವಿದ್ಯಾಲಯವಿದ್ದುದು.

ಬಿ. ಎ. ಪರೀಕ್ಷೆಯ ಫಲಿತಾಂಶ ಪ್ರಕಟವಾಗುತ್ತಿದ್ದಂತೆಯೇ ಉದ್ಯೋಗವೊಂದು ರಾಮರಾಯನನ್ನು ಅರಸಿಕೊಂಡು ಬಂದಿತು. ಭೂಗರ್ಭಶಾಸ್ತ್ರ ಮತ್ತು ಜೀವಶಾಸ್ತ್ರಗಳಲ್ಲಿ ನಿಪುಣನಾಗಿದ್ದರೂ ಆತನು ಕನ್ನಡ ಅಧ್ಯಾಪಕನಾಗುವ ಯೋಗ ಅವನಿಗೆ ಕೂಡಿ ಬಂದಿತ್ತು. ಶಿವಶಂಕರಶಾಸ್ತ್ರಿಯ ಅನಾರೋಗ್ಯದಿಂದ ಆರು ವಾರಗಳ ರಜೆಯ ಸಂದರ್ಭದಲ್ಲಿ ರಾಮರಾಯನು ಪ್ರಸಿಡೆನ್ಸಿ ಕಾಲೇಜಿನ ತಾತ್ಕಾಲಿಕ ಕನ್ನಡ ಅಧ್ಯಾಪಕನಾಗಿ ಸೇವೆ ಸಲ್ಲಿಸುವ ಅವಕಾಶವನ್ನು ಒದಗಿಸಿತು. ಸ್ವಲ್ಪ ಕಾಲದಲ್ಲೇ ಕ್ರಿಶ್ಚಿಯನ್ ಕಾಲೇಜಿನ ಕನ್ನಡ ಪಂಡಿತರಾದ ಹಿರಿ

ಯೂರು ಲಕ್ಷ್ಮೀನರಸಿಂಹಯ್ಯನವರು ಅನಾರೋಗ್ಯದ ಕಾರಣ ಆರು ತಿಂಗಳ ಕಾಲ ರಜೆಯಲ್ಲಿದ್ದಾಗಲೂ ರಾಮರಾಯರಿಗೆ ಆ ಉದ್ಯೋಗವು ಪ್ರಾಪ್ತವಾಯಿತು. ಲಕ್ಷ್ಮೀನರಸಿಂಹಯ್ಯನವರ ನಿಧನದಿಂದಾಗಿ ರಾಮರಾಯರು ಕ್ರಿಶ್ಚಿಯನ್ ಕಾಲೇಜಿನ ಖಾಯಂ ಕನ್ನಡ ಪಂಡಿತರಾಗಿ ನೇಮಕಗೊಂಡರು. ಮುಂಬಯಿ ನಗರದಲ್ಲಿ ಎಲ್‌ಎಲ್.ಬಿ. ತರಬೇತಿಯನ್ನು ಗಳಿಸಿ ವಕೀಲರಾಗುವ ಉದ್ದೇಶವು ಅವರಲ್ಲಿ ಇತ್ತು. ಮುಂಬಯಿ ನಗರದಲ್ಲಿ ಪ್ಲೇಗಿನ ಹಾವಳಿಯಿದ್ದುದರಿಂದ ಆ ಉದ್ದೇಶವನ್ನು ಕಾರ್ಯಗತ ಮಾಡಲಿಲ್ಲ. ಬದಲಾಗಿ ಕನ್ನಡ ಮತ್ತು ತೆಲುಗು ಸಾಹಿತ್ಯಗಳನ್ನು ಐಚ್ಛಿಕ ವಿಷಯಗಳನ್ನಾಗಿ ಅಭ್ಯಸಿಸಿ ಅವರು ಎಂ.ಎ. ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದರು. ಎಂ.ಎ. ಅಂಗವಾಗಿ ರಾಮರಾಯರು ತುಂಬಾ ಶ್ರಮವಹಿಸಿ 'ಕನ್ನಡ ಸಾಹಿತ್ಯದ ನವೋದಯ' ವೆಂಬ ಪ್ರಬಂಧವನ್ನು ಸಿದ್ಧಪಡಿಸಿ ವಿಶ್ವವಿದ್ಯಾಲಯಕ್ಕೆ ಒಪ್ಪಿಸಿದ್ದರು. ಈ ಪ್ರಬಂಧಕ್ಕಾಗಿ ವಿಷಯ ಸಂಗ್ರಹ ಮಾಡಲು ರಾಮರಾಯರು ಧಾರವಾಡಕ್ಕೆ ಹೋಗಿ ವಿದ್ಯಾವರ್ಧಕ ಸಂಘದ ಕಾರ್ಯದರ್ಶಿಯವರಾಗಿದ್ದ ಆರ್. ಎಚ್. ದೇಶಪಾಂಡೆ ಮತ್ತಿತರ ವಿದ್ವಾಂಸರ ಸಹಕಾರವನ್ನು ಪಡೆದುಕೊಂಡಿದ್ದರು. ಅದೇ ತಾನೇ ಪ್ರಕಟವಾಗಿದ್ದ ಮುದ್ದಣನ ಸಾಹಿತ್ಯ ಕೃತಿಗಳನ್ನು ತಮ್ಮ ಸಮೀಕ್ಷೆಯಲ್ಲಿ ಒಳಪಡಿಸಿದುದು ಗಮನಾರ್ಹವಾದ ಸಂಗತಿ. ರಾಮರಾಯರು ಎಂ. ಎ. ಪಾಸಾದುದು ೧೯೦೦ ರಲ್ಲಿ. ಅದಕ್ಕಿಂತ ಮೊದಲು ಕನ್ನಡ ಸಾಹಿತ್ಯವನ್ನು ಆರಿಸಿಕೊಂಡು ಎಂ. ಎ. ಪಾಸಾದ ಒಬ್ಬರೇ ಒಬ್ಬರು ವ್ಯಕ್ತಿಯೆಂದರೆ ಖ್ಯಾತ ವಿದ್ವಾಂಸರಾದ ಆರ್. ನರಸಿಂಹಾಚಾರ್ಯರು. ಹೀಗಾಗಿ ರಾಮರಾಯರು ಕನ್ನಡ ಎಂ.ಎ. ಪದವೀಧರರಲ್ಲಿ ಎರಡನೆಯವರಾಗಿದ್ದಾರೆ.

ಮದರಾಸಿನಲ್ಲಿ ಆ ದಿನಗಳಲ್ಲಿ ಸಾಹಿತ್ಯ ಪ್ರೇಮವನ್ನು ಪ್ರೋತ್ಸಾಹಿಸಿದ ಹಿರಿಯರಲ್ಲಿ ಪ್ರಾಧ್ಯಾಪಕ ಸವೂರು ಮಂಗೇಶರಾಯರೆಂಬ ಗಣ್ಯ ವ್ಯಕ್ತಿ. ರಾಮರಾಯರಿಗೆ ಸವೂರು ಮಂಗೇಶರಾಯರಿಗಿಂತಲೂ ಹೆಚ್ಚಿನ ಆಪ್ತರಾಗಿದ್ದವರೆಂದರೆ ಹಟ್ಟಿಯಂಗಡಿ ನಾರಾಯಣರಾಯರು. ಇವರು ಕನ್ನಡ ಕವಿಗಳು. 'ಆಂಗ್ಲ ಕವಿತಾವಳಿ' ಎಂಬ ಅನುವಾದಿತ ಕವನಗಳ ಸಂಕಲನವನ್ನು ಬಿ. ಎಂ. ಶ್ರೀಕಂಠಯ್ಯನವರಿಗಿಂತ ಮೊದಲು ಬರೆದು ಪ್ರಕಟಿಸಿದವರು. ಅಲ್ಲದೆ ಕವಿವರ್ಯ ಮುದ್ದಣನ ಅಭಿಮಾನಿ. ನಮ್ಮ ದೇಶದ ಗಣ್ಯ ಸಮಾಜ ಸುಧಾ

ರಕರೂ ತೆಲುಗು ಸಾಹಿತ್ಯದ ಆಚಾರ್ಯಪುರುಷರೂ ಆದ ವೀರೇಶಲಿಂಗಂ ಪಂತುಲು ಆ ಕಾಲದಲ್ಲಿ ಕ್ರಿಶ್ಚಿಯನ್ ಕಾಲೇಜಿನ ಅಧ್ಯಾಪಕರಾಗಿದ್ದರು. ಅವರ ಸ್ನೇಹಲಾಭವು ರಾಮರಾಯರಿಗೆ ಲಭಿಸಿತು. ಪಂತುಲು ಅವರ ಹಲವಾರು ಕೃತಿಗಳನ್ನು ರಾಮರಾಯರು ಕನ್ನಡಕ್ಕೆ ಅನುವಾದಿಸಿದರು.

ಕ್ರಿಶ್ಚಿಯನ್ ಕಾಲೇಜಿನ ಉದ್ಯೋಗದಲ್ಲಿರುವಾಗಲೇ ಪತ್ರಿಕಾ ಸಂಪಾದನಾ ಕಾರ್ಯವನ್ನು ವಹಿಸಿಕೊಳ್ಳುವಂತೆ ಒಂದು ಆಹ್ವಾನವೂ ರಾಮರಾಯರಿಗೆ ಬಂತು. ಸಾಹಸಿಯಾದ ಬೋಳಾರ ವಿಠಲರಾಯರು ಮಂಗಳೂರಲ್ಲಿ "ಸುವಾಸಿನಿ"ಯೆಂಬ ಮಾಸಪತ್ರಿಕೆಯನ್ನು ಆರಂಭಿಸಲು ಉದ್ಯುಕ್ತರಾದರು. ಬೆನಗಲ್ ರಾಮರಾಯರೇ ಆ ಪತ್ರಿಕೆಯನ್ನು ಸಂಪಾದಿಸಲು ತಕ್ಕವರೆಂದು ಅವರನ್ನೇ ಕೇಳಿಕೊಳ್ಳಲಾಯಿತು. ಪತ್ರಿಕೆ ಮಂಗಳೂರಲ್ಲಿ, ಸಂಪಾದಕರು ಮದರಾಸಿನಲ್ಲಿ. ರಾಮರಾಯರಿಗೆ ಈ ಕ್ಷೇತ್ರದಲ್ಲಿ ಪೂರ್ವಾನುಭವವೇನೂ ಇರಲಿಲ್ಲ. ಉಡುಪಿಯ 'ಸುದರ್ಶನ' ಪತ್ರಿಕೆಯ ಲೇಖಕವರ್ಗದಲ್ಲಿ ಅವರೂ ಒಬ್ಬರಾಗಿದ್ದರಷ್ಟೇ. ರಾಮರಾಯರ ಸಂಪಾದಕತ್ವದಲ್ಲಿ 'ಸುವಾಸಿನಿ'ಯು ನಾಡಿನ ಶ್ರೇಷ್ಠ ಪತ್ರಿಕೆಗಳಲ್ಲಿ ಒಂದೆನ್ನುವಂತೆ ಮೆರೆಯಿತು. ಈ ಕಾರ್ಯದಲ್ಲಿ ಅವರ ಸ್ನೇಹಿತರುಗಳಾದ ಪಂಜೆ ಮಂಗೇಶರಾಯರ ಹಾಗೂ ಉಳ್ಳಾಲ ಮಂಗೇಶರಾಯರ ಸಕ್ರಿಯ ನೆರವಿತ್ತು.

ಮೈಸೂರಿನ ಶಿಕ್ಷಕ ತರಬೇತಿ ಕಾಲೇಜು ಅಥವಾ ನಾರ್ಮಲ್ ಸ್ಕೂಲಿನ ಕನ್ನಡ ಉಪನ್ಯಾಸಕ ಹುದ್ದೆಯು ರಾಮರಾಯರಿಗೆ ಪ್ರಾಪ್ತವಾದಾಗ ಅವರು ಮದರಾಸು ನಗರವನ್ನು ಬಿಡಬೇಕಾಯಿತು. ಕ್ರಿಶ್ಚಿಯನ್ ಕಾಲೇಜಿನ ತಮ್ಮ ಸ್ಥಾನವನ್ನು ನಂದಳಿಕೆ ಲಕ್ಷ್ಮೀನಾರಾಣಯ್ಯನವರು ತುಂಬಬೇಕೆಂಬ ಬಲವಾದ ಬಯಕೆ ರಾಮರಾಯರದ್ದಾಗಿತ್ತು. ಹುದ್ದೆ ವೇತನಗಳು ದೊಡ್ಡವುಗಳಾಗಿದ್ದರೂ ಪರವೂರು ತಮಗೆ ಪ್ರತಿಕೂಲವಾದೀತೆಂಬ ಭೀತಿಯಿಂದ ಲಕ್ಷ್ಮೀನಾರಾಯಣಯ್ಯನವರು ರಾಮರಾಯರ ಆಹ್ವಾನವನ್ನು ಸ್ವೀಕರಿಸಲಿಲ್ಲ.

ಮೈಸೂರಿನ ಉದ್ಯೋಗವು ಅಲ್ಪಾವಧಿಯದ್ದಾದರೂ, ಆ ಅವಧಿಯಲ್ಲಿ ರಾಮರಾಯರ ಅನುಭವ, ಪ್ರದೇಶ ಪರಿಚಯಗಳು ಮಹತ್ವಪೂರ್ಣವಾಗಿ ಪರಿಣಮಿಸಿವೆಯೆನ್ನಬಹುದು. ಹಲವು ವಿದ್ವಾಂಸರ ಸ್ನೇಹ, ಪರಿಚಯಗಳು ಲಭಿಸಿದುವು. ಆ ವಿದ್ವಾಂಸರಲ್ಲಿ ಎಸ್. ಜಿ. ನರಸಿಂಹಾಚಾರ್ಯರ ಗೆಳೆತನವು

ರಾಮರಾಯರಿಗೆ ಬೆಲೆಬಾಳುವಂತಹದ್ದಾಗಿ ಪರಿಣಮಿಸಿತು. ಮುದ್ದಣನ ಕುರಿತಾದ ಲೇಖನದಲ್ಲಿ ಮೈಸೂರಿನ ಅನುಭವವನ್ನು ಅವರು ನೆನಪಿಸಿದ ರೀತಿಯು ಇಂತಿದೆ : "ಮೈಸೂರಿಗೆ ಹೋದ ಕಿಂಚಿತ್ಕಾಲದಲ್ಲಿ ಆ ಪಟ್ಟಣದ ಪ್ರಮುಖರಾದ ನಾಗರಿಕರನೇಕರ ಹಾಗೂ ಕವಿಗಳಾಗಿಯೂ, ಲೇಖಕರಾಗಿಯೂ ಸಂಸ್ಕೃತದಲ್ಲಿಯೂ, ಕನ್ನಡದಲ್ಲಿಯೂ ಸುಪ್ರಸಿದ್ಧರಾದ ಎಷ್ಟೋ ಮಂದಿ ವಿದ್ವಾಂಸರುಗಳ ಸ್ನೇಹ ವಿಶ್ವಾಸಗಳು ನನಗೆ ಪ್ರಾಪ್ತವಾದುವು. ಇವರೊಳಗೆ (ತದನಂತರ, ಕಾವ್ಯಕಲಾನಿಧಿಯೆಂದು ಕರೆಯಲ್ಪಟ್ಟ) 'ಕರ್ಣಾಟಕ ಕಾವ್ಯ ಮಂಜರಿ' ಯೆಂಬ ಮಾಸಪತ್ರಿಕೆಯ ಮುಖ್ಯ ಸಂಪಾದಕರಾದ ಶ್ರೀಮಾನ್ ಎಸ್. ಜಿ. ನರಸಿಂಹಾಚಾರ್ಯರು ಗಣ್ಯರಾದ ಒಬ್ಬರಾಗಿದ್ದರು. ಈ ದೊಡ್ಡ ಮನುಷ್ಯರು ಆಗ ಮೈಸೂರು ಓರಿಯಂಟಲ್ ಲೈಬ್ರೆರಿಯಲ್ಲಿ ಲೈಬ್ರೇರಿಯನ್ ಉದ್ಯೋಗದಲ್ಲಿದ್ದರು. ಅಗಾಧವಾದ ಪಾಂಡಿತ್ಯದೊಂದಿಗೆ ಸೌಜನ್ಯವೂ ಸರಳತೆಯೂ ಸತತೋದ್ಯೋಗ ಪ್ರೀತಿಯೂ, ನಿಸ್ಸೀಮವಾದ ಭಾಷಾ ಪ್ರೇಮವೂ ಮಾತ್ಸರ್ಯಕ್ಕೆಡೆಗುಡದ ಸರ್ವಸಮದೃಷ್ಟಿಯೂ ಇವರಲ್ಲಿ ನಿಸರ್ಗವಾಗಿ ಕಂಡುಬರುತ್ತಿದ್ದವು. ಆಗತಾನೇ ಸಾಹಿತ್ಯ ಕ್ಷೇತ್ರದಲ್ಲಿ ಅಂಬೆಗಾಲಿಡತೊಡಗಿದ್ದ ನನಗೆ ಇವರು ಹಲವು ವಿಧವಾಗಿ ಕೊಟ್ಟ ಪ್ರೋತ್ಸಾಹವನ್ನು........"[1]

ಸುಮಾರು ಎರಡು ವರ್ಷಗಳ ಕಾಲ ಮಾತ್ರ ರಾಮರಾಯರು ಮೈಸೂರಿನಲ್ಲಿ ಉದ್ಯೋಗದಲ್ಲಿದ್ದರು. "ಕೆಲಕೆಲವು ತೊಂದರೆಗಳ ದೆಶೆಯಿಂದ ಮೈಸೂರಿನ ನನ್ನ ವಾಸವು ನಾನು ಮೊದಲು ಊಹಿಸಿದಷ್ಟು ಸುಖಕರವಾಗಲೀ ಪ್ರೋತ್ಸಾಹಕರವಾಗಲೀ ಆಗಲಿಲ್ಲ. ಆ ಪಟ್ಟಣದಲ್ಲಿದ್ದ ಎರಡು ವರ್ಷಗಳಲ್ಲಿ ಆರು ತಿಂಗಳಿಗೂ ಹೆಚ್ಚಾಗಿ ರಜಾ ಪಡೆದು ದೂರದೇಶದಲ್ಲಿರಬೇಕಾಯಿತು. ೧೯೦೨ ನೇ ಅಕ್ಟೋಬರ್ ತಿಂಗಳಿಂದ ಮೈಸೂರಿನ ಕೆಲಸವನ್ನು ಪೂರ್ತಿಯಾಗಿ ಬಿಟ್ಟು ಬೊಂಬಾಯಲ್ಲಿ ಕೆಲಸವನ್ನು ಕೈಕೊಂಡೆನು. ನಾನು 'ಸುವಾಸಿನಿ'ಯ ಸಂಪಾದಕನಾಗಿರುವುದು ನನ್ನ ಮೇಲಾಧಿಕಾರಿಗಳಿಗೆ ಇಷ್ಟವಿಲ್ಲದೆ ಹೋದುದರಿಂದ ಮೈಸೂರಿನೊಂದಿಗೆ 'ಸುವಾಸಿನಿ'ಯ ಸಂಬಂಧವನ್ನು ಬಿಟ್ಟುಬಿಡಬೇಕಾ

---

1 ಪ್ರಬುದ್ಧ ಕರ್ನಾಟಕ, ಸಂ. ೭/ಸಂ. ೨.

ಯಿತು. ಮಹಾಜನರುಗಳ ಪ್ರೋತ್ಸಾಹವು ಕಡಿಮೆಯಾದುದರಿಂದ ಆ ಪತ್ರಿಕೆಯೂ ಕ್ಷಿಪ್ರದೊಳಗಾಗಿ ನಿಂತುಹೋಯಿತು... ....[1]

ಸಂಗೀತ, ನಾಟಕ, ಸಾಹಿತ್ಯ, ಜ್ಞಾನ ಮುಂತಾದವುಗಳಲ್ಲಿ ಗಾಢವಾದ ಆಸಕ್ತಿಯನ್ನು ಬೆಳೆಸಿಕೊಂಡಿದ್ದ ರಾಮರಾಯರಿಗೆ ಮುಂಬಯಿಯಲ್ಲಿ ವಿಪುಲವಾದ ಅವಕಾಶ ದೊರಕಿತೆನ್ನಲು ಅಡ್ಡಿಯಿಲ್ಲ. ಇದಲ್ಲದೆ ವಿದ್ವಾಂಸರೂ ರಸಗ್ರಾಹಿಗಳಾದ ಸ್ನೇಹಿತರೂ ರಾಮರಾಯರಿಗೆ ಲಭಿಸಿದರು. ಆಂಗ್ಲ ಹಾಗೂ ಮರಾಠಿ ಪತ್ರಿಕೆಗಳಿಗೆ, ಸಾಹಿತ್ಯ ಕೃತಿಗಳಿಗೇನೂ ಕಡಿಮೆಯಿರಲಿಲ್ಲ. ಸುಸಂಸ್ಕೃತನಾದ ವ್ಯಕ್ತಿಗೆ ಇನ್ನೇನು ಬೇಕು ? ಈ ಹೊತ್ತಿನಲ್ಲಿ ಹಿಂದೆ ಮದರಾಸಿನಲ್ಲಿದ್ದ ಹಟ್ಟಿಯಂಗಡಿ ನಾರಾಯಣರಾಯರು ಮುಂಬಯಿಯಲ್ಲಿ ನೆಲಸಿದ್ದರು. ಈರ್ವರ ಮನೆಗಳೂ ಉಪನಗರವಾದ ಬಾಂದ್ರಾದಲ್ಲಿದ್ದುದರಿಂದ ಸ್ನೇಹ ಸಂಪರ್ಕಗಳು ವೃದ್ಧಿಸಿದವು.

ಮುಂಬಯಿಯಲ್ಲಿ ಸರಕಾರದ ಭಾಷಾಂತರ ಇಲಾಖೆಯಲ್ಲಿ ಅಧಿಕಾರಿಗಳಾಗಿ ನೇಮಕಗೊಳ್ಳುವ ಪೂರ್ವದಲ್ಲಿ ರಾಮರಾಯರ ವಿವಾಹವು ಕುಂದಾಪುರದಲ್ಲಿ ಜರುಗಿತ್ತು. ಹೊಸಂಗಡಿ ಮನೆತನದ ಅಂಬಾಬಾಯಿ ಯಾನೆ ಸೀತಾಬಾಯಿಯೇ ರಾಮರಾಯರ ವಧು. ಕವಿವರ್ಯ ನಂದಳಿಕೆಯವರಿಗೂ ರಾಮರಾಯರು ಮದುವೆಯ ಕರೆಯನ್ನಿತ್ತಿದ್ದರು.. ಅನಾರೋಗ್ಯದಿಂದ ಬಳಲುತ್ತಿದ್ದ ನಂದಳಿಕೆಯವರು ಈ ಮದುವೆಯಲ್ಲಿ ಹಾಜರಿರುವುದು ಅಸಾಧ್ಯವಾಗಿತ್ತು.

ಕಾಯದೇ ಶಾಸ್ತ್ರದಲ್ಲಿ ಆಸಕ್ತರಿದ್ದ ಕಾರಣ ರಾಮರಾಯರು ೧೯೦೪ರಲ್ಲಿ ಎಲ್ ಎಲ್.ಬಿ. ಪದವಿಯನ್ನು ಗಳಿಸಿಕೊಂಡರು. ಮುಂಬಯಿ ಜೀವನದಲ್ಲಿ ರಾಮರಾಯರನ್ನು ಪ್ರಬಲವಾದ ಯಾತನೆಗೆ ಒಳಪಡಿಸಿದ ಸಂಕಷ್ಟವೆಂದರೆ ಮಡದಿಯಾದ ಅಂಬಾಬಾಯಿಯ ಕಠಿಣವಾದ ಕಾಯಿಲೆ. ಆಕೆಯು ವಂಶಪರಂಪರೆಯಿಂದ ಕ್ಷಯರೋಗವನ್ನು ಪಡೆದಿದ್ದಳು. ಈ ರೋಗನಿವಾರಣೆಗಾಗಿ ರಾಮರಾಯರು ಆಯುರ್ವೇದ ಚಿಕಿತ್ಸೆಯನ್ನು ಕಲಿತರು. ಅವರ ಮತ್ತು ಮಂಜುನಾಥಯ್ಯನವರ ಶತಪ್ರಯತ್ನಗಳು ಫಲಕಾರಿಯಾಗಲಿಲ್ಲ. ೧೯೦೯ ರ ಫೆಬ್ರುವರಿ ಎರಡರಂದು ಅಂಬಾಬಾಯಿಯು ತನ್ನವರನ್ನು ಅಗಲಿ

1. ಪ್ರಬುದ್ಧ ಕರ್ನಾಟಕ, ಸಂ. ೭/ ಸಂ. ೨

ಪರಲೋಕಕ್ಕೆ ತೆರಳಿದಳು. ಈ ಘಟನೆಯಿಂದ ರಾಮರಾಯರು ಅಪಾರವಾದ ಶೋಕಕ್ಕೆ ಒಳಗಾದರು. ತಮ್ಮ ಸಹಧರ್ಮಿಣಿಯನ್ನು ಉಳಿಸಲು ಅಸಮರ್ಥವಾದ ಆಯುರ್ವೇದ ವಿದ್ಯೆಯಲ್ಲಿ ಅವರಿಗೆ ವೈರಾಗ್ಯವುಂಟಾಗಿ ಅದನ್ನು ಅವರು ಬಿಟ್ಟುಬಿಟ್ಟರು.

ಈ ಮದುವೆಯಲ್ಲಿ ರಾಮರಾಯರಿಗೆ ಸಂತತಿಯು ಇರಲಿಲ್ಲ. ಮರುಮದುವೆಯ ಪ್ರಸ್ತಾಪಗಳು ಬಂದಾಗ ಅವರು ಆಸಕ್ತಿಯನ್ನು ವಹಿಸಲಿಲ್ಲ. ಆದರೆ ಹೆತ್ತವರು ಸುಮ್ಮನಿರುತ್ತಾರೆಯೇ ? ಹಿರಿಯರಲ್ಲಿ ಅಪಾರ ಪ್ರೀತಿ, ಭಕ್ತಿಯಿರಿಸಿದ ರಾಮರಾಯರು ಅವರ ಬಲವಂತಕ್ಕೆ ಮಣಿಯಬೇಕಾಯಿತು. ಹಟ್ಟಿಯಂಗಡಿ ಕುಟುಂಬಕ್ಕೆ ಸೇರಿದ ರತ್ನಾಬಾಯಿಯ ಜನ್ಮಕುಂಡಲಿಯನ್ನು ಪರಿಶೀಲಿಸಿ ಮೆಚ್ಚಿಕೊಂಡ ಮಂಜುನಾಥಯ್ಯನವರ ಅಪೇಕ್ಷೆಯಂತೆ ಆ ಕನ್ಯೆಯನ್ನು ರಾಮರಾಯರು ಮದುವೆಯಾದರು. ರತ್ನಾಬಾಯಿಯು ಬೆನಗಲ್ ಕುಟುಂಬಕ್ಕೆ ಭಾಗ್ಯವನ್ನು ತಂದು ಬೆಳಗಿಸುವಳೆಂದು ಮಂಜುನಾಥಯ್ಯನವರ ತೀರ್ಮಾನ.

ಜನ್ಮಕುಂಡಲಿಯಲ್ಲಿ ಸೂಚಿತವಾದಂತೆ ರತ್ನಾಬಾಯಿಯ ಪ್ರವೇಶವು ರಾಮರಾಯರ ಬಾಳಿನಲ್ಲಿ ಎಲ್ಲಾ ತರದ ಭಾಗ್ಯಗಳನ್ನು ತಂದಿತು. ಮದುವೆಯಾದ ಎರಡೇ ತಿಂಗಳಲ್ಲಿ ರಾಮರಾಯರಿಗೆ ಮೊದಲಿಗಿಂತ ಮುಮ್ಮಡಿ ವೇತನದ ಉದ್ಯೋಗ ಪ್ರಾಪ್ತವಾಯಿತು. ಅದೆಂದರೆ ಮದರಾಸಿನಲ್ಲಿ ಸಹಾಯಕ ಭಾಷಾಂತರಕಾರನಾಗಿ ನೇಮಕ; ಅತ್ಯಲ್ಪಕಾಲದಲ್ಲೇ ಸರಕಾರದ ಪ್ರಧಾನ ಭಾಷಾಂತರಕಾರರಾಗಿ ಬಡತಿ. ಸದ್ಗುಣಗಳಿಗೆ ತವರ್ಮನೆಯಂತಿದ್ದ ರತ್ನಾಬಾಯಿ ರಾಮರಾಯರ ಜೀವನದಲ್ಲಿ ಸಂತೋಷನೆಮ್ಮದಿಗಳನ್ನು ಒದಗಿಸಿದಳು.

ಮದರಾಸಿನಲ್ಲಿ ರಾಮರಾಯರು ನೆಲಸಿದ್ದು ಕನ್ನಡ ಗೌರವ ಮತ್ತು ಹಿತರಕ್ಷಣೆಗಾಗಿಯೇ ಎಂಬಂತಾಯಿತು. ಜೀವನ ನಿರ್ವಹಣೆಗಾಗಿ ಉದ್ಯೋಗವೊಂದು ಬೇಕು. ಈ ಮೂಲಕ ಕನ್ನಡ ಸೇವೆಯನ್ನು ಮುಂದುವರಿಸುವುದು ಅವರಿಗೆ ಮುಖ್ಯವಾಯಿತು. ಭೋಗ, ಭಾಗ್ಯ, ಅಧಿಕಾರ ಚಲಾವಣೆಗಳಲ್ಲಿ ರಾಮರಾಯರಿಗೆ ಆಸಕ್ತಿಯಿರಲಿಲ್ಲ. ಕನ್ನಡ ಸೇವೆ, ಕಲಾರಾಧನೆ, ಮತ್ತು ಆತ್ಮಕಲ್ಯಾಣ ಇವೆಲ್ಲಕ್ಕೂ ಹೊಸ ಹುದ್ದೆಯು ಅನುಕೂಲಕರವಾಯಿತು.

ರಾಮರಾಯರಿಗೆ ದೊರೆಕಿದ ಪ್ರಧಾನ ಭಾಷಾಂತರಕಾರ ಹುದ್ದೆಯು ಆ

ಇಲಾಖೆಯ ರಾಜ್ಯಮಟ್ಟದ ಪ್ರಮುಖ ಅಧಿಕಾರ ಸ್ಥಾನ. ತಮಿಳು, ತೆಲುಗು, ಮಲಯಾಳಂ ಭಾಷಾಂತರಕಾರರೆಲ್ಲರೂ ರಾಮರಾಯರ ಕೈಕೆಳಗಿದ್ದರು. ತಮ್ಮ ಕಾರ್ಯದಕ್ಷತೆ ಮತ್ತು ಸದ್ಗುಣಗಳಿಂದ ಅವರು ಎಲ್ಲರಿಂದ ಗೌರವ, ಆದರ ವಿಶ್ವಾಸಗಳನ್ನು ಪಡೆದರು. ಅವರ ಸ್ಥಾನಮಾನ, ಸ್ನೇಹಿತವರ್ಗ, ಕನ್ನಡಸೇವೆ, ಗಳಿಕೆ ಎಲ್ಲವೂ ಮೇಲ್ಮುಖವಾಗಿ ಮುಂದುವರಿಯುತ್ತಾ ಹೋಯಿತು. ರಾಮರಾಯರು ಕರ್ತೃತ್ವಶಕ್ತಿಗೆ ವಿಪುಲವಾದ ಅವಕಾಶವು ಒದಗಿ ಅವರ ಭಾಗ್ಯವು ಕನ್ನಡದ ಭಾಗ್ಯವಾಗಿ ಪರಿಣಮಿಸಿತು. ಬಂಗಾಲಿಯನ್ನು ಕಲಿತು ಆ ಭಾಷೆಯಿಂದ ಹಲವು ಕೃತಿಗಳನ್ನು ಅವರು ಕನ್ನಡಕ್ಕೆ ಅನುವಾದಿಸಿದರು. ಹಲವು ಸಂಸ್ಕೃತ ನಾಟಕಗಳನ್ನೂ ಇದೇ ಅವಧಿಯಲ್ಲಿ ರಾಮರಾಯರು ಕನ್ನಡಕ್ಕೆ ತರ್ಜುಮೆ ಮಾಡಿದರು. ಕನ್ನಡದ ಹಿತಚಿಂತನೆಯಲ್ಲಿ ಅವರಿಗೆ ಗಾಢವಾದ ಆಸಕ್ತಿಯಿದ್ದುದರಿಂದಲೇ ಮದರಾಸಿನಿಂದ ಬಹುದೂರವಿದ್ದ ಧಾರವಾಡದ ವಿದ್ಯಾವರ್ಧಕ ಸಂಘದೊಂದಿಗೆ ಅವರು ಸಂಪರ್ಕವನ್ನು ಹಿಂದಿನಂತೆಯೇ ಇರಿಸಿಕೊಂಡಿದ್ದರು. ಸಂಘದ ಅನೇಕ ಸಭೆಗಳಲ್ಲಿ ರಾಮರಾಯರು ಭಾಗವಹಿಸುತ್ತಿದ್ದರಲ್ಲದೆ ಸಂಘದ ಪತ್ರಿಕೆಯಾದ 'ವಾಗ್ಭೂಷಣ'ದ ಸಹಸಂಪಾದಕರಾಗಿಯೂ ಸೇವೆಸಲ್ಲಿಸಿದರು. ಕನ್ನಡ ಸಾಹಿತ್ಯ ಪರಿಷತ್ತಿನ ನಿರ್ಮಾಣಕ್ಕಾಗಿ ೧೯೧೫ ರಲ್ಲಿ ಬೆಂಗಳೂರಿನಲ್ಲಿ ಜರುಗಿದ ಅಧಿವೇಶನದಲ್ಲಿ ಭಾಗವಹಿಸಿದ ಹಿರಿಯ ಕನ್ನಡಿಗರಲ್ಲಿ ರಾಮರಾಯರೂ ಒಬ್ಬರೆಂಬುದು ಮಹತ್ವದ ಸಂಗತಿ. ಮುಂದೆ ಕನ್ನಡ ಸಾಹಿತ್ಯ ಪರಿಷತ್ತು ಜರಗಿಸಿದ ಕಾರ್ಯಕ್ರಮಗಳಲ್ಲಿ ರಾಮರಾಯರು ಸಕ್ರಿಯವಾಗಿ ಭಾಗವಹಿಸುತ್ತಿದ್ದರು. ಪರಿಷತ್ತಿನ ವಿವಿಧ ಸಮಿತಿಗಳಲ್ಲಿ ಅವರಿಗೆ ಸ್ಥಾನವಿರುತ್ತಿತ್ತು. ಮದರಾಸಿನಲ್ಲಿ ನಡೆಯುತ್ತಿದ್ದ ಕನ್ನಡ ಚಟುವಟಿಕೆಗಳಲ್ಲಿ ಅವರ ಪಾತ್ರವು ಪ್ರಧಾನವಾಗಿರುತ್ತಿತ್ತು. ಅಲ್ಲಿನ ಕರ್ನಾಟಕ ಸಭೆಯ ಕಾರ್ಯದರ್ಶಿಯಾಗಿ ಅವರು ಕೆಲವು ವರ್ಷಗಳ ಕಾಲ ಸೇವೆ ಸಲ್ಲಿಸಿದರು.

ರಾಮರಾಯರ ಮದರಾಸಿನ ನಿವಾಸದಲ್ಲಿ ಅವರ ಹೆತ್ತವರು, ಸೋದರ, ಸೋದರಿಯರು ಬಂದು ನೆಲಸಿ ಸಂಸಾರವು ತುಂಬಿಕೊಂಡಿತು. ತಂದೆ ತಾಯಂದಿರ ಸೇವೆಯಲ್ಲಿ ಅವರು ಧನ್ಯತೆಯನ್ನು ಅನುಭವಿಸಿದರು. ಸೋದರ ಸೋದರಿಯರ ಪಾಲನೆ, ಶಿಕ್ಷಣ, ಮದುವೆ ಮುಂತಾದ ಹೊಣೆಗಳನ್ನು ರಾಮ

ರಾಯರು ಸಂತೋಷದಿಂದ ವಹಿಸಿಕೊಂಡರು. ರಾಮರಾಯರ ಆರು ಮಂದಿ ಸೋದರಿಯರಿಗೂ ಮದರಾಸಿನಲ್ಲಿರುವಾಗಲೇ ಯೋಗ್ಯರೀತಿಯಲ್ಲಿ ವಿವಾಹ ಏರ್ಪಾಡಾಗಿತ್ತು. ಹಿರಿಯ ಸೋದರಿ ಗಿರಿಜಾಬಾಯಿಯವರು ಪ್ರಾಧ್ಯಾಪಕ ಎಚ್. ನಾರಾಯಣರಾಯರನ್ನು ಮದುವೆಯಾಗಿದ್ದರು. ನಾರಾಯಣ ರಾಯರು ಭೂಗೋಲ ಶಾಸ್ತ್ರದಲ್ಲಿ ಭಾರತದಲ್ಲೇ ಖ್ಯಾತರಿದ್ದರು. ಅವರು 'ಸುವಾ ಸಿನಿ' ಪತ್ರಿಕೆಯಲ್ಲೂ ಅನೇಕ ಲೇಖನಗಳನ್ನು ಪ್ರಕಟಿಸಿದ್ದರು. ಆ ಲೇಖನಗಳು 'ಭೂಮಿಶಾಸ್ತ್ರ' ವೆಂದು ಬಾಸೆಲ್ ಮಿಶನ್ ಸಂಸ್ಥೆಯಿಂದ ೧೯೦೨ ರಲ್ಲಿ ಪ್ರಕಟವಾಯಿತು. ರಾಮರಾಯರ ಇನ್ನೊಬ್ಬ ಭಾವನೆಂಟ ಪಂಜೆ ಮಂಗೇಶ ರಾಯರು. ಪಂಜೆಯವರ ಸಾಹಿತ್ಯ ಸೇವೆಯು ಪ್ರಸಿದ್ಧವೇ ಇದೆ. ಮಂಗೇಶ ರಾಯರು ರಾಮರಾಯರು ಬಾಲ್ಯದ ಸ್ನೇಹಿತರೂ ಹೌದು. ಅವರೀರ್ವರೂ 'ಸುವಾಸಿನಿ' ಪತ್ರಿಕೆಯ ಸಂಪಾದನ ಕಾರ್ಯದಲ್ಲಿ ಜೊತೆಯಾಗಿ ದುಡಿದಿರುವು ದನ್ನು ಈ ಮೊದಲೇ ನೆನಸಲಾಗಿದೆ.

ರಾಮರಾಯರ ಯಾವತ್ತೂ ಕಾರ್ಯಗಳಲ್ಲಿ ಅವರ ತಂದೆಯವರ ಸಂಪೂರ್ಣ ಬೆಂಬಲ, ನೆರವುಗಳಿರುತ್ತಿದುವು. ತಮ್ಮ ಮಗನಿಗೆ ಉತ್ತಮ ವರಮಾನವಿದ್ದರೂ ಮಂಜುನಾಥಯ್ಯನವರು ಉದ್ಯೋಗರಹಿತ ವಿಶ್ರಾಂತ ಜೀವನ ನಡೆಸಲು ಇಷ್ಟಪಡಲಿಲ್ಲ. ಮದರಾಸಿನ ವೆಪರಿಯೆಂಬಲ್ಲಿ ಆಯುರ್ವೇದೀ ಔಷಧಿಗಳನ್ನು ತಯಾರು ಮಾಡುವ ಹಾಗೂ ಮಾರಾಟ ಮಾಡುವ ಬಿ. ಎಂ. ನಾಥ್ ಮತ್ತು ಸಂಸ್ಥೆಯನ್ನು ಸ್ಥಾಪಿಸಿದರು. ಈ ಸಂಸ್ಥೆಯು ಕನ್ನಡ ಪುಸ್ತಕ ಗಳನ್ನು ಪ್ರಕಟಿಸುವ ಹಾಗೂ ಮಾರಾಟ ಮಾಡುವ ಕಾರ್ಯವನ್ನು ಮಾಡು ತ್ತಿತ್ತು. ಧಾರವಾಡದಲ್ಲಿ ಜರಗಿದ ಸಾಹಿತ್ಯ ಸಮ್ಮೇಳನದಲ್ಲಿ ಕರ್ನಾಟಕದ ಭೂಪಟವು ಪ್ರಕಟವಾಗಬೇಕೆಂಬ ನಿರ್ಧಾರವಾಗಿತ್ತು. ಆದರೆ ಆ ನಿರ್ಧಾರ ವನ್ನು ಯಾರೂ ಕಾರ್ಯರೂಪಕ್ಕೆ ತಂದಿರಲಿಲ್ಲ. ಮಂಜುನಾಥಯ್ಯನವರು ಮತ್ತು ರಾಮರಾಯರು ಈ ಕಾರ್ಯವನ್ನು ಮಾಡಿ ಸೇವೆಯನ್ನು ಸಲ್ಲಿಸಿದರು.

ಸಹೃದಯ ಕಲಾಪ್ರೇಮಿ, ಕಲಾವಿದರ ಅಭಿಮಾನಿ ಮತ್ತು ಸ್ನೇಹ ಶೀಲರಾದ ರಾಮರಾಯರಿಗೆ ಮದರಾಸಿನಲ್ಲಿ ಗೆಳೆಯರ ಕೊರತೆ ಆಗಲಿಲ್ಲ. ಪಾನ್ಯಂ ಸುಂದರ ಶಾಸ್ತ್ರಿಯೆಂಬ ವಿದ್ವಾಂಸರು ಅವರ ಪ್ರಿಯ ಸ್ನೇಹಿತರೂ ನಿಕಟವರ್ತಿಗಳೂ ಆದರು. ಮದರಾಸಿನ ಪ್ರಾಚ್ಯ ಹಸ್ತಪ್ರತಿ ಸಂಗ್ರಹಾಲಯದ

ಉಪಗ್ರಂಥಪಾಲರಾಗಿದ್ದರು. ಸಂಸ್ಕೃತ ಕನ್ನಡ ಭಾಷೆಗಳೆರಡರಲ್ಲೂ ಘನ ವಿದ್ವಾಂಸರು. ವಿದ್ವತ್ಪ್ರೇಮ ಮತ್ತು ಕನ್ನಡ ಅಭಿಮಾನ ಇವೇ ಶಾಸ್ತ್ರಿಯವರನ್ನೂ ರಾಮರಾಯರನ್ನೂ ಪರಸ್ಪರ ಆಕರ್ಷಿಸಿರಬೇಕು. ಸುಂದರ ಶಾಸ್ತ್ರಿಯವರಿಂದಾಗಿ ರಾಮರಾಯರ ಸಂಸ್ಕೃತ ಜ್ಞಾನವು ಇನ್ನಷ್ಟು ಹೆಚ್ಚಾಯಿತು. ಶಾಸ್ತ್ರಿಯವರನ್ನು ಮೆಚ್ಚಿಕೊಂಡ ಅವರು ತಮ್ಮ ಬಂಗಲೆಯ ಆವರಣದಲ್ಲೇ ಶಾಸ್ತ್ರಿಯವರಿಗಾಗಿ ವಸತಿಯನ್ನು ಏರ್ಪಡಿಸಿದರು. ರಾಮರಾಯರ ಮನೆದೇವರಿಗೆ ಶಾಸ್ತ್ರಿಯವ ರಿಂದಲೇ ನಿತ್ಯಪೂಜೆ ಸಲ್ಲುವಷ್ಟು ನಿಕಟರಾದರು. ಇವರೀರ್ವರೂ ನಿತ್ಯ ಸಂಜೆಯ ಹೊತ್ತು ಸಾಹಿತ್ಯ ಸಲ್ಲಾಪ, ವಿಚಾರ ವಿನಿಮಯಗಳಲ್ಲಿ ನಿರತ ರಾಗುತ್ತಿದ್ದರು. ಈ ಆತ್ಮೀಯ ಸ್ನೇಹದಿಂದ ಕನ್ನಡ ಸಾಹಿತ್ಯಕ್ಕೆ ಲಾಭ ವಾಗಿರುವುದನ್ನು ಇಲ್ಲಿ ನೆನವರಿಸಬಹುದಾಗಿದೆ. ಪ್ರಾಚ್ಯ ಹಸ್ತಪ್ರತಿಗಳ ಸಂಗ್ರಹಾಲಯದಲ್ಲಿ ಅವಿತಿದ್ದ ಕರ್ನಾಟಕ ಇತಿಹಾಸಕ್ಕೆ ಸಂಬಂಧಿಸಿದ ಅನೇಕ ದಾಖಲೆಗಳು ಬೆಳಕಿಗೆ ಬಂದವು. 'ಶಿವತತ್ವರತ್ನಾಕರ' ವೆಂಬ ಕನ್ನಡಿಗನಿಂದ ಸಂಸ್ಕೃತದಲ್ಲಿ ರಚಿತವಾದ ವಿಶ್ವಕೋಶವನ್ನು ಸಂಪಾದಿಸಿ ಪ್ರಕಟಗೊಳಿಸಿದುದೂ ಈ ಸ್ನೇಹದ ಫಲವೆನ್ನಬಹುದು. ಕನ್ನಡ ಸಾಹಿತ್ಯಾ ಭ್ಯಾಸಿಗಳಿಗೆ ಪ್ರಯೋಜನಕಾರಿಯಾದ "ಪುರಾಣನಾಮ ಚೂಡಾಮಣಿ"ಯು ರಾಮರಾಯರ ಹಾಗೂ ಶಾಸ್ತ್ರಿಯವರ ಜಂಟಿಕಾರ್ಯವಾಗಿದೆ.

ನಾಟಕ ಕಲೆಯಲ್ಲಿ ರಾಮರಾಯರ ಆಸಕ್ತಿಯು ಅನುಪಮ. ಅವರನ್ನು ಬಲ್ಲವರೆಲ್ಲರೂ ಅವರ ನಾಟಕಕಲೆಯ ಪ್ರೇಮವನ್ನು ಶ್ಲಾಘಿಸುವವರೇ. ಕನ್ನಡ ನುಡಿಯು ಈ ಬಗ್ಗೆ ಬರೆದ ಮಾತುಗಳು (೧೪-೫-೧೯೪೩) ಇಂತಿವೆ: "ವಿಶ್ವವಿದ್ಯಾಲಯಗಳಲ್ಲಿ ವಿದ್ಯಾಭ್ಯಾಸ ಮಾಡಿದವರು ನಾಟಕಗಳಲ್ಲಿ ಭಾಗವಹಿ ಸುತ್ತಿದ್ದುದು ಹೊಸತು. ಆದಕಾರಣ ದಿವಂಗತರಾದ ನಾಟಕ ಶಿರೋಮಣಿ ಶ್ರೀ ಎ. ವಿ. ವರದಾಚಾರ್ಯರವರೂ ಬೆನಗಲ್ ರಾಮರಾಯರೂ-ಈಚೆಗೆ ರಾವ್‌ಬಹದ್ದೂರ್ ಎಂಬ ಬಿರುದು ಪಡೆದಿರುವ ಬಳ್ಳಾರಿಯ ಟಿ. ರಾಘವಾಚಾ ರ್ಯರವರೂ ನಾಟಕಗಳಲ್ಲಿ ಪಾತ್ರವಹಿಸಿದ್ದನ್ನು ಕಂಡು ಆಶ್ಚರ್ಯಪಡದವರೇ ವಿರಳ!

ಮದರಾಸಿನ ಬಹುಭಾಷಾ ಸಂಸ್ಥೆಯಾಗಿದ್ದ 'ಸಗುಣವಿಲಾಸ ಸಭೆ'ಯು ದಕ್ಷಿಣ ಭಾರತದಲ್ಲೇ ಪ್ರಾಮುಖ್ಯವಾದ ಸಾಂಸ್ಕೃತಿಕ ಕೇಂದ್ರ; ಮದರಾಸಿನ

ಪ್ರತಿಷ್ಠಿತರು ಈ ಸಭೆಯ ಸದಸ್ಯರು; ಇಲ್ಲಿ ಇಂಗ್ಲಿಷ್, ಸಂಸ್ಕೃತ, ತಮಿಳು, ತೆಲುಗು, ನಾಟಕಗಳು ಸಾದರವಾಗುತ್ತಿದ್ದವು. ಈ ಸಭೆಯಲ್ಲಿ ಕನ್ನಡ ವಿಭಾಗವು ಆರಂಭವಾಗಲು ರಾಮರಾಯರ ಪ್ರಯತ್ನ ಮತ್ತು ವರ್ಚಸ್ಸುಗಳೇ ಕಾರಣ. ಸರ್ ಸಿ. ಪಿ. ರಾಮಸ್ವಾಮಿ ಅಯ್ಯರ್, ಎಸ್. ಸತ್ಯಮೂರ್ತಿ, ಪಿ. ಸಮಾಬಂಧ ಮುದಲಿಯಾರ್ ಮುಂತಾದ ಪ್ರಮುಖರು ಇಂಗ್ಲಿಷ್, ಸಂಸ್ಕೃತ, ತಮಿಳು ವಿಭಾಗಗಳಿಗೆ ಅಧ್ಯಕ್ಷರುಗಳಾಗಿದ್ದರೆ ಕನ್ನಡ ವಿಭಾಗಕ್ಕೆ ರಾಮರಾಯರು ಅಧ್ಯಕ್ಷರು. ಅವರ ಉತ್ಸಾಹ ಪ್ರಯತ್ನಗಳ ಫಲವಾಗಿ ಸಗುಣ ವಿಲಾಸ ಸಭೆಯ ಆಶ್ರಯದಲ್ಲಿ ಕನ್ನಡ ನಾಟಕಗಳನೇಕವು ಅಭಿನಯಿಸಲ್ಪಟ್ಟವು. ಕನ್ನಡ ಸಂಗೀತ ಕಾರ್ಯಕ್ರಮಗಳ ಮೂಲಕ ಕನ್ನಡ ಸಂಗೀತಗಾರರಿಗೆ ತಮ್ಮ ಸಂಗೀತವನ್ನು ನುಡಿಸುವ ಅವಕಾಶವೂ ರಸಿಕರಿಗೆ ಸವಿಯುವ ಸಂದರ್ಭಗಳೂ ಸಿಕ್ಕವು. ಇಲ್ಲಿ ಸಾದರವಾದ ನಾಟಕಗಳ ಗುಣಮಟ್ಟವು ಮೇಲ್ತರದ್ದಾಗಿದ್ದಿತು. ಕನ್ನಡೇತರರನ್ನೂ ಆಕರ್ಷಿಸುವಷ್ಟು ಉತ್ತಮ ನಾಟಕಗಳನ್ನೂ ರಾಮರಾಯರು ಸಂಗಡಿಗರು ಪ್ರದರ್ಶಿಸುತ್ತಿದ್ದರು. ರಾಮರಾಯರ ಅಭಿನಯವನ್ನು ಕಂಡ ತಿ. ತಾ. ಶರ್ಮರು, ಮರಿಯಪ್ಪ ಭಟ್ಟರು, ಪಡುಕೋಣೆ ರಮಾನಂದರಾಯರು ಅವರ ಅಭಿನಯ ಕೌಶಲವನ್ನು ಮುಕ್ತಕಂಠಗಳಿಂದ ಸ್ತುತಿಸಿರುವುದನ್ನು ಇಲ್ಲಿ ಉಲ್ಲೇಖಿಸುಬಹುದು. ಆರಂಭದಲ್ಲಿ ಸ್ತ್ರೀ ಭೂಮಿಕೆಗಳನ್ನು ರಾಮರಾಯರು ನಿರ್ವಹಿಸಿತ್ತಿದ್ದರು. ಮುಂದೆ ನಾಟಕ ಪಾತ್ರಗಳಲ್ಲಿ ಅವರು ಯಶಸ್ಸನ್ನು ಗಳಿಸಿದರು. ಅವರ ದುಷ್ಯಂತ ಪಾತ್ರದ ಭಾವಚಿತ್ರವು ದ. ಕೃ. ಭಾರದ್ವಾಜರ 'ರಂಗಭೂಮಿ' ಪತ್ರಿಕೆಯಲ್ಲಿ ಪ್ರಕಟವಾಗಿದೆ. ತಮ್ಮ ಮಕ್ಕಳೂ ನಾಟಕಗಳಲ್ಲಿ ಭಾಗವಹಿಸುವಂತೆ ಅವರು ಹುರಿದುಂಬಿಸುತ್ತಿದ್ದರು. ರಾಮರಾಯರ ಪುತ್ರರಾದ ನಾಗೇಶರಾಯರು ಸ್ತ್ರೀ ಪಾತ್ರಗಳನ್ನು ವಹಿಸಿ ಪ್ರಸಿದ್ಧರಾಗಿದ್ದರು.

ಸಂಗೀತದಲ್ಲಿ ಪರಿಶ್ರಮವುಳ್ಳವರು ಮಾತ್ರ ಆಗಿನ ನಾಟಕಗಳಲ್ಲಿ ನಟರಾಗುವುದು ಸಾಧ್ಯವಿತ್ತು. ಸಂಗೀತಜ್ಞರಾದ ನಟರು ತುಂಬುಕಂಠದಲ್ಲಿ ಹಾಡುತ್ತಾ ನಾಟಕಗಳಿಗಾಗಿ ರಾಮರಾಯರ ಮನೆಯಲ್ಲೇ ಸಿದ್ಧತೆಯನ್ನು ಮಾಡುವ ದೃಶ್ಯಗಳು ಚೇತೋಹಾರಿಯಾಗಿದ್ದವೆಂದು ಪಡುಕೋಣೆಯವರ ಸ್ಮರಣೆ. ಉತ್ತಮ ಸಂಗೀತಗಾರರಾದ ಕೆ. ನರಸಿಂಗರಾಯರಲ್ಲಿ ರಾಮರಾಯರಿಗೆ ವಿಶೇಷವಾದ ವಾತ್ಸಲ್ಯ, ಅಭಿಮಾನ. ನರಸಿಂಗರಾಯರು ರಾಮ

ರಾಯರಲ್ಲೇ ಉಳಿಕೊಳ್ಳುವಂತೆ ಏರ್ಪಾಡೂ ಆಗಿತ್ತಂತೆ. ರಾಮರಾಯರ ಬಲಗೈಯಂತೆ ಅವರಿದ್ದುದನ್ನು ಕಂಡು ಅವರನ್ನು ರಾಯರ ದತ್ತುಪುತ್ರ ರೆಂದುದೂ ಇದೆಯಂತೆ.

ಉತ್ತಮ ನಾಟಕಗಳ ರಚನೆಯನ್ನು ಪ್ರೋತ್ಸಾಹಿಸಲು ಹೊಸ ನಾಟಕ ಗಳಿಗೆ ಬಹುಮಾನವೀಯುವ ಸ್ಪರ್ಧೆಯನ್ನು ಸಗುಣವಿಲಾಸ ಸಭೆಯ ಆಶ್ರಯ ದಲ್ಲಿ ಏರ್ಪಾಡು ಮಾಡಿದವರು ರಾಮರಾಯರು. ಈ ಸ್ಪರ್ಧೆಗಾಗಿ ಕನ್ನಡ ನಾಡಿನ ಮೂಲೆಮೂಲೆಗಳಿಂದ ನಾಟಕಗಳು ಬರುತ್ತಿದ್ದವು. ಒಂದು ವರ್ಷ ಇಪ್ಪತ್ತೊಂದು ನಾಟಕಗಳು ಬಂದಿದ್ದವು. ಈ ಸ್ಪರ್ಧೆಯ ಭಿನ್ನ ಭಿನ್ನ ವರ್ಷ ಗಳಲ್ಲಿ ಮಾಸ್ತಿಯವರ 'ತಾಳಿಕೋಟೆ'ಯೂ, ಶಿವರಾಮ ಕಾರಂತರ 'ಸತೀ ಸಂಯುಕ್ತೆ'ಯೂ ಬಹುಮಾನವನ್ನು ಗಳಿಸಿವೆ.

ರಾಮರಾಯರ ಸ್ವಂತ ಮನೆಯಿದ್ದುದು ಗಂಗಾಧರೇಶ್ವರ ದೇವಾಲಯದ ಬೀದಿಯಲ್ಲಿ. ಅವರ ಪ್ರಥಮ ಪುತ್ರ ಭಾಸ್ಕರರಾಯರ ಮೇಲಿನ ಪ್ರೀತ್ಯರ್ಥ ವಾಗಿ ಆ ಮನೆಗೆ 'ಭಾಸ್ಕರವಿಲಾಸ'ವೆಂಬ ಹೆಸರು. ಮನೆ ಬಿಸಿಲಿನ ಬೇಗೆಗೆ ಪ್ರಸಿದ್ಧವಾದ ಮದರಾಸಿನಲ್ಲಿದ್ದರೂ 'ಭಾಸ್ಕರವಿಲಾಸವು' ತಂಪಿನ ತಾಣ ವಾಗಿದ್ದುದು ಒಂದು ವೈಶಿಷ್ಟ್ಯ. ಇದಕ್ಕೆ ಕಾರಣವೇನೆಂದರೆ ಉದ್ಯಾನ ಕಲೆ ಯಲ್ಲಿ ರಾಮರಾಯರ ಪತ್ನಿಯವರಾದ ರತ್ನಾಬಾಯಿಯವರ ಪ್ರಯತ್ನ, ಮರಗಿಡಬಳ್ಳಿಗಳ ಸಮೂಹದಿಂದಾಗಿ ಬಂದವರಿಗೆ ಹಿತಭಾವವನ್ನು ಒದಗಿಸುವ ಉಲ್ಲಾಸದಾಯಕ ವಾತಾವರಣ. ಅಲ್ಲಿನ ತೆಂಗಿನ ಸಾಲು ರಾಮರಾಯರ ಹುಟ್ಟೂರಿನ ಸೊಗಸನ್ನು ನೆನಪಿಗೆ ತರುವಂತಿತ್ತು.

ವಿಶಾಲವೂ, ಪ್ರಶಸ್ತವೂ ಆಗಿದ್ದ 'ಭಾಸ್ಕರವಿಲಾಸವು' ರಾಮರಾಯರ ಹೃದಯ ವೈಶಾಲ್ಯದ ಸಂಕೇತ. ಯಾವ ಹೊತ್ತಿನಲ್ಲೂ ಮನೆ ತುಂಬ ಜನರು. ರಾಯರ ಓರ್ವರೇ ತಮ್ಮಂದಿರಾದ ಸಂಜೀವರಾಯರು ಮತ್ತು ಅವರ ಸಂಸಾರವೂ ಇಲ್ಲೇ ವಾಸ. ರಾಮರಾಯರ ಪೈಕಿಯವರೆಂದು, ರತ್ನಾಬಾಯಿಯವರ ಸಂಬಂಧಿಕರೆಂದು, ವಿದ್ಯಾರ್ಜನೆಗಾಗಿ, ಬಂದ ವಿದ್ಯಾರ್ಥಿಗಳೆಂದು 'ಭಾಸ್ಕರ ವಿಲಾಸವು' ಜನರಿಂದ ತುಂಬಿ ತುಳುಕುತ್ತಿತ್ತು. ನಿತ್ಯದ ಊಟ ಉಪಚಾರ ಗಳಿಗೆ ಇಪ್ಪತ್ತು, ಇಪ್ಪತ್ತೈದು ಅತಿಥಿಗಳಿರುವುದು ಸರ್ವೇಸಾಮಾನ್ಯ. ಊಟ, ವಸತಿಗಳನ್ನು ಒದಗಿಸುವುದರ ಜತೆಯಲ್ಲಿ ಅನೇಕ ವಿದ್ಯಾರ್ಥಿಗಳಿಗೆ

ಧನಸಹಾಯವನ್ನು ರಾಮರಾಯರು ಮಾಡುತ್ತಿದ್ದರು. ಇತರರ ಸಂಕಷ್ಟ ಗಳಿಗೆ ಮರುಗುವ ಹೃದಯ ಅವರದ್ದು. ವಿದ್ಯಾ ಪಕ್ಷಪಾತಿಯಾದ ಅವರು ವಿದ್ಯಾರ್ಜನೆಗಾಗಿ ಕಷ್ಟಪಡುವವರಿಗೆ ಸಹಾಯ ಮಾಡುತ್ತಿದ್ದುದು ಸಹಜ.

ರಾಮರಾಯರಿಗೆ ಕೈತುಂಬ ಸಂಬಳ.[1] ಹಲವಾರು ಸಮಿತಿಗಳ ಅಧ್ಯಕ್ಷ ರಾಗಿ ಸದಸ್ಯರಾಗಿ ಮತ್ತಷ್ಟು ಗಳಿಕೆ. ಸಂಪಾದನೆಯನ್ನು ಕೂಡಿಹಾಕಿ ಧನಿಕ ರಾಗಬೇಕೆಂಬ ಬಯಕೆ ಅವರ ಸಮೀಪವೂ ಸುಳಿಯದು. ಅವರ ಗಳಿಕೆಯ ದೊಡ್ಡಪಾಲು ಕನ್ನಡಸೇವೆ, ಕಲಾರಾಧನೆ, ವಿದ್ಯಾಪ್ರೋತ್ಸಾಹ, ಸಾಹಿತಿಗಳಿಗೆ ನೆರವು ಮಂತಾದ ಉತ್ತಮ ಕಾರ್ಯಗಳಿಗೆ ವಿನಿಯೋಗವಾಗುತ್ತಿದ್ದುದು ರಾಮ ರಾಯರಿಗೆ ಸಂತೋಷದ ಸಂಗತಿಯಾಗಿತ್ತು. ' ದೇವರು ಕೊಟ್ಟದ್ದನ್ನು ಹಂಚಿ ತಿನ್ನಬೇಕು ' ಎಂದು ಅವರು ಹೇಳುತ್ತಿದ್ದರಲ್ಲದೆ ಅಂತೆಯೇ ನಡೆಯುತ್ತಿದ್ದರು.[2] ಅವರ ಮೋಟಾರು ಕಾರು ಮತ್ತು ಕುದುರೆ ಬಂಡಿಗಳು ಅವರ ಮನೆಯವರ ಸೌಕರ್ಯಕ್ಕಿಂತ ಹೆಚ್ಚಾಗಿ ಅತಿಥಿ ಗೆಳೆಯರ ಸಲುವಾಗಿರುತ್ತಿತ್ತು. ರಾಮ ರಾಯರ ನಿತ್ಯಜೀವನವು ಸರಳವಾಗಿತ್ತು. ಅಂತೆಯೇ ಉಡುಪು ತೊಡುಪು ಗಳೂ ಆಡಂಬರ ರಹಿತವಾಗಿದ್ದವು.

' ಭಾಸ್ಕರವಿಲಾಸ 'ದ ಮೇಲ್ಮಹಡಿಯಲ್ಲಿ ರಾಮರಾಯರ ಅಧ್ಯಯನದ ಕೋಣೆ. ಯಾವ ಎಡೆ ನೋಡಿದರೂ ಗ್ರಂಥರಾಶಿಗಳು, ಪತ್ರಿಕಾ ಸಂಚಿಕೆಗಳು. ಕನ್ನಡದಲ್ಲಿ ಪ್ರಕಟವಾದ ಯಾವತ್ತೂ ಗ್ರಂಥವನ್ನು ಖರೀದಿಸುವ ಗುಣವು ಅವರಲ್ಲಿತ್ತು. ಈ ಕನ್ನಡ ನುಡಿಯ ಮೇಲಿನ ಅಭಿಮಾನದಿಂದಲ್ಲದೆ, ಲೇಖಕರ ಪ್ರೋತ್ಸಾಹ ದೃಷ್ಟಿಯಿಂದಲೂ ಆಗಿತ್ತು. ಜನರು ಖರೀದಿಸಿದಾಗಲೇ ಕನ್ನಡ ದಲ್ಲಿ ಹೆಚ್ಚು ಕೃತಿಗಳು ಬರುತ್ತವೆಯೆಂದು ಅವರು ನಂಬಿದ್ದರು. ಕನ್ನಡದಲ್ಲಿ ಉತ್ತಮವಾದ ಹೆಚ್ಚು ಕೃತಿಗಳು ಪ್ರಕಟವಾಗುವುದು ಅವಶ್ಯವೆಂಬುದು ಅವರಿಗೆ ಮುಖ್ಯವಾಗಿತ್ತು. ಸಾಹಿತಿ ಮಿತ್ರರನ್ನು ಸತ್ಕರಿಸಲು ರಾಮರಾಯರು ತಮ್ಮ ಅಧ್ಯಯನದ ಕೊಠಡಿಯನ್ನು ಉಪಯೋಗಿಸುತ್ತಿದ್ದರು. ಮದರಾಸು ವಿಶ್ವವಿದ್ಯಾಲಯದ ಕನ್ನಡ ವಿಭಾಗದ 'ಬೋರ್ಡ್ ಆಫ್ ಸ್ಟಡೀಸ್' ಸದಸ್ಯರು

---

1. ೫೦೦ ರಿಂದ ೮೦೦ ರೂಗಳ ಶ್ರೇಣಿಯ ಹುದ್ದೆ ಅವರದ್ದಾಗಿತ್ತು.
2. ಲೇಖಕನಿಗೆ ಬೆನಗಲ್ ನಾಗೇಶರಾಯರ ಪತ್ರದಲ್ಲಿ ಉಲ್ಲೇಖಿತ.

ಮದರಾಸಿಗೆ ಬಂದಾಗ ರಾಮರಾಯರಲ್ಲೇ ಉಳಕೊಳ್ಳುತ್ತಿದ್ದರು. ಈ ವಿದ್ವಾಂಸರುಗಳು ತಮ್ಮಲ್ಲಿ ಅತಿಥಿಗಳಾಗಿರುವುದು ರಾಮರಾಯರಿಗೆ ಒಂದು ಹಬ್ಬ.

ರಾಮರಾಯರ ದೈನಂದಿನ ಕಾರ್ಯಕ್ರಮವು ಮುಂಜಾನೆಯ ಐದು ಗಂಟೆಗೆ ಆರಂಭ. ಏಳೂವರೆಗಂಟೆಯ ತನಕ ಸುಮಾರು ಎರಡು ತಾಸು ಧ್ಯಾನ, ದೇವತಾ ಉಪಾಸನೆ. ಆ ಬಳಿಕ ಅತಿಥಿ, ಬಂಧುಗಳೊಂದಿಗೆ ಮುಂಜಾನೆಯ ಉಪಾಹಾರ. ಅನಂತರ ಕಚೇರಿಯ ಉದ್ಯೋಗ. ಅಲ್ಲಿಂದ ಮರಳಿದ ಅವರು ಬ್ಯಾಡ್‌ಮಿಂಟನ್ ಆಟ ಆಡುವ ಕ್ರಮವಿತ್ತು. ರಾತ್ರಿ ಸಂಗೀತ, ನಾಟಕಗಳು ಇದ್ದಲ್ಲಿ ಅವುಗಳಲ್ಲಿ ಅವರು ಭಾಗವಹಿಸುತ್ತಿದ್ದರು. ಗೆಳೆಯರಾದ ಪಾನ್ಯಂ ಸುಂದರಶಾಸ್ತ್ರಿಯವರೊಂದಿಗೆ, ಅತಿಥಿಗಳೊಂದಿಗೆ ಮಾತುಕತೆಯಾಗುತ್ತದೆ. ಮುಂದೆ ತಮ್ಮ ಖಾಸಗಿ ಓದು ಮತ್ತು ಬರವಣಿಗೆ.

'ಭಾಸ್ಕರವಿಲಾಸ'ದಲ್ಲಿ ಪ್ರತಿ ಶನಿವಾರ ಭಜನಾ ಕಾರ್ಯಕ್ರಮ ಜರುಗುತ್ತಿತ್ತು. ಇದರಲ್ಲಿ ಮದರಾಸಿನ ಅನೇಕ ಕನ್ನಡಿಗರು ಭಾಗವಹಿಸುತ್ತಿದ್ದುದರಿಂದ ಅದೊಂದು ಸಾರ್ವಜನಿಕ ಉತ್ಸವವೇ ಆಗುತ್ತಿತ್ತು. ಪುರಂದರದಾಸರು, ಕನಕದಾಸರು, ವಾದಿರಾಜರು, ಮೀರಾ ಮತ್ತು ಕಬೀರರ ರಚನೆಗಳನ್ನು ರಾಮರಾಯರು ಭಾವಪೂರ್ಣವಾಗಿ ಹಾಡಿ ಧನ್ಯರಾಗುತ್ತಿದ್ದರು. ದೊಡ್ಡ ಅಧಿಕಾರಿಗಳಲ್ಲಿ ಸಾಮಾನ್ಯವಾಗಿರುವ ಬಿಗುಮಾನ ಅವರಲ್ಲಿ ಕಂಡು ಬರುತ್ತಿರಲಿಲ್ಲ. ರಾಮರಾಯರ ನೆಚ್ಚಿನವರಾದ ನರಸಿಂಗರಾಯರ ಸಂಗೀತ ಪ್ರತಿಭೆಗೆ ಭಜನೆಯ ಕಾರ್ಯಕ್ರಮಗಳು ಅವಕಾಶವನ್ನು ಕಲ್ಪಿಸುತ್ತಿದ್ದವು. ಭಕ್ತಿ ಸಂಗೀತದಲ್ಲಿ ರಾಮರಾಯರ ನೈಪುಣ್ಯವು ಅಸಾಧಾರಣ. ಜತೆಯಲ್ಲಿ ಸೀತಾರ್ ವಾದನದಲ್ಲೂ ಪ್ರಾವೀಣ್ಯವಿತ್ತು.

ಕನ್ನಡಸೇವೆಯಲ್ಲಿರುವ ಯಾವನೇ ಆಗಲಿ, ಆತನು ರಾಮರಾಯರಿಗೆ ಪ್ರಿಯನಾಗುತ್ತಿದ್ದನು. ಅಂತಹವನಿಗೆ ರಾಮರಾಯರು ಆಪ್ತರು. 'ಪ್ರಜಾಮತ' ಪತ್ರಿಕೆಯು ಮದರಾಸಿನಲ್ಲಿ ಪ್ರಕಟವಾಗುತ್ತಿದ್ದಾಗ ಆ ಪತ್ರಿಕೆಯಲ್ಲಿ ದುಡಿಯುತ್ತಿದ್ದ ಶ್ರೀ ಮಾ. ನಾ. ಚೌಡಪ್ಪನವರನ್ನು ರಾಮರಾಯರೇ ಪರಿಚಯ ಮಾಡಿಕೊಂಡು ಮನೆಗೆ ಆಹ್ವಾನಿಸಿ ಸತ್ಕರಿಸುತ್ತಾ ಇದ್ದುದನ್ನು ಶ್ರೀಯುತರು ನೆನಸುತ್ತಿದ್ದಾರೆ. ಇಂತಹ ಅನುಭವ ಅನೇಕರಿಗೆ ಆಗಿದೆ. ದಿವಂಗತ ಶಿ.ಶಾ.

ಶರ್ಮರು ತಮ್ಮ ಅನುಭವವನ್ನು 'ಉತ್ಥಾನ'ದಲ್ಲಿ (ಆಗಸ್ಟ್ ೧೯೭೩) ಸ್ಮರಿಸಿದುದನ್ನು ಇಲ್ಲಿ ಉಲ್ಲೇಖಿಸಬಹುದು. "....ಅವರ (ರಾಮರಾಯರ) ಸ್ನೇಹವಂತೂ ನನಗೆ ಅಮೂಲ್ಯವಾದ ಲಾಭ. ಅವರ ಮೂಲಕವಾಗಿ ನನಗೆ ಅನೇಕರ ಸ್ನೇಹಲಾಭವಾಯಿತು. ಆ ಸ್ನೇಹಿತರಲ್ಲಿ ಪಾನ್ಯಂ ಸುಂದರಶಾಸ್ತ್ರಿಗಳು, ಕೂರಿಗನೂರು ನರಸಿಂಗರಾಯರು, ಮಂಜೇಶ್ವರ ಗೋವಿಂದಪೈಗಳು, ಎಂ. ಎನ್. ಕಾಮತರು, ಕಡೆಕಾರ ರಾಜಗೋಪಾಲಕೃಷ್ಣರಾಯರು, ಡಾ|| ಯು. ರಾಮರಾಯರು ಮುಖ್ಯರು. ರಾಮರಾಯರ ಮನೆಯಲ್ಲಿ ಕನ್ನಡಕ್ಕೆ, ಕರ್ನಾಟಕಕ್ಕೆ ಸಂಬಂಧಪಟ್ಟ ಗೋಷ್ಠಿಗಳಿಗೆ, ನಡೆದ ಚರ್ಚೆಗಳಿಗೆ ಲೆಕ್ಕವೇ ಇಲ್ಲ. ಉಪಾಹಾರ ಸಂದರ್ಭಗಳೋ, ಭೋಜನಕೂಟಗಳೋ ಇಷ್ಟೇ ಸಾಲದೆಂದು ಪ್ರತೀ ಶನಿವಾರ ಭಜನೆ! ಇವುಗಳೆಲ್ಲವುಗಳಲ್ಲಿ ಭಾಗವಹಿಸುವ ಭಾಗ್ಯ ನನ್ನ ದಾಗಿತ್ತು. ಈ ಕೂಟಗಳಲ್ಲಿ ಸಮಾರಂಭಗಳಲ್ಲಿ ಬೇರೆ ಮಾತೇ ಇಲ್ಲ. ಕನ್ನಡ ಭಾಷೆ, ಕನ್ನಡ ಸಾಹಿತ್ಯ, ಕನ್ನಡ ಭವಿಷ್ಯದ ಕುರಿತ ಮಾತೇ! ಕನ್ನಡದ ಛಿದ್ರಾವಸ್ಥೆ, ಕರ್ನಾಟಕ ಏಕೀಕರಣ ಕುರಿತ ಮಾತೇ! ಕನ್ನಡ ಸಾಹಿತ್ಯ ಸಮ್ಮೇಳನ ಈ ವರ್ಷ ಎಲ್ಲಾಗಬೇಕು? ಸಮ್ಮೇಳನಾಧ್ಯಕ್ಷರು ಯಾರಾಗಬೇಕು? ಈ ವಿಚಾರ ಚರ್ಚೆಗಳಲ್ಲಿ ರಾಮರಾಯರು ವಹಿಸುತ್ತಿದ್ದ ಪಾತ್ರ, ತೋರಿಸುತ್ತಿದ್ದ ಆಸಕ್ತಿ, ನೆನಪಿಗೆ ಬಂದಾಗಲೆಲ್ಲ ಇಂದೂ ನನ್ನನ್ನು ಮೂಕನನ್ನಾಗಿ ಮಾಡುತ್ತದೆ. ಸಾಹಿತ್ಯದ ಮಾತು ಹಾಗಿರಲಿ, ಸಂಗೀತದಲ್ಲಿ ಅಪಾರ ಅಭಿರುಚಿ....ನಾಟಕ ವೆಂದರೆ ಪ್ರಾಣ....ಕನ್ನಡಕ್ಕೂ, ಕನ್ನಡಿಗರಿಗೂ ಒಂದು ಸ್ಥಾನ, ಮರ್ಯಾದೆ ಗಳಿಸಲು ತಮಿಳರೊಂದಿಗೆ ರಾಯರು ಬಹಳ ಹೋರಾಡಿದ್ದಾರೆ. 'ಸಗುಣ ವಿಲಾಸ' ಸಭೆಯ ತಮಿಳು ಸದಸ್ಯರು ತಮಿಳು ನಾಟಕವಾಡಿದರೆ ಕನ್ನಡ ಸದಸ್ಯರು ಕನ್ನಡ ನಾಟಕವ್ನಾಡಬಾರದೇಕೆ? ಇದು ರಾಯರ ವಾದ. ಹೆಚ್ಚೇನು? ಮದರಾಸಿನಲ್ಲಿ ಕನ್ನಡ ಧ್ವಜವನ್ನೆತ್ತಿ ಹಿಡಿದು ಕನ್ನಡವಾಣಿಗೆ ಸಲ್ಲಬೇಕಾದ ಮರ್ಯಾದೆ ಸಲ್ಲುವಂತೆ ಮಾಡಿ ಮದರಾಸು ವಿಶ್ವವಿದ್ಯಾಲಯದಲ್ಲಿ ಕನ್ನಡಕ್ಕೆ —ತಮಿಳು, ತೆಲುಗು ಭಾಷೆಗಳಿಗೆ ಸಮಸಮನಾದ ಸ್ಥಾನಸಲ್ಲುವಂತೆ ಮಾಡಿದ ಕೀರ್ತಿ ಬೆನಗಲ್ ರಾಮರಾಯರಿಗೆ ಸಲ್ಲಬೇಕು. ಮದರಾಸಾಧಿಪತ್ಯದ ದಕ್ಷಿಣ ಕನ್ನಡ ಜಿಲ್ಲೆಯನ್ನು ಕನ್ನಡಿಗರ ಸಾಂಸ್ಕೃತಿಕ ಜೀವನದ ಮೂಲಸ್ಥಾನ ವನ್ನಾಗಿ ಮಾರ್ಪಡಿಸಿದವರಲ್ಲಿ ಬೆನಗಲ್ ರಾಮರಾಯರೊಬ್ಬರು. ನಂದಳಿಕೆ

ಲಕ್ಷ್ಮಿನಾರಾಯಣಯ್ಯನವರು ವ್ಯಾಯಾಮ ಶಿಕ್ಷಕರಾಗಿದ್ದುಕೊಂಡು ಕನ್ನಡಿಗರ ಕಣ್ಣಿಗೆ ನೂತನ ದೃಷ್ಟಿದಾನ ಮಾಡಿದರು. ಬೆನಗಲ್ ರಾಮರಾಯರು ಅಧಿಕಾರಸ್ಥಾನದಲ್ಲಿದ್ದುಕೊಂಡು ಕರ್ನಾಟಕ ಏಕೀಕರಣಕ್ಕೆ ಭದ್ರ ಅಸ್ತಿವಾರವನ್ನು ಹಾಕಿದರು. ರಾಮರಾಯರ ಮನೆ ಕನಸುಕಾಣುವ ಹಲವು ಕನ್ನಡಿಗರ ಕ್ಷೇತ್ರವಾಗಿತ್ತು. ಕರ್ನಾಟಕ ನಕ್ಷೆ(ಮ್ಯಾಪ್)ಯೊಂದನ್ನು ಸಿದ್ಧಗೊಳಿಸಿ ಅದನ್ನು ಪ್ರಕಟಿಸಿದ ಕೀರ್ತಿ ರಾಮರಾಯರ ತೀರ್ಥರೂಪುಗಳಿಗೆ ಸಲ್ಲುತ್ತದೆ. ಕರ್ನಾಟಕ ವಿಶ್ವವಿದ್ಯಾಲಯ ಸ್ಥಾಪನೆಯಾಗಬೇಕು, ಜ್ಞಾನಪ್ರಪಂಚದ ಪ್ರತಿಭಾಶಾಲಿಗಳ ಆರಿಸಿದ ೨೫ ಉತ್ತಮ ಗ್ರಂಥಗಳನ್ನು ಕನ್ನಡಕ್ಕೆ ಭಾಷಾಂತರ ಮಾಡಬೇಕು; ಕರ್ನಾಟಕ ಸಾಹಿತ್ಯ ಪರಿಷತ್ತನ್ನು ಅಖಂಡ ಕರ್ನಾಟಕದ ಚೈತನ್ಯಪೂರ್ಣವಾದ ಸಂಸ್ಥೆಯನ್ನಾಗಿ ಮಾಡಬೇಕು. ಇಂತಹ ಬೇಕುಗಳು ಆ ಕ್ಷೇತ್ರದಲ್ಲಿ ಎಷ್ಟೋ ಆದವು. ರಾಮರಾಯರು ಹಿರಿಯ ಕನ್ನಡ ಕೆಲಸಗಾರರಿಗೆಲ್ಲ ಸಹಾಯಕರು; ಕಿರಿಯ ಕನ್ನಡ ಸೇವಾಕಾಂಕ್ಷಿಗಳಿಗೆಲ್ಲ ಪ್ರೋತ್ಸಾಹಕರು. ಇಷ್ಟು ಮಾತ್ರವಲ್ಲ ಅನೇಕ ಕನ್ನಡ ಬರಹಗಾರರಿಗೆ ರಾಜಪೋಷಕರಾಗಿದ್ದರೆಂದು ನಾನು ಹೇಳಬಲ್ಲೆ.

"ಬೆನಗಲ್ಲರ ಮನೆಯಲ್ಲೇ ನನಗೆ ಅನೇಕ ತಮಿಳು ಸಾಹಿತಿಗಳ ಕಲಾವಿದರ ದೊಡ್ಡದೊಡ್ಡ ಅಧಿಕಾರಿಗಳ ಪರಿಚಯವಾದದ್ದು. ಪ್ರತಿ ಶನಿವಾರ ರಾತ್ರಿ ಅವರ ಮನೆಯಲ್ಲಿ ಭಜನೆಯಾಗುತ್ತಿತ್ತು. ನಾವೆಲ್ಲ ದಾಸರ ಹಾಡುಗಳನ್ನು ಹಾಡುತ್ತಿದ್ದೆವು. ರಾಮರಾಯರೂ ಹಲವು ಕೀರ್ತನೆಗಳನ್ನು ರಚಿಸಿದ್ದರೆಂದು ನನ್ನ ನೆನಪು—ಅವುಗಳಲ್ಲಿ ಕೆಲವನ್ನು ಅವರೇ ಹಾಡುತ್ತಿದ್ದರು....ರಾಮರಾಯರು ನನ್ನನ್ನು ಅಭಿಮಾನದಿಂದ ಕಾಣಲಾರಂಭಿಸಿದರು. ಅವರು ಯಾವ ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ಹೋಗಲಿ, ನಾಟಕ ನೋಡಲು ಹೋಗಲಿ, ಜತೆಯಲ್ಲಿ ನನ್ನನ್ನು ಕರೆದುಕೊಂಡು ಹೋಗುತ್ತಿದ್ದರು. ಅವರ ಮನೆಯಲ್ಲಿ ಒಂದು ಹಬ್ಬವಾಗಲಿ, ಒಂದು ಶುಭಕಾರ್ಯವಾಗಲಿ ನಾನು ಊಟಕ್ಕೆ ಹೋಗಲೇಬೇಕು. ಅಂತಹ ಸಂದರ್ಭಗಳಲ್ಲಿ ರಾಮರಾಯರು ದಕ್ಷಿಣ ಕನ್ನಡ ಜಿಲ್ಲೆಯ ತಮ್ಮ ಬಂಧುಮಿತ್ರರನೇಕರ ಪರಿಚಯವನ್ನು ನನಗೆ ಮಾಡಿಕೊಟ್ಟರು."[1]

---

೧. ಉತ್ಥಾನ ೧೯೭೨, ಆಗಸ್ಟ್

ರಾಮರಾಯರೊಂದಿಗೆ ಆತ್ಮೀಯರಾಗಿದ್ದ ಕನ್ನಡ ಸಾಹಿತಿ ಪಡು ಕೋಣೆ ರಮಾನಂದರಾಯರ ಅನುಭವವು ಇದಕ್ಕಿಂತ ಭಿನ್ನವಾಗಿರಲಿಲ್ಲ. "ಬೆನಗಲ್ ರಾಮರಾಯರು ಸರಳರೂ ಉದಾರಿಗಳೂ ಪ್ರೇಮಪೂರ್ಣರೂ ಆಗಿದ್ದರು. ಅವರು ಸರ್ವರಿಗೂ ತೋರುತ್ತಿದ್ದ ಆತಿಥ್ಯದಲ್ಲಿ ಅವರ ಪತ್ನಿ ಯಾದ ರತ್ನಾಬಾಯಿ ಅನುಕೂಲೆಯಾಗಿದ್ದರು. ನಿತ್ಯದ ಆತಿಥ್ಯದಿಂದ ಅವರಿಗೆ ಹೆಚ್ಚಿನ ಶ್ರಮವಾಗುತ್ತಿದ್ದರೂ ಬೇಸರಪಟ್ಟವರಲ್ಲ. ಕನ್ನಡ ಭಾಷೆ, ಸಾಹಿತ್ಯ, ನಾಡು, ನಾಟಕ ಸಂಗೀತಗಳೆಂದರೆ ರಾಮರಾಯರಿಗೆ ಪಂಚಪ್ರಾಣ. ಈ ಕ್ಷೇತ್ರಗಳಲ್ಲಿ ದುಡಿಯುವ ವ್ಯಕ್ತಿಗಳಲ್ಲಿ ಅವರಿಗೆ ಹೆಚ್ಚಿನ ಪ್ರೀತ್ಯಭಿಮಾನ ಗಳಿದ್ದವು." [1]

ಹಿರಿಯವಿದ್ವಾಂಸರಾದ ರಾಮರಾಯರಿಗೆ ಮದರಾಸಿನಲ್ಲಿ ಕನ್ನಡಕ್ಕೆ ಸಂಬಂಧಿಸಿದ ಯಾವತ್ತೂ ಕಾರ್ಯಗಳಲ್ಲಿ ಉನ್ನತಸ್ಥಾನ. ವಿಶ್ವವಿದ್ಯಾಲಯದ ಕನ್ನಡ ವಿಭಾಗಕ್ಕೆ ಅವರೇ ವರಿಷ್ಠರು. ಕನ್ನಡ 'ಬೋರ್ಡ್ ಆಫ್ ಸ್ಟಡೀಸ್' ಸಭೆಗಳಲ್ಲಿ ಅವರದ್ದೇ ಅಧ್ಯಕ್ಷತೆ. ಪಠ್ಯಪುಸ್ತಕ ಸಮಿತಿ, 'ಸ್ಕೂಲ್‌ಬುಕ್ ಮತ್ತು ಲಿಟರೇಚರ್' ಸಮಿತಿ ಮತ್ತು ಪ್ರಾಚ್ಯ ಹಸ್ತಪ್ರತಿ ಸಂಗ್ರಹಾಲಯ ಮುಂತಾದ ಸಂಸ್ಥೆಗಳ ಸಲಹಾಸಮಿತಿಯಲ್ಲಿ ರಾಮರಾಯರಿಗೆ ಸ್ಥಾನ, ಸದ ಸ್ಯತ್ವ ಇದ್ದೇ ಇರುತ್ತಿತ್ತು. ಸಾಹಿತ್ಯ ಪರಿಷತ್ತಿನ ಹೆಚ್ಚಿನ ಸಮಿತಿಗಳಲ್ಲಿ ರಾಮ ರಾಯರಿಗೆ ಸ್ಥಾನವಿರುತ್ತಿತ್ತು. ಮದರಾಸು ಸರಕಾರವು ಅವರಿಗೆ ಗೌರವ ಮೆಜಿಸ್ಟ್ರೇಟ್ ಹುದ್ದೆಯನ್ನು ಪಾಲಿಸಿತ್ತು.

ಮೈಸೂರಿನಲ್ಲಿ ಹನುಮಾನ್‌ದಾಸರೆಂಬುವರು 'ಮಧುರವಾಣಿ'ಯೆಂಬ ಉತ್ತಮವಾದ ಪತ್ರಿಕೆಯನ್ನು ಸಂಪಾದಿಸುತ್ತಿದ್ದರು. ಈ ಪತ್ರಿಕೆಯಲ್ಲಿ ಬೆನಗಲರ ಲೇಖನಗಳೂ ನಾಟಕಗಳೂ ಪ್ರಕಟವಾಗಿವೆ. ಈ ಪತ್ರಿಕೆಯನ್ನು ನಡೆಸಲು ಆರ್ಥಿಕ ನೆರವನ್ನಿತ್ತವರಲ್ಲಿ ರಾಮರಾಯರು ಮುಖ್ಯರೆಂದು ದ.ಕೃ. ಭಾರದ್ವಾಜರು ತಮ್ಮ ಲೇಖನದಲ್ಲಿ ಉಲ್ಲೇಖಿಸಿದ್ದಾರೆ.[2]

ಬ್ರಿಟಿಷ್ ಸರಕಾರದ ಅಧಿಕಾರಿಗಳಾಗಿದ್ದರೂ ರಾಮರಾಯರ ಅಂತರ್ಯ

---

1 ಲೇಖಕನಿಗೆ ಪಡುಕೋಣೆ ರಮಾನಂದರಾಯರ ಪತ್ರ

2 ಕನ್ನಡ ನುಡಿ ೯-೪-೧೯೪೩

ದಲ್ಲಿ ರಾಷ್ಟ್ರಾಭಿಮಾನವು ಜಾಗೃತವಾಗಿತ್ತು. ತಿ. ತಾ. ಶರ್ಮರು ರಾಷ್ಟ್ರಾಭಿಮಾನದಿಂದ ಬ್ರಿಟಿಷ್ ಸರಕಾರಕ್ಕಾಗಿ ದುಡಿಯುವುದಿಲ್ಲವೆಂದಾಗ ರಾಮರಾಯರು ಅವರ ದೇಶಪ್ರೇಮವನ್ನೇ ಮೆಚ್ಚಿಕೊಂಡು ಅವರಲ್ಲಿ ಇನ್ನಷ್ಟು ಅಭಿಮಾನ ತಾಳಿದ ಸಂದರ್ಭವನ್ನು ತಿ. ತಾ. ಶರ್ಮರು ನೆನಸಿಕೊಂಡಿದ್ದಾರೆ. ದೇಶದ ಸ್ವಾತಂತ್ರ್ಯಕ್ಕಾಗಿ ಉಗ್ರ ಚಳುವಳಿ ನಡೆಸಿದ ಕಮಲಾಕರ ಗುಲ್ವಾಡಿಯವರನ್ನು ಪೋಲಿಸರು ಅರಸುತಿದ್ದಾಗ ಅವರು ರಾಮರಾಯರ ಮನೆಯಲ್ಲಿ ಅಡಗಿದ್ದರು. ಹೀಗೆ ಸ್ವಾತಂತ್ರ್ಯದ ಹೋರಾಟಗಾರರಿಗೆ ತಮ್ಮಿಂದ ಸಾಧ್ಯವಿರುವ ನೆರವನ್ನು ಅವರು ನೀಡಿದರು.

ರಾಮರಾಯರ ಸದ್ಗುಣಗಳನ್ನು ಮೆಚ್ಚದ ವ್ಯಕ್ತಿ, ಸಂಸ್ಥೆ, ಪತ್ರಿಕೆಗಳು ವಿರಳ. 'ಕನ್ನಡ ನುಡಿ' ಪತ್ರಿಕೆಯು ರಾಮರಾಯರನ್ನು ಕಂಡುಕೊಂಡ ಬಗೆ ಹೀಗಿದೆ (೧೪-೫-೧೯೪೩): "ಇವರು ಪಂಡಿತಾಭಿಮಾನಿಗಳು, ದಯಾಮಯರು, ಆಸ್ತಿಕರು, ಶ್ರದ್ಧಾಳುಗಳು. ನವನಾಗರಿಕತೆಯ ಬೆಡಗಿಗೆ ಮರುಳಾದವರಲ್ಲ....ಕನ್ನಡ ಪ್ರತಿನಿಧಿಗಳ ಮುಖಂಡರಾಗಿದ್ದು ಅನೇಕಮಂದಿ ಗ್ರಂಥಕರ್ತರಿಗೆ ವಿಶೇಷವಾದ ಉಪಕಾರ ಮಾಡಿದ್ದಾರೆ. ಇವರಿಂದ ಉಪಕೃತರಲ್ಲದ ಗ್ರಂಥಕರ್ತರು ವಿರಳ."

ನಂದಳಿಕೆ ಲಕ್ಷ್ಮೀನಾರಾಯಣಯ್ಯನವರಲ್ಲಿ ರಾಮರಾಯರ ಆದರ ಅಭಿಮಾನಗಳು ಅತಿಶಯ. 'ಕುಮಾರವಿಜಯ'ವನ್ನು ಓದಿ ಮೆಚ್ಚಿಕೊಂಡ ಅವರು ಕವಿಯೊಂದಿಗೆ ಪತ್ರವ್ಯವಹಾರದ ಮೂಲಕ ಪರಿಚಯ ಮಾಡಿಕೊಂಡರು. ಎಂ.ಎ. ಗಾಗಿ ಸಿದ್ಧಗೊಳಿಸಿದ ನಿಬಂಧದಲ್ಲೂ ಮುದ್ದಣ ಕವಿಯ 'ಅದ್ಭುತ ರಾಮಾಯಣ'ದ ಮೆಚ್ಚಿಗೆಯಿತ್ತು. ನಂದಳಿಕೆಯವರನ್ನು ರಾಮರಾಯರು ೧೯೦೦ನೆ ಇಸವಿ ಏಪ್ರಿಲ್ ಇಪ್ಪತ್ತರಂದು ಭೇಟಿಯಾದಾಗ ಕ್ರಿಶ್ಚಿಯನ್ ಕಾಲೇಜಿನಲ್ಲಿ ತಮ್ಮ ನಿವೃತ್ತಿಯಿಂದಾಗಿ ಕನ್ನಡ ಪಂಡಿತ ಹುದ್ದೆಯು ತೆರವಾಗುವುದನ್ನು ತಿಳಿಸಿದರು. ನಂದಳಿಕೆಯವರು ಆ ಸ್ಥಾನವನ್ನು ತುಂಬಬೇಕೆಂದು ಆಶಿಸಿ ತಮ್ಮ ಸಹಾಯವನ್ನು ಒದಗಿಸುವುದಾಗಿ ಆಶ್ವಾಸನೆಯನ್ನಿತ್ತರು. ಅದ್ಭುತ ರಾಮಾಯಣ ಮತ್ತು ರಾಮಪಟ್ಟಾಭಿಷೇಕದ ಕವಿಯು ನಂದಳಿಕೆಯವರೇ ಎಂಬ ವಿಚಾರವನ್ನು ಕವಿಯಿಂದಲೇ ರಾಮರಾಯರು ತಿಳಿದುಕೊಂಡರು.

ನಂದಳಿಕೆಯವರ 'ಜೋಜೋ' ಎಂಬ ಬರಹವು ರಾಮರಾಯರು ಸಂಪಾದಿಸುತ್ತಿದ್ದ 'ಸುವಾಸಿನಿ'ಯಲ್ಲಿ ಪ್ರಕಟಗೊಂಡಿದೆ. ನಂದಳಿಕೆಯವರ ನಿಧನದಿಂದ ಶೋಕಗೊಂಡ ಅವರು ಕವಿಯ ಪ್ರತಿಭೆಯನ್ನು ಕೊಂಡಾಡಿ ಕಂಬನಿ ಕಾಣಿಕೆಯನ್ನು ಇದೇ ಪತ್ರಿಕೆಯಲ್ಲಿ ಪ್ರಕಟಿಸಿದರು. ಈ ಲೇಖನದಲ್ಲಿ ನಂದಳಿಕೆಯವರ ನೆನಪು ಸದಾ ಉಳಿಯಬೇಕೆಂಬ ಆಶಯವೂ ವ್ಯಕ್ತವಾಗಿದೆ. 'ರಾಮಾಶ್ವಮೇಧ' ಮುಂತಾದ ಕೃತಿಗಳ ಕರ್ತೃವಿನ ನಿಜನಾಮಧೇಯದ ಸಮಸ್ಯೆಯು ಉಂಟಾದಾಗ ನಂದಳಿಕೆಯವರ ಪರವಾಗಿ ಬಲವಾದ ಸಾಕ್ಷ್ಯಗಳನ್ನು ಒದಗಿಸಿ ಅವರಿಗೆ ನ್ಯಾಯ ಸಿಗುವಂತೆ ಮಾಡಿದವರು ರಾಮರಾಯರೇ. ಪ್ರಕಟನೆಗಾಗಿ ನಂದಳಿಕೆಯವರ ಭಾವಚಿತ್ರವು ಅಲಭ್ಯವೆನಿಸಿದ ಸಂದರ್ಭದಲ್ಲಿ ಚಿತ್ರವನ್ನು ಗಳಿಸಿ ಒದಗಿಸಿದವರು ರಾಮರಾಯರೆಂದು ಪಡುಕೋಣೆ ರಮಾನಂದರಾಯರು ತಿಳಿಸಿದ್ದಾರೆ. ನಾವು ಈಗ ಎಲ್ಲೆಡೆಗಳಲ್ಲಿ ನೋಡುತ್ತಿರುವ ಮುದ್ದಣನ ಚಿತ್ರವು ರಾಮರಾಯರಿಗೆ ಮದರಾಸಿನ ವೈ. ಎಂ. ಸಿ. ಎ. ಶಾರೀರಿಕ ತರಬೇತಿ ಶಾಲೆಯಲ್ಲಿ ದೊರಕಿತಂತೆ. ಮುದ್ದಣನ ಗೌರವಾರ್ಥ ನಾಡಿನಲ್ಲಿ ಒಂದು ಉತ್ತಮ ಕಾರ್ಯಕ್ರಮ ಜರಗಬೇಕೆಂಬ ಬಯಕೆ ಅವರಲ್ಲಿತ್ತು. ಮಂಗಳೂರಿನಲ್ಲಿ ಈ ಬಗ್ಗೆ ಜರುಗಿದ ಸಭೆಯಲ್ಲಿ ಅವರೂ ಭಾಗವಹಿಸಿದ್ದರು. ಆ ವರ್ಷ ಜಿಲ್ಲೆಯಲ್ಲಿ ಮಹಾಪೂರ ಬಂದುದರಿಂದ ನಿಯೋಜಿತ ಕಾರ್ಯಕ್ರಮವು ರದ್ದಾಯಿತು. ಬೆಂಗಳೂರು ಸೆಂಟ್ರಲ್ ಕಾಲೇಜಿನಲ್ಲಿ ಮುದ್ದಣನ ನೆನಪಿಗಾಗಿ ಸಾಹಿತ್ಯಸ್ಪರ್ಧೆಯು ಏರ್ಪಾಡಾದಾಗ ಬಹುಮಾನಗಳ ವೆಚ್ಚವನ್ನು ವಹಿಸಿಕೊಂಡವರು ರಾಮರಾಯರು.

ರಾಮರಾಯರ ಖಾಸಗಿ ಗ್ರಂಥಭಂಡಾರವು ದೊಡ್ಡದಿದ್ದುದರಲ್ಲಿ ಆಶ್ಚರ್ಯವಿಲ್ಲ. ಕನ್ನಡದಲ್ಲಿ ಪ್ರಕಟವಾಗುತ್ತಿದ್ದ ಯಾವತ್ತೂ ಕೃತಿಗಳನ್ನು ಬೆಲೆಗಾಗಿ ಕೊಂಡು ಲೇಖಕರಿಗೆ ಪ್ರೋತ್ಸಾಹಿಸುತ್ತಿದ್ದವರು ರಾಮರಾಯರು. ಬೆಲೆಬಾಳುವ ಕೃತಿಯೊಂದು ಕನ್ನಡದಲ್ಲಿ ಪ್ರಕಟವಾದಾಗ ಅವರ ಸಂತೋಷ, ಉತ್ಸಾಹಗಳಿಗೆ ಮೇರೆಯಿರುತ್ತಿರಲಿಲ್ಲ. ವಿದ್ಯಾವಂತನಾದ ಪ್ರತಿಯೊಬ್ಬ ಕನ್ನಡಿಗನು ಒಂದಾದರೂ ಕನ್ನಡ ಪತ್ರಿಕೆಯನ್ನು ಕೊಳ್ಳಬೇಕು. ಆತನಲ್ಲಿ ನೂರು ನೂರು ಕನ್ನಡ ಕೃತಿಗಳ ಸಂಗ್ರಹವಾದರೂ ಇರತಕ್ಕದ್ದೆಂಬ ಆಶಯ

ವನ್ನು ರಾಮರಾಯರು ತಮ್ಮ ಸಮ್ಮೇಳನಾಧ್ಯಕ್ಷ ಭಾಷಣದಲ್ಲಿ ಸಾರಿರುವುದನ್ನು ನಾವಿಲ್ಲಿ ನೆನೆಯಬಹುದು.

ನಿತ್ಯದ ಅನುಭವಗಳನ್ನು ದಿನಚರಿಯಲ್ಲಿ ಬರೆದಿರಿಸುವ ಪರಿಪಾಠವು ರಾಮರಾಯರಲ್ಲಿತ್ತು. ನಮ್ಮ ದುರ್ದೈವದಿಂದ ಆ ದಿನಚರಿಯ ಸಂಪುಟಗಳು ಇಂದು ಲಭಿಸುತ್ತಿಲ್ಲ. ಕನ್ನಡ ನುಡಿ, ನಾಡು ಇವುಗಳ ಬಗ್ಗೆ ಎಂತಹ ಅಮೂಲ್ಯ ವಿಚಾರಗಳು ಈ ದಿನಚರಿಗಳಲ್ಲಿ ಇದ್ದಿರಬಹುದು! ಅವುಗಳು ರಾಮರಾಯರ ವ್ಯಕ್ತಿತ್ವಕ್ಕೆ ಒಂದು ಕೈಗನ್ನಡಿಯಂತಿರಬೇಕು. ರಾಮರಾಯರ ಗ್ರಂಥಸಂಪದವನ್ನು ಬೆಂಗಳೂರಿನ ಒಂದು ಸಂಸ್ಥೆಗೆ ಅವರು ದಾನವಾಗಿ ಇತ್ತರು. ಆ ಸಂಸ್ಥೆಯು ಈ ಪುಸ್ತಕಗಳನ್ನು ಉಳಿಸಿಕೊಳ್ಳಲಿಲ್ಲವೆಂಬುದು ವಿಷಾದದ ಸಂಗತಿ. ರಾಮರಾಯರಲ್ಲಿ ಇನ್ನೊಂದು ಹವ್ಯಾಸವಿತ್ತು. ಕೇವಲ ಪುಸ್ತಕ ಪತ್ರಿಕೆಗಳನ್ನಲ್ಲದೆ ಮುದ್ರಿತವಾದ ಹಸ್ತಪತ್ರಿಕೆ, ಹ್ಯಾಂಡ್‌ಬಿಲ್‌ನಂತಹವುಗಳನ್ನು ಅವರು ಜೋಪಾನವಾಗಿ ಇರಿಸುತ್ತಿದ್ದರಂತೆ.

ತಮ್ಮ ನಿವೃತ್ತ ಜೀವನವು ಕನ್ನಡಸೇವೆ ಮತ್ತು ಆಧ್ಯಾತ್ಮಿಕ ಕಾರ್ಯಗಳಿಗಾಗಿ ಮೀಸಲಾಗಿರಬೇಕೆಂಬ ಹೆಬ್ಬಯಕೆ ರಾಮರಾಯರದಾಗಿತ್ತು. ಈ ಎರಡು ಕಾರ್ಯಗಳಿಗೆ ಕನ್ನಡ ನಾಡಿನ ಹೃದಯದಂತಿದ್ದ ಬೆಂಗಳೂರು ಅನುಕೂಲವಾಗಿರುವುದನ್ನು ಮನಗಂಡ ಅವರು ಮಲ್ಲೇಶ್ವರಂನಲ್ಲಿ ಒಂದು ಸುಂದರವಾದ ಬಂಗಲೆಯನ್ನು ಕಟ್ಟಿಸಿದರು. ಶಿರಾಲಿಮಠದ ಸ್ವಾಮೀಜಿಯವರಾದ ಆನಂದಾಶ್ರಮ ಸ್ವಾಮೀಜಿಯವರ ಗೌರವಾರ್ಥ 'ಆನಂದಭಾಗ್' ಎಂಬ ಹೆಸರನ್ನು ಆ ಬಂಗಲೆಗೆ ಇಡಲಾಯಿತು.

೧೯೩೩ರಲ್ಲಿ ರಾಮರಾಯರು ತಮ್ಮ ಹುದ್ದೆಯಿಂದ ನಿವೃತ್ತರಾದಾಗ ಬೆಂಗಳೂರಿಗೆ ಬಂದರು. ಅವರ ಮಡದಿ ಮಕ್ಕಳು ಆ ಮೊದಲೇ 'ಆನಂದಭಾಗ'ನಲ್ಲಿ ನೆಲಸಿದ್ದರು. ಅನುದಿನವೂ ಕನ್ನಡ ಸಾಹಿತ್ಯ ಪರಿಷತ್ತಿಗೂ ಶ್ರೀ ರಾಮಮಂದಿರಕ್ಕೂ ರಾಮರಾಯರ ಭೇಟಿ–ಈ ಎರಡೂ ಸಂಸ್ಥೆಗಳು ರಾಮರಾಯರಿಗೆ ಪ್ರಿಯವಾಗಿದ್ದವು. ಇಲ್ಲಿನ ಎಲ್ಲಾ ಚಟುವಟಿಕೆಗಳಲ್ಲಿ ಅವರು ಆಸಕ್ತಿಯಿಂದ ಭಾಗವಹಿಸುತ್ತಿದ್ದರು.

ಬೆಂಗಳೂರಿಗೆ ಬಂದ ಅಲ್ಪಾವಧಿಯಲ್ಲೇ ರಾಮರಾಯರು ಕರ್ನಾಟಕ ಏಕೀಕರಣದ ಪ್ರಚಾರದ ಸಲುವಾಗಿ ಕರ್ನಾಟಕ ಏಕೀಕರಣ ಸಂಘವನ್ನು

ಸ್ಥಾಪಿಸಿದರು. ಆ ಸಂಘದ ಅಧ್ಯಕ್ಷತೆಯು ಅವರ ಕೊರಳಿಗೆ ಬಿದ್ದಿತು. ರಾಮರಾಯರ ಮುಂದಾಳುತನದಲ್ಲಿ ಪ್ರಚಾರಭಾಷಣ, ಪುಸ್ತಕಪ್ರಕಟಣ ಕಾರ್ಯಗಳು ಬಿರುಸಾಗಿ ನಡೆದವು. ಪಂಡಿತ ಶಿವಮೂರ್ತಿ ಶಾಸ್ತ್ರಿಯವರು ಈ ಸಂಘದ ಕಾರ್ಯದರ್ಶಿಗಳಾಗಿದ್ದರು. ರಾಮರಾಯರ ಬೆಂಬಲದಿಂದ ಅವರು 'ಸ್ವತಂತ್ರ ಕರ್ನಾಟಕ' ವೆಂಬ ಪತ್ರಿಕೆಯನ್ನೂ ಆರಂಭಿಸಿದರು. ಏಕೀಕರಣ ಸಂಘದ ವೆಚ್ಚದ ಬಹುಭಾಗವನ್ನು ರಾಮರಾಯರು ವಹಿಸುತ್ತಿದ್ದರು.

ಬೆಂಗಳೂರಿನ ಹಿರಿಕಿರಿಯ ಸಾಹಿತಿಗಳಲ್ಲಿ ಅನೇಕ ಮಂದಿ ರಾಮರಾಯರ ಸ್ನೇಹಿತರಾಗಿದ್ದರು. ಸಾಹಿತಿಗಳಲ್ಲದ ಅನೇಕರ ಗೆಳೆತನವೂ ಅವರಿಗಿತ್ತು. ಬೆಂಗಳೂರು ಗಾಂಧಿಯೆಂದು ಪ್ರಖ್ಯಾತರಾದ ಹೊಸಂಗಡಿ ಲಕ್ಷ್ಮೀನಾರಾಯಣ ರಾಯರು, ಕಂಬದಕೋಣೆ ವಿಠಲರಾಯರು, ಪಂಡಿತ ತಾರಾನಾಥರಾಯರು, ಎಫ್. ಸಿ. ಅಂಗಡಿಯವರು ಮತ್ತು ಚೆನ್ನಕೇಶವ ಅಯ್ಯಂಗಾರ್ ಮೊದಲಾದವರು ರಾಮರಾಯರ ಆತ್ಮೀಯರಲ್ಲಿ ಮುಖ್ಯರು. ಬಿ. ಬಿ. ಡಿ. ಪ್ರೆಸ್ಸಿನ ನರಸಿಂಹ ಮಲ್ಯರಿಗೆ ರಾಮರಾಯರು ಆತ್ಮೀಯ ಹಿತೈಷಿಯಾಗಿದ್ದರು. ಮಲ್ಯರು ರಾಮರಾಯರ ಪೈಕಿಯವರೇನೂ ಅಲ್ಲದಿದ್ದರೂ ಅವರ ಬಾಂಧವ್ಯವು ಮಧುರವಾಗಿತ್ತು. ಮಲ್ಯರ ಜೀವನದ ಹೋರಾಟದಲ್ಲಿ ರಾಮರಾಯರ ನೆರವು, ಬೆಂಬಲಗಳು ಪ್ರಧಾನವಾಗಿದ್ದವು. ಇತರರ ಕಷ್ಟಗಳಲ್ಲಿ ತಾವಾಗಿಯೇ ನೆರವನ್ನೀಯುವ ರಾಮರಾಯರು ಕಲಾಮಂದಿರದ ಅ. ನ. ಸುಬ್ಬರಾಯರು ಸ್ವದೇಶಿ ಉದ್ಯಮವನ್ನು ಸ್ಥಾಪಿಸಿದಾಗ ವಿಶೇಷವಾದ ಸಹಾಯವನ್ನಿತ್ತಿದ್ದರು. ಆ ಉದ್ಯಮದಲ್ಲಿ ಸುಬ್ಬರಾಯರು ಸೋತಾಗ ರಾಮರಾಯರು ದೊಡ್ಡ ಮೊತ್ತದ ಹಣವನ್ನು ಕಳಕೊಂಡರೂ ಬೇಸರಪಟ್ಟವರಲ್ಲ.

ರಾಮರಾಯರ ಆಪ್ತವರ್ಗದಲ್ಲಿ ಪಂಜೆ ಮಂಗೇಶರಾಯರನ್ನು ಮರೆಯಲಾಗುವುದಿಲ್ಲ. ಪಂಜೆಯವರು ರಾಮರಾಯರ ಸೋದರಿಯನ್ನೇ ಮದುವೆಯಾದ ಭಾವನೆಂಟರೂ ಹೌದು. ಈರ್ವ ಭಾವನೆಂಟರು ಕನ್ನಡ ಸಾಹಿತ್ಯದ ಬೆಳವಣಿಗೆಗಾಗಿ ಜತೆಯಾಗಿ ದುಡಿದ ಇಂತಹ ಸಂದರ್ಭ ನಮ್ಮ ಸಾಹಿತ್ಯದ ಇತಿಹಾಸದಲ್ಲಿ ವಿರಳ. 'ಸುವಾಸಿನಿ' ಸಂಪಾದನದಲ್ಲಿ ಈರ್ವರೂ ದುಡಿದಿದ್ದಾರೆ. 'ಮುಂಗೈ ಆಡಿದರೆ ಮೊಳಕೈ ಆಡುತ್ತದೆ' ಎಂಬುದು ಬೆನಗಲ್-ಪಂಜೆಯವರ ಆತ್ಮೀಯ ಸಂಬಂಧದ ಕುರಿತು ಗೋವಿಂದಪೈಯವರು ಹೇಳಿದ ಮಾತು ಉಚಿತವಾಗಿಯೇ

ಇದೆ.' ಉಲ್ಲಾಳ ಮಂಗೇಶರಾಯರೂ ರಾಮರಾಯರ ಆತ್ಮೀಯ ಸ್ನೇಹಿತರಲ್ಲೊಬ್ಬರಾಗಿದ್ದರು.

ತಂದೆ ತಾಯಂದಿರ ಸೇವೆ ಮತ್ತು ಒಡಹುಟ್ಟಿದವರ ಲಾಲನೆಪಾಲನೆಗಳನ್ನು ರಾಮರಾಯರು ಕುಂದಿಲ್ಲದ ರೀತಿಯಲ್ಲಿ ಶಕ್ತಿಮೀರಿ ಮಾಡಿದ್ದರು. ಸ್ವಂತ ಸೌಖ್ಯ ಮುಖ್ಯವಾಗಿರಲಿಲ್ಲ ಅವರಿಗೆ. ವಿಲಾಸಪ್ರಿಯರೂ ಅವರಲ್ಲ. ಆದರೆ ಕನ್ನಡ ಸೇವೆ ಮತ್ತು ಕಲಾರಾಧನೆಗಳ ಕಾರಣಗಳಿಂದಾಗಿ ತಮ್ಮ ಮಡದಿ ಮಕ್ಕಳ ಸುಖಸೌಕರ್ಯದತ್ತ ಗಮನಹರಿಸಲು ರಾಮರಾಯರಿಗೆ ವೇಳೆ ಸಿಗುತ್ತಿರಲಿಲ್ಲ. ಬದಲಾಗಿ ರಾಮರಾಯರ ಅಸಂಖ್ಯ ಅತಿಥಿಬಳಗದ ಯೋಗ ಕ್ಷೇಮ, ಆತಿಥ್ಯದ ಹೊಣೆ ಶ್ರಮ ಬೇರೆ. ತಮ್ಮ ಬಳಗದ ಯೋಗಕ್ಷೇಮವನ್ನು ದೇವರೇ ನೋಡಿಕೊಳ್ಳುತ್ತಾನೆಂಬ ವಿಶ್ವಾಸ ಬೇರೆ. ರಾಮರಾಯ ದಂಪತಿಗಳು ಐದು ಸದ್ಗುಣಶೀಲರಾದ ಮಕ್ಕಳನ್ನು ಪಡೆದರು. ಹಿರಿಯ ಪುತ್ರ ಭಾಸ್ಕರ ರಾಯರು ಆಟೋಟಗಳಲ್ಲಿ ಮದರಾಸು ನಗರದಲ್ಲಿ ಪ್ರಸಿದ್ಧಪಟುವಾಗಿದ್ದರು. ಅವರಿಗೆ ಪೋಲೀಸು ಇಲಾಖೆಯಲ್ಲಿ ಉನ್ನತ ಹುದ್ದೆಯು ಸಿಗುವ ಸಂದರ್ಭ ವಿದ್ದಾಗ ರಾಮರಾಯರು ಈ ನೇಮಕ ಬೇಡವೆಂದರು. ತಮ್ಮ ಪುತ್ರ ಬ್ರಿಟಿಷ್ ಸರಕಾರದಲ್ಲಿ ಅದೂ ಪೋಲೀಸ್ ಇಲಾಖೆಯಲ್ಲಿರುವುದು ಅವರಿಗೆ ಹಿತವೆಂದು ಕಾಣಲಿಲ್ಲ. ತಮ್ಮ ವರ್ಚಸ್ಸಿನಿಂದ ಭಾಸ್ಕರರಾಯರಿಗೆ ಒಳ್ಳೆಯ ಉದ್ಯೋಗ ದೊರಕಿಸುವುದು ರಾಮರಾಯರಿಗೆ ಕಷ್ಟದ ಕೆಲಸವಾಗಿರಲಿಲ್ಲ. ಇಂತಹ ಮಾರ್ಗಗಳು ರಾಮರಾಯರ ಧೋರಣೆಗೆ ವಿರುದ್ಧವಾಗಿದ್ದವು.

ತಮ್ಮ ಮಕ್ಕಳು ಒಳ್ಳೆಯವರಾಗಿ ಬಾಳುವುದೇ ರಾಮರಾಯರಿಗೆ ಮುಖ್ಯವಾಗಿತ್ತಲ್ಲದೆ ಧನಲಾಭ, ದೌಲತ್ತುಗಳಲ್ಲ. ತಮ್ಮ ಉತ್ತಮ ನಡತೆಯ ಮೂಲಕ ಮಕ್ಕಳ ಶೀಲವನ್ನು ಅವರು ರೂಪಿಸಿದರು. ಪರೋಪದೇಶ ಪಾಂಡಿತ್ಯ ಅವರಲ್ಲಿರಲಿಲ್ಲ. "....ತಂದೆಯವರು ಸಾತ್ವಿಕ ಸ್ವಭಾವದವರಾಗಿದ್ದು ಗುರುಹಿರಿಯರಲ್ಲಿ ಬಹಳ ಭಕ್ತಿಯುಳ್ಳವರಾಗಿದ್ದರು. ತಮ್ಮ ಸತ್ಯಸಂಧತೆಯನ್ನು ಯಾವಾಗಲೂ ಕೆಡದಂತೆ ನೋಡಿಕೊಳ್ಳುತ್ತಿದ್ದರು, ತಮ್ಮ ನಿಮಿಷ, ನಿಮಿಷದ ಆಚರಣೆಯನ್ನು ಪರಿಶೀಲಿಸುತ್ತಿದ್ದರು. ಒಳ್ಳೆಯ ಕ್ರಮಗಳನ್ನು

೧ ಸಂಜೆಯವರ ನೆನಪಿಗಾಗಿ

ಸ್ವತಃ ಆಚರಿಸಿ ನಮಗೆ ಮೇಲ್ಪಂಕ್ತಿಯನ್ನು ಹಾಕಿಕೊಡುತ್ತಿದ್ದರು. ಅವರನ್ನು ಕೆಲವು ಕಾರಣಗಳಿಂದಾಗಿ ಕೆಲವರು ಅವಹೇಳನ ಮಾಡಿದಾಗ, ನಮ್ಮ ತಂದೆಯವರು ಆ ವಿಷಯಗಳಿಗೆ ನಾವು ಗಮನಕೊಡಬಾರದಾಗಿಯೂ- ಬೆಳಕಿಗೆ ವಿರೋಧಿಯಾಗಿ ಕತ್ತಲಿರುವಂತೆ, ಗೌರವಕ್ಕೆ ವಿರೋಧಿಯಾಗಿ ಅವಹೇಳನ ಇರುತ್ತದೆ ಎಂದು ನಗುತ್ತಾ ಅಂತಹ ಸಂದರ್ಭಗಳನ್ನು ಸಾಗಹಾಕುತ್ತಿದ್ದರು.[1]

ರಾಮರಾಯರ ಇನ್ನೊಬ್ಬ ಪುತ್ರರಾದ ನಾಗೇಶರಾಯರಿಗೆ ಸಂಗೀತ ಪ್ರತಿಭೆಯು ಜನ್ಮದತ್ತವಾಗಿ ಬಂದುದನ್ನು ಗಮನಿಸಿದ ರಾಮರಾಯರು ಈ ಬಗ್ಗೆ ಸಂತೋಷಿಸಿದರು. ಸಂಗೀತವಿದ್ಯೆಯಲ್ಲಿ ನಾಗೇಶರಾಯರು ಪ್ರಾವಿಣ್ಯ ಗಳಿಸಲೆಂದೇ ಅವರನ್ನು ಮುಂಬಯಿಗೆ ರಾಮರಾಯರು ಕಳಿಸಿದ್ದನ್ನು ನೋಡಿದಾಗ ಅವರ ಕಲಾಪ್ರೇಮ, ಮನೋವೈಶಾಲ್ಯ ಎದ್ದು ಕಾಣುತ್ತವೆ. ಸಂಗೀತವನ್ನು ಕಲಾರಾಧನೆಯ ಉದ್ದೇಶಕ್ಕಾಗಿಯಲ್ಲದೆ ಹಣಸಂಪಾದನೆಗಾಗಿ ಉಪಯೋಗಿಸಬಾರದೆಂಬ ದೃಷ್ಟಿ ಅವರದಿತ್ತು. ನಾಗೇಶರಾಯರು ಹಣಸಂಪಾದನೆಗಾಗಿ ಕಲೆಯನ್ನು ಬಳಸುವುದಿಲ್ಲವೆಂಬ ಆಶ್ವಾಸನೆಯನ್ನು ತಮ್ಮ ತಂದೆಯವರಿಗೆ ಇತ್ತಿದ್ದರು. ಅದನ್ನು ಪರಿಪಾಲಿಸುತ್ತಾ ಬಂದಿದ್ದಾರೆ. "ಕನ್ನಡ ಪುಸ್ತಕ, ವೃತ್ತಪತ್ರಿಕೆಗಳನ್ನು ಬೇರೊಬ್ಬರಿಂದ ಪಡೆದು ಓದಬಾರದು, ಸಾಧ್ಯವಾದಷ್ಟು ಸ್ವಸಂಪಾದನೆಯಿಂದ ಬೆಲೆಗೆ ಕೊಂಡು ಓದಬೇಕು ಮತ್ತು ಈ ಮೂಲಕ ಲೇಖಕರ ಅಭಿವೃದ್ಧಿಗೆ ಸಹಾಯ ಮಾಡಬೇಕು. ಅತ್ಯಂತ ಮುಖ್ಯವಾಗಿ ಅವರು ನನ್ನಿಂದ ಪಡೆದ ವಾಗ್ದಾನವೆಂದರೆ ನನ್ನ ಯಾವ ತರಹದ ಕಾರ್ಯಕಲಾಪಗಳೂ ಕನ್ನಡಮಾತೆಯ ಪೂಜ್ಯತೆಗೆ ಕಿಂಚಿತ್ ಮಾತ್ರವೂ ಕುಂದನ್ನು ತರುವಂತಹದಾಗಬಾರದು."[2] ರಾಮರಾಯರ ಕನ್ನಡಪ್ರೇಮ ಹೇಗಿತ್ತೆನ್ನುವುದಕ್ಕೆ ಬೇರೆ ನಿದರ್ಶನ ಅನಗತ್ಯ.

ನಾಡಿನ ಏಕೀಕರಣ ಮತ್ತು ಸಾಹಿತ್ಯ ಸೇವೆಗಳಲ್ಲಿ ರಾಮರಾಯರ ದುಡಿಮೆಯನ್ನು ಇನ್ನೊಂದೆಡೆಯಲ್ಲಿ ನಾವು ಗಮನಿಸಲಿದ್ದೇವೆ. ಕನ್ನಡ ನಾಡು ರಾಮರಾಯರ ಅಪಾರವಾದ ಕನ್ನಡಸೇವೆಯನ್ನು ೧೯೨೫ ರಷ್ಟು

೧-೨ ಶ್ರೀ ನಾಗೇಶರಾಯರ ಪತ್ರ-ಲೇಖಕನಿಗೆ

ಹಿಂದೆಯೇ ಗುರುತಿಸಿತ್ತು. ೧೯೨೩ ರಲ್ಲಿ ಬಿಜಾಪುರದಲ್ಲೂ ೧೯೨೪ ರಲ್ಲಿ ಕೋಲಾರದಲ್ಲೂ ಸಾಹಿತ್ಯ ಸಮ್ಮೇಳನಗಳಾದಾಗ ಅವಕ್ಕೆ ಅಧ್ಯಕ್ಷರಾಗಬೇಕೆಂಬ ಅಪೇಕ್ಷೆಯುಂಟಾದಾಗ ರಾಮರಾಯರು ಒಪ್ಪಲಿಲ್ಲ. ೧೯೨೫ ರಲ್ಲಿ ಜರುಗಿದ ಬೆಳಗಾವಿ ಸಮ್ಮೇಳನದ ಅಧ್ಯಕ್ಷರನ್ನಾಗಿ ಆರಿಸಿದಾಗ ರಾಮರಾಯರಿಗೆ ಕನ್ನಡಿಗರು ಸಲ್ಲಿಸಬಹುದಾದ ಹಿರಿಯ ಗೌರವವು ಸಿಕ್ಕಿತೆನ್ನಬಹುದು.

೧೯೪೩ ನೆಯ ಇಸವಿಯ ಮಾರ್ಚ್ ಇಪ್ಪತ್ತೆಂಟರಂದು ಸಾಹಿತ್ಯ ಪರಿಷತ್ತು ರಾಮರಾಯರನ್ನು ಚ. ವಾಸುದೇವಯ್ಯ ಮತ್ತು ಬೆಳ್ಳಾವೆ ವೆಂಕಟನಾರಣಪ್ಪನವರೊಂದಿಗೆ ತನ್ನ ಚರಿತ್ರೆಯಲ್ಲೇ ನೂತನವಾದ ರೀತಿಯಲ್ಲಿ ಗೌರವಿಸಿತು. ಅಮೋಘವಾದ ರೀತಿಯಲ್ಲಿ ಕನ್ನಡ ನುಡಿಯ ಸೇವೆಯನ್ನು ಮಾಡಿದ ಈ ಮೂರು ವ್ಯಕ್ತಿಗಳನ್ನು ಪರಿಷನ್ಮಂದಿರಕ್ಕೆ ಬರಮಾಡಿಸಿ ಅಭಿನಂದಿಸಲಾಯಿತು. ಅವರುಗಳ ಭಾವ ಚಿತ್ರಗಳನ್ನು ಮಂದಿರದಲ್ಲಿ ತೂಗುಹಾಕಿದರು. ಕೀರ್ತಿಶೇಷ ಸಾಹಿತಿಗಳ ಹಾಗೂ ಮೈಸೂರು ಒಡೆಯರುಗಳ ಭಾವಚಿತ್ರಗಳನ್ನು ಮಾತ್ರ ಈ ಮಂದಿರದಲ್ಲಿ ಅದುವರೆಗೆ ತೂಗುಹಾಕಿದ್ದರು. ಆ ಸಮಾರಂಭದ ಅಧ್ಯಕ್ಷತೆಯನ್ನು ದಿವಾನ್ ಮಾಧವರಾಯರು ವಹಿಸಿದ್ದರು. ತಮ್ಮನ್ನು ಕೀರ್ತಿಶೇಷರ ಸಾಲಿಗೆ ಸೇರಿಸಿದರೆಂದು ರಾಮರಾಯರು ತಮ್ಮ ಬಗ್ಗೆ ತಾವೇ ವಿನೋದವಾಗಿ ಹೇಳುತ್ತಿದ್ದರಂತೆ. ಈ ಗೌರವ ಸಮಾರಂಭವು ಜರುಗಿದ ಆರೇಳು ವಾರಗಳಲ್ಲಿ ರಾಮರಾಯರು ನಮ್ಮನ್ನು ಅಗಲಿದರು.

ರಾಮರಾಯರ ಆರಾಧ್ಯ ದೇವತೆಯ ಕುರಿತು ಒಂದೆರಡು ಮಾತುಗಳು ಇಲ್ಲಿ ಪ್ರಸ್ತುತ. ಕಾಸರಗೋಡು ನಗರದಲ್ಲಿ ಅಸಂಖ್ಯ ಆಸ್ತಿಕರಿಂದ ಪೂಜಿಸಲ್ಪಡುವ ಶ್ರೀ ಕೊರಕ್ಕೋಡು ಕ್ಷೇತ್ರದ ಅಧಿದೇವತೆ ಶ್ರೀ ಮದಾರ್ಯಾಕಾತ್ಯಾಯಿನೀ ದೇವಿಯನ್ನು ರಾಮರಾಯರು ಅನನ್ಯ ಭಕ್ತಿಯಿಂದ ಆರಾಧಿಸುತ್ತಿದ್ದರು. ಶ್ರೀದೇವಿಯೂ ಈ ಭಕ್ತನಿಗೆ ಒಲಿದು ತನ್ನ ಕೃಪಾಕಟಾಕ್ಷವನ್ನು ಬೀರಿದ್ದಳೆಂದು ವ್ಯಕ್ತವಾಗಿದೆ. ಸ್ವಪ್ನದಲ್ಲಿ ಶ್ರೀದೇವಿಯು ರಾಮರಾಯರಿಗೆ ಸಂದೇಶಗಳನ್ನು ತಿಳಿಸಿದ ಹಲವು ಪ್ರಸಂಗಗಳು ಇದ್ದುವಂತೆ. ಎಂತಹ ಪ್ರಾಪಂಚಿಕ ಚಿಂತೆಗಳೂ ರಾಮರಾಯರನ್ನು ವಿಚಲಿತಗೊಳಿಸುತ್ತಿರಲಿಲ್ಲ; ಶ್ರೀದೇವಿಯು ತಮ್ಮ ಸಮಸ್ಯೆಗಳನ್ನೆಲ್ಲ ಪರಿಹರಿಸುತ್ತಾಳೆ ಎಂಬ ಸಂಪೂರ್ಣ ಶ್ರದ್ಧೆ ಅವರಿಗಿತ್ತು.

" ಮಾನ್ಯ ಕಾತ್ಯಾಯಿನಿಯೆ ನಿನ್ನೊಲುಮೆಗೀಡಾಗಿ
ಧನ್ಯನೆನಿಸಿದ ರಾಮಗಿನ್ನೇಕೆ ಚಿಂತೆ " — ಇದು ರಾಮರಾಯರು ಶ್ರೀದೇವಿಸ್ತುತಿ ಪರವಾಗಿ ರಚಿಸಿದ ಹಾಡೊಂದರ ಸೊಲ್ಲು.

ಜ್ಯೋತಿಷ್ಯ ಶಾಸ್ತ್ರದಲ್ಲಿ ರಾಮರಾಯರಿಗೆ ಪರಿಶ್ರಮವಿತ್ತು. ತಮ್ಮ ಹಿರಿಯ ಪುತ್ರ ಭಾಸ್ಕರರಾಯರ ಮದುವೆಯ ನಿರ್ಧಾರ ಮಾಡುವ ಪೂರ್ವ ದಲ್ಲಿ ಅವರಿಗೆ ತಮ್ಮ ಕೊನೆಯು ಸಮೀಪಿಸುತ್ತಿರುವ ಸೂಚನೆಯಾದಂತಿದೆ. ಮುಂಬಯಿಯಲ್ಲಿದ್ದ ಕನ್ಯೆಯನ್ನು ಮುಖತಃ ನೋಡದೆ ಕೇವಲ ಜನ್ಮ ಕುಂಡಲಿಯ ಆಧಾರದಿಂದಲೇ ಒಪ್ಪಿದವರು ಅವರು. ಈ ಮದುವೆಯು ಪ್ರಶಸ್ತವೆನ್ನುವಂತೆ ಶ್ರೀ ಕೊರಕ್ಕೋಡು ದೇವಿಯಿಂದಲೂ ಅನುಕೂಲ ದಾಯಕ ಪ್ರಸಾದವು ಬಂದಿತ್ತು. ರಾಮರಾಯರು ಆರೋಗ್ಯವಂತರಾಗಿ ದ್ದರೂ ಈ ಮದುವೆಯ ಮೊದಲೇ ತಾವು ಎಲ್ಲರನ್ನು ಅಗಲುವ ಸಂಭವವು ಅವರಿಗೆ ಹೊಳೆದುದರಿಂದ ತಾವು ನಿರ್ಧರಿಸಿ ಶ್ರೀದೇವಿಯ ಪ್ರಸಾದವನ್ನು ಪಡೆದ ಈ ವಿವಾಹವು ಯಾವ ಸಂದರ್ಭದಲ್ಲೂ ನಿಲ್ಲಲಾಗದೆಂದು ರಾಮ ರಾಯರು ತಮ್ಮವರಿಗೆ ತಿಳಿಸಿದ್ದರು. ಮುಂಬಯಿಯಲ್ಲಿ ಜರುಗಬೇಕಾಗಿದ್ದ ಮದುವೆಗಾಗಿ ಎಲ್ಲರೂ ಹೊರಡುವ ಸಿದ್ಧತೆ ಮಾಡುತ್ತಿರುವಂತೆಯೇ ರಾಮ ರಾಯರಿಗೆ ಮೇಲಿಂದ ಕರೆಬಂತು. ತಮ್ಮ ಕೊನೆಯ ಗಳಿಗೆಯಲ್ಲಿ ಅವರು ತಮ್ಮವರನ್ನೆಲ್ಲಾ ಸಮೀಪಕ್ಕೆ ಕರೆಸಿಕೊಂಡು ಎಲ್ಲರನ್ನೂ ಹರಸಿ ದೇವರ ನಾಮವನ್ನು ಹೇಳುತ್ತಾ ಪ್ರಸನ್ನ ಮನಸ್ಸಿನಿಂದ ನಿರಾಯಾಸವಾಗಿ ಈ ಪ್ರಪಂಚ ವನ್ನು ಬಿಟ್ಟು ತೆರಳಿದರು. ಇದು ೧೯೪೩ ರ ಮೇ ಎಂಟರಂದು ನಡೆಯಿತು. ರಾಮರಾಯರ ಅಪೇಕ್ಷೆಯಂತೆ ಸ್ವಲ್ಪ ಕಾಲಾವಧಿಯ ಬಳಿಕ ಮದುವೆಯು ನೆರವೇರಿತು. ತಾವು ಕಂಡಿರದ ಭಾವೀ ಸೊಸೆಯೊಂದಿಗೆ ಅವರು ಪತ್ರ ಮುಖೇನ ಸಂಪರ್ಕವಿರಿಸಿ ಹರಸಿದ್ದರು.

ಕನ್ನಡದ ಹಿರಿಯ ಸೇನಾನಿಯೊಬ್ಬರ ನಿಧನವು ನಾಡನ್ನು ಶೋಕಕ್ಕೆ ಒಳಪಡಿಸಿತು. ಕರ್ನಾಟಕದ ಪ್ರಮುಖ ಪತ್ರಿಕೆಗಳು ರಾಮರಾಯರ ಗುಣ ಗಾನವನ್ನು ಮಾಡಿ, ಅವರ ಮರಣಕ್ಕಾಗಿ ಶೋಕವನ್ನು ವ್ಯಕ್ತಪಡಿಸಿದವು. "....ದಿವಂಗತರು ನಾಡುನುಡಿಗಳ ಭಕ್ತರಾಗಿದ್ದಂತೆಯೇ ದೈವಭಕ್ತರಾಗಿದ್ದರು. ಕನ್ನಡಕ್ಕಾಗಿ ದುಡಿಯುವುದರಲ್ಲಿ ಅವರಿಗೆ ಎಷ್ಟು ಪ್ರೀತಿ ! ಹಿರಿಯರ ವಿವೇಕವೂ

ಕಿರಿಯರ ಉತ್ಸಾಹವೂ ಅವರಲ್ಲಿ ಒಟ್ಟುಗೂಡಿದ್ದವು. ಅವರಲ್ಲಿದ್ದ ಮತ್ತೊಂದು ದೊಡ್ಡ ಗುಣವೆಂದರೆ-ತಮಗೆ ಪರಿಚಿತರಿಂದಲೇ ಆಗಲಿ, ಪರಿಚಿತರಲ್ಲದವರಿಂದಲೇ ಆಗಲಿ, ಉತ್ತಮ ಗ್ರಂಥಗಳು ಯಾರಿಂದ ಹೊರಬಿದ್ದರೂ, ದಿವಂಗತರು ಮಮತೆಯಿಂದಲೂ, ಪ್ರೀತಿಯಿಂದಲೂ ಶ್ಲಾಘಿಸಿ, ಪ್ರೋತ್ಸಾಹ ಕೊಡುತ್ತಿದ್ದರು. ಗುಣ ಪಕ್ಷಪಾತಿಗಳಾಗಿ ಸದಾ ಸಂತೋಷಚಿತ್ತದಿಂದ ಇದ್ದು, ಆದರ ತೋರಿಸುತ್ತಿದ್ದರು. ಹಿರಿಯರೊಡನೆ ಹಿರಿಯರಾಗಿ, ಕಿರಿಯರೊಡನೆ ಕಿರಿಯರಾಗಿ ಎಲ್ಲರೊಡನೆಯೂ, ಸ್ನೇಹ, ಮಮತೆಗಳಿಂದ ವರ್ತಿಸುತ್ತಿದ್ದರು. ಈ ಇಳಿ ವಯಸ್ಸಿನಲ್ಲಿ ಕೂಡ ಇನ್ನೂ ಅನೇಕ ಗ್ರಂಥಗಳನ್ನು ರಚಿಸಿ ಭಾಷಾಸೇವೆ ಮಾಡಬೇಕೆಂಬ ಉತ್ಸಾಹದಿಂದ ಕೂಡಿದ್ದರು."[1]

ರಾಮರಾಯರು ಕೊನೆಯುಸಿರನ್ನೆಳೆದಾಗ ಅವರ ಮನೆತುಂಬ ಮಂದಿ. ನಿವೃತ್ತಿ ವೇತನದ ಹೊರತಾಗಿ ಜೀವನಕ್ಕಾಗಿ ಬೇರೆ ಆರ್ಥಿಕ ವ್ಯವಸ್ಥೆಯಾಗಲೀ, ಉಳಿತಾಯವಾಗಲೀ ಇರಲಿಲ್ಲ. ಸ್ವಂತದ ಬಗ್ಗೆ ಹಣವನ್ನು ಕೂಡಿಹಾಕುವ ಪ್ರವೃತ್ತಿಯು ಅವರಲ್ಲಿರಲಿಲ್ಲ. ಕರ್ತವ್ಯ ಪರಿಪಾಲನೆ, ಅನ್ಯರಿಗೆ ಸಹಾಯ ಇವುಗಳಲ್ಲೇ ಮಗ್ನರಾಗಿದ್ದ ಅವರಲ್ಲಿ ನಾಳಿನ ಚಿಂತೆಯಿರಲಿಲ್ಲ. ಅಲ್ಲದೆ ತನ್ನನ್ನು ಕಾಯಲು ದೇವರಿದ್ದಾನೆಂಬ ಅಚಲ ವಿಶ್ವಾಸ. ರಾಮರಾಯರ ಮರಣಾನಂತರ ಕುಟುಂಬವು ಆರ್ಥಿಕ ಸಮಸ್ಯೆಗಳಿಗೆ ಒಳಗಾಗಿ ಸುಂದರವಾದ 'ಆನಂದ ಭಾಗ'ನ್ನು ಮಾರಾಟಮಾಡಬೇಕಾಯಿತು.[2]

1 'ಕನ್ನಡ ನುಡಿ'

2 ಈ ಮನೆಯಲ್ಲಿ ಈಗ ಚಲನಚಿತ್ರ ತಾರೆ ಸರೋಜಾದೇವಿ ನೆಲಸಿದ್ದಾರೆ.

ಏಕೀಕರಣ ಮತ್ತು ನಾಡುನುಡಿಗಳ ಸೇವೆ

"ಎಲ್ಲೇ ಆಗಲಿ, ಒಂದು ಭಾಷೆ ಮಾತಾಡುವವರೆಲ್ಲ ತಾವು ಒಂದು ಎಂಬ ಭಾವನೆ ಇಟ್ಟುಕೊಂಡಿರುತ್ತಾರೆ. ಆಂಧ್ರ, ಮಹಾರಾಷ್ಟ್ರ, ಬಂಗಾಳ ಈ ನಾಡುಗಳಲ್ಲಿ ಈ ಜನಾಂಗ ಭಾವನೆ ಚೆನ್ನಾಗಿ ಹರಡಿ ಆ ನಾಡವರಲ್ಲಿ ಬಹಳ ಒಗ್ಗಟ್ಟು ಉಂಟಾಗಿದೆ. ನಾಡಿನಲ್ಲಿ ಎಷ್ಟೇ ಜಾತಿ, ಕೋಮುಗಳಿರಲಿ ಸಂಸ್ಕೃತಿ ಒಂದಾಗಿದ್ದು ಮಾತಾಡುವ ಭಾಷೆ ಒಂದಾಗಿದ್ದರೆ ಆ ನಾಡು ಒಂದುಗೂಡುವುದು ಸಾಧ್ಯ. ಕನ್ನಡನಾಡಿಗೆ ಒಂದು ಗಣ್ಯವಾದ ಭಾಷೆಯಿದೆ, ಮೇಲಾದ ಸಂಸ್ಕೃತಿಯಿದೆ. ಕನ್ನಡ ನಾಡಿನಲ್ಲಿ ಮಹಾರಾಷ್ಟ್ರೀಯರಿರಬಹುದು; ಆಂಧ್ರರು ನೆಲಸಿರಬಹುದು. ಆದರೆ ನಮ್ಮ ಮಟ್ಟಿಗೆ ಅವರು ಕನ್ನಡಿಗರೇ; ಅವರಾದರೂ ಅದೇ ಭಾವನೆಯನ್ನು ಇಟ್ಟುಕೊಂಡಿದ್ದಾರೆಂದು ನಾವು ನಂಬುತ್ತೇವೆ.

ಕರ್ನಾಟಕದಲ್ಲಿ ಯಾವ ಭಾಗದಲ್ಲೇ ಆಗಲಿ, ಕನ್ನಡ ಭಾಷಾ ಸಾಹಿತ್ಯಗಳ ಪ್ರಭಾವವೂ ಸಂಸ್ಕೃತಿಯ ಕ್ಷೇತ್ರವೂ ಕಡಮೆಯಾಗದಂತೆ ನೋಡಿಕೊಳ್ಳಬೇಕು. ಕನ್ನಡಿಗರೆಲ್ಲ ಒಂದು, ನಾವೆಲ್ಲ ಒಂದು ಎಂಬ ಭಾವನೆ ಸದಾ ಕನ್ನಡಿಗರ ಮನಸ್ಸಿನಲ್ಲಿ ನೆಲಸಿರಬೇಕು. ಪರಭಾಷೆಗಳಿಗೆ ಯಾವ ಕನ್ನಡಿಗನೂ ಮುಖ್ಯವಾಗಿ ಗಡಿನಾಡಿಗನು ಮನಸೋಲದಂತೆ, ಅಡಿಯಾಳಾಗದಂತೆ, ನೋಡಿಕೊಳ್ಳಬೇಕು. ಇದು ನೆರವೇರಬೇಕಾದರೆ ಸರ್ವದಾ ಪ್ರಚಾರ ಮಾಡುತ್ತಿರಬೇಕು. ಇದೇ ಕನ್ನಡನಾಡಿನ ಏಕೀಕರಣ"[1]

1 'ಕನ್ನಡ ನುಡಿ', ನವಂಬರ್ ೩, ೧೯೩೪

ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ರಾಮರಾಯರು ನಾಡಹಬ್ಬದ ಆಚರಣೆಯ ಸಂದರ್ಭದಲ್ಲಿ ಸಾರಿದ ಮಾತುಗಳಿವು. ಅವರು ೧೯ನೆಯ ಶತಮಾನದ ಕೊನೆಯಲ್ಲಿ ವಿದ್ಯಾರ್ಥಿಯಾಗಿರುವಾಗ ಕನ್ನಡ ಸಾಹಿತ್ಯದ ದೀನಾವಸ್ಥೆಯನ್ನು ಕಂಡು ವಿಚಾರಕ್ಕೆ ಒಳಗಾದರು. ಕನ್ನಡದ ಪ್ರಾಚೀನ ಸಾಹಿತ್ಯ, ಇತಿಹಾಸಗಳೇನೂ ಸಣ್ಣವಾಗಿರಲಿಲ್ಲ. ಕನ್ನಡ ಸಾಹಿತ್ಯದ ಪರಿಸ್ಥಿತಿಯನ್ನರಿತ ಅವರಿಗೆ ನಾಡಿನ ರಾಜಕೀಯ ಆರ್ಥಿಕ ಪರಿಸ್ಥಿತಿಗಳೂ ನಿರಾಶಾದಾಯಕವಾಗಿರುವುದು ಕಂಡುಬಂತು. ಉತ್ತಮ ಪರಂಪರೆಯ ಜನಾಂಗವೊಂದು ಅಭಿಮಾನ ಶೂನ್ಯತೆಯಿಂದಾಗಿ ನಿರ್ಜೀವವಾಗಿರುವುದನ್ನು ಕಂಡ ರಾಮರಾಯರು ಜನರಲ್ಲಿ ಜಾಗೃತಿಯನ್ನು ಉಂಟುಮಾಡುವ ನಿರ್ಧಾರವನ್ನು ಮಾಡಿದರು. ಕನ್ನಡ ನಾಡು ಹೋಳು ಹೋಳಾಗಿ ಅನ್ಯ ಪ್ರದೇಶಗಳಲ್ಲಿ ಸ್ಥಾನಮಾನ, ಅವಕಾಶಗಳಿಲ್ಲದೆ ಇರುವ ವಿಚಾರವು ಸ್ಪಷ್ಟವಾಗಿ ಹೊಳೆದುದು ರಾಮರಾಯರಿಗೆ. ಪರಭಾಷಾ ಮತ್ತು ಪರಸಂಸ್ಕೃತಿಯ ಮೋಹಕ್ಕೆ ಒಳಗಾದ ವಿದ್ಯಾವಂತರು ತಮ್ಮ ನಾಡಿನ ಹಾಗೂ ಜನರ ಸಮಸ್ಯೆಗಳಲ್ಲಿ ಆಸಕ್ತರಿರಲಿಲ್ಲ. ವಿದ್ಯಾವಂತರಲ್ಲಿ ಇತಿಹಾಸ, ಪರಂಪರೆಗಳ ಪರಿಜ್ಞಾನ ಮೂಡಿಸಿ, ಕರ್ತವ್ಯ ಪ್ರಜ್ಞೆಯನ್ನುಂಟುಮಾಡುವುದರಿಂದ ನಾಡಿನ ಏಳಿಗೆ, ಜನತೆಯ ಕಲ್ಯಾಣವಾಗುತ್ತದೆ ಎಂಬ ಖಚಿತ ಅಭಿಪ್ರಾಯವು ಅವರದ್ದಾಗಿತ್ತು. ಪತ್ರಿಕೆಗಳು ಈ ಕಾರ್ಯವನ್ನು ಚೆನ್ನಾಗಿ ಸಾಧಿಸಬಲ್ಲವೆಂಬುದನ್ನು ಅರಿತ ಅವರು ತಮ್ಮ 'ಸುವಾಸಿನಿ' ಪತ್ರಿಕೆಯ ಮೂಲಕ ಜಾಗೃತಿಯ ಕಾರ್ಯವನ್ನು ಆರಂಭಿಸಿದರು. ಸೃಷ್ಟಿಶೀಲ ಲಲಿತ ಸಾಹಿತ್ಯದಷ್ಟೇ, ಜ್ಞಾನ ಸಾಹಿತ್ಯವೂ ಅವಶ್ಯವೆಂದು ರಾಮರಾಯರು ನಿರ್ಧರಿಸಿ ಆ ದೆಸೆಯಲ್ಲಿ ದುಡಿದರು. ಕನ್ನಡ ನುಡಿ ಮತ್ತು ನಾಡಿನ ಹಿತಚಿಂತನೆಗಳೇ ರಾಮರಾಯರಿಗೆ ಪ್ರಧಾನವಾಗಿದ್ದವೆಂಬುದು 'ಸುವಾಸಿನಿ' ಸಂಪಾದಕೀಯ ಮತ್ತು ಲೇಖನಗಳನ್ನು ಕಂಡಾಗ ವ್ಯಕ್ತವಾಗುತ್ತದೆ. ಪ್ರತಿ ಸಂಚಿಕೆಗಳಲ್ಲಿ ಇಂತಹ ಬರವಣಿಗೆಗಳಿದ್ದವು.

ಕನ್ನಡ ಭಾಷೆ ಮತ್ತು ಸಾಹಿತ್ಯದ ಅಭಿವೃದ್ಧಿಗಾಗಿ ೧೯೦೦ ರಲ್ಲಿ ರಾಮರಾಯರು ಮಾಡಿದ ಸಲಹೆಗಳು ಮನನೀಯವಾಗಿವೆ "ಕೆಲವು ವರ್ಷಗಳ ಹಿಂದೆ ಲಂಡನ್ ನಗರದಲ್ಲಿ ಸರ್ ವಾಲ್ಟರ್ ಬಿಸಾಂಟ್ ಎಂಬಪ್ರಸಿದ್ಧ

ಗ್ರಂಥಕರ್ಲ್ತರೊಬ್ಬರು "ಕವಿಮಂಡಲ"ವೆಂಬ ಒಂದು ಸಂಘವನ್ನು ಏರ್ಪಡಿಸಿ, ಜನರು ಗ್ರಂಥಕರ್ತೃತ್ವದಲ್ಲಿ ಬಹುಮಾನ ಪಡೆಯುವಂತೆ ಮಾಡಿದರು. ಇದನ್ನೇ ಅನುಸರಿಸಿ ಇತ್ತಲಾಗಿ ಬೊಂಬಾಯಿಯ ಪಾರ್ಸಿಕವಿಗಳೂ ಪತ್ರ ಸಂಪಾದಕರೂ ಸೇರಿ ಇಂತಹ ಒಂದು ಸಮಾಜವನ್ನು ಸಂಸ್ಥಾಪಿಸಿದಂತೆ ಕೇಳಿದೆವು.... ಕನ್ನಡಿಗರಲ್ಲಾದರೆ ಕರ್ನಾಟಕ ಗ್ರಂಥಗಳನ್ನು—ಮತ್ತವು ಎಷ್ಟು ಚೆನ್ನಾಗಿ ಬರೆಯಲ್ಪಟ್ಟರೂ ಸರಿಯೇ, ಆದರಪೂರ್ವಕವಾಗಿ ಕೊಂಡುಕೊಂಡು ಓದುವ ಸಂಪ್ರದಾಯವೇ ಇಲ್ಲ. ಮಾತ್ರವಲ್ಲದೆ; ನೂತನ ವಿದ್ಯಾವಿಕಸಿತ ಮನಸ್ಕರಾದ ಯಾರೂ ಗ್ರಂಥಗಳನ್ನು ಬರೆಯುವ ಮಾತು ಹಾಗಿರಲಿ; ತಮ್ಮ ಮಾತೃಭಾಷೆಯ ಕಡೆಗೆ ಪೂಜ್ಯದೃಷ್ಟಿಯಿಂದ ಕೂಡಾ ನೋಡುವುದಿಲ್ಲ. ಈ ಅಲಕ್ಷ್ಯಬುದ್ಧಿಯ ದೆಸೆಯಿಂದಲೇ ನಮ್ಮ ಪ್ರಾಚೀನ ಭಾಷೆಯಾದ ಕನ್ನಡವು ಬಂಗಾಳೀ, ಗುಜರಾಥೀ. ಮರಾಠೀ ಮೊದಲಾದ ಪ್ರಾಕೃತ ಭಾಷೆಗಳಂತೆ ವಿಶೇಷವಾಗಿ ಅಭಿವರ್ಧಿಸಲಿಲ್ಲ.

ಬಂಗಾಳೀ, ಗುಜರಾಥೀ, ಮರಾಠೀ ಭಾಷೆಗಳನ್ನಾಡುವ ಜನರಿಗೆ ತಮ್ಮ ತಮ್ಮ ಮಾತೃಭಾಷೆಯ ಮೇಲೆ ತಿರಸ್ಕಾರ ಭಾವವಿಲ್ಲ. ಇವರುಗಳಿಗೆ ತಮ್ಮ ದೇಶಭಾಷೆಗಳ ಮೇಲೆ ಎಷ್ಟು ಅಭಿಮಾನವಿದೆ ಎಂದು ವರ್ಣಿಸುವುದು ನಮ್ಮ ಶಕ್ತಿಗೆ ಮೀರಿದೆ. ಇವರಲ್ಲಿರುವ ಈ ಅಭಿಮಾನದ ದೆಸೆಯಿಂದಲೇ ಪ್ರಸಿದ್ಧರಾದ ವಿದ್ಯಾಸಾಗರ, ಭರತಜೀ, ರಮೇಶಚಂದ್ರದತ್ತ, ರಾನಡೆ, ಕೇಳಕರ್, ಅಗರಕರ್ ಮೊದಲಾದ ಅನೇಕಾನೇಕ ಮಹನೀಯರು ದೃಢಸಾಹಸದಿಂದ ತಮ್ಮ ತಮ್ಮ ಮಾತೃಭಾಷೆಗಳನ್ನು ಉದ್ಧಾರಮಾಡಿಬಿಟ್ಟರು. ಇವರಲ್ಲಿ ಯಾರೂ ತಮ್ಮ ತಮ್ಮ ಮಾತೃಭಾಷೆಗಳಲ್ಲಿ ವ್ಯಾಖ್ಯಾನಗಳನ್ನು ಮಾಡುವುದಕ್ಕೂ ಪತ್ರಿಕೆಗಳನ್ನು ನಡೆಸುವುದಕ್ಕೂ ಅಪಮಾನ ಪಡಲಿಲ್ಲ. ಆದರೆ ಕನ್ನಡಿಗರಲ್ಲಿ ಇಂಗ್ಲಿಷ್ ವಿದ್ಯಾಭ್ಯಾಸ ಮಾಡಿದವನಿಗೆ ಎಷ್ಟೆಷ್ಟು ಹೆಚ್ಚಾಗಿ ತನ್ನ ಭಾಷೆ ತಿಳಿಯುವುದಿಲ್ಲವೊ, ಆತನು ತನ್ನ ಮಾತೃಭಾಷೆಯನ್ನು ಎಷ್ಟೆಷ್ಟು ನಿಂದಿಸುವನೋ ಅಷ್ಟಷ್ಟು ಹೆಚ್ಚಾಗಿ ಆತನು ವಿದ್ಯಾಪ್ರವೀಣನೆಂದು ಭಾವಿಸಿಕೊಳ್ಳುವನು....

....ಕರ್ಣಾಟಕ ಕವಿಗಳಿಗೆ ಸಾಕಷ್ಟು ಆಶ್ರಯ ದೊರೆಯುವುದಿಲ್ಲ. ಅವರುಗಳು ಬರೆದ ಅತ್ಯುತ್ತಮ ಗ್ರಂಥಗಳು ಕೂಡ, ಯಾರೊಬ್ಬರ ಕಣ್ಣಿಗೂ ಬೀಳದೆ, ಅರಣ್ಯ ಪುಷ್ಪಗಳ ಹಾಗೆ ಕೊಳೆತುಹೋಗುತ್ತಿವೆಯೇ ಹೊರತು

ಅವುಗಳ ಸದ್ವಾಸನೆಯನ್ನು ಯಾರೂ ಗ್ರಹಿಸುವುದಿಲ್ಲ. ಹೀಗಾದುದರಿಂದ ಅಂತಹ ಕವಿಗಳ ಜೀವನೋಪಾಯ ನಡೆಯುವುದೇ ಪ್ರಯಾಸವಾಗಿ, ಯೋಗ್ಯವಾದ ಗ್ರಂಥಗಳನ್ನು ಬರೆದು ಪ್ರಸಿದ್ಧರಾಗಬೇಕೆಂಬ ಅವರ ಮನೋಗತವೇ ಕುಂಠಿತವಾಗುವುದು. ಇಂತಹ ದೇಶಭಾಷೆಯ ದೀನಾವಸ್ಥೆಯನ್ನು ಹೋಗಗೊಳಿಸುವುದಕ್ಕಾಗಿ ಭಾಷಾಭಿಮಾನಿಗಳಾದ ಧಾರವಾಡದ ಸದ್ಗೃಹಸ್ಥರದೊಂದು ಸಭೆಯನ್ನು ನಿರ್ಮಿಸಿ ಕಳೆದ ಹತ್ತು ವರ್ಷಗಳಿಂದೀಚೆಗೆ ಯಥಾಶಕ್ತಿಯಾಗಿ ಕವಿಗಳಿಗೆ ಆಶ್ರಯವನ್ನು ಕಲ್ಪಿಸುತ್ತಿರುವರು. ಆದರೆ ಇಂತಹ ಒಂದೇ ಒಂದು ಸಂಘದಿಂದ ಕನ್ನಡಕ್ಕೆ ವಿಶೇಷವಾದ ಲಾಭವುಂಟಾಗುವುದು ಸಾಧ್ಯವಿಲ್ಲ. ಭಾಷಾಭಿಮಾನಿಗಳಾದ ಮೈಸೂರಿನ ಪಂಡಿತರೂ ಗ್ರಂಥಕರ್ತರೂ ಒಂದಾಗಿ ಸೇರಿ ಒಂದು ಕವಿಮಂಡಲವನ್ನೇಕೆ ಸಂಸ್ಥಾಪಿಸಕೂಡದು? ಹೀಗೆ ಮಾಡುವುದರಿಂದ ಬಡವರಾದ ಕವಿಗಳಿಗೆ ಆಶ್ರಯ ದೊರೆಯುವುದು ಮಾತ್ರವಲ್ಲದೆ, ವಿದ್ಯಾವಂತರಾದ ಇತರರಿಗೂ ಕನ್ನಡದ ಮೇಲೆ ಮಮತೆಯುಂಟಾಗಿ ಏತದ್ಭಾಷೆಯಲ್ಲಿ ಗ್ರಂಥಗಳನ್ನು ಬರೆದು 'ಕವಿಮಂಡಲ'ವನ್ನು ಸೇರಬೇಕೆಂಬ ಉತ್ಸಾಹವುಂಟಾಗಬಹುದು...." [1] ಇಲ್ಲಿ ರಾಮರಾಯರು ಧಾರವಾಡದ ವಿದ್ಯಾವರ್ಧಕ ಸಂಘದ ಚಟುವಟಿಕೆಗಳನ್ನು ಬೆಂಬಲಿಸಿರುವರಲ್ಲದೆ, ಕರ್ನಾಟಕಕ್ಕೆ ಹಿರಿಯ ಸಂಸ್ಥೆಯೊಂದು ಬೇಕೆಂದಿರುವುದನ್ನು ಗಮನಿಸಬಹುದು. ಮುಂದೆ ನಿರ್ಮಾಣವಾದ ಪರಿಷತ್ತಿನಂತಹ ಸಂಸ್ಥೆಯ ಅವಶ್ಯಕತೆಯನ್ನು ಅವರು ಮುಂಗಂಡಿದ್ದರು. ರಾಮರಾಯರು ೧೯೦೦ ರಲ್ಲಿ ಕಂಡ ಕನಸು ೧೯೧೫ ರಲ್ಲಿ ಬೆಂಗಳೂರಲ್ಲಿ ಸಾಹಿತ್ಯ ಪರಿಷತ್ತಿನ ನಿರ್ಮಾಣದಲ್ಲಿ ನಿಜವಾಯಿತು.

ಸಾರಿಗೆ, ಸಂಪರ್ಕ, ಪ್ರಯಾಣ ಇವೆಲ್ಲಕ್ಕೂ ಅನಾನುಕೂಲ ಪರಿಸ್ಥಿತಿಯಿದ್ದ ಆ ದಿನಗಳಲ್ಲೂ ಮುಂಬಯಿ, ಮದರಾಸಿನಂತಹ ದೂರದ ನಗರಗಳಲ್ಲಿ ರಾಮರಾಯರು ವಾಸಿಸುತ್ತಿದ್ದರೂ ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘದ ಆಜೀವ ಸದಸ್ಯರಾಗಿ ಸಂಘದ ಅನೇಕ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿದ್ದರು. ಇದರಿಂದ ಅವರ ಕನ್ನಡದ ಮೇಲಿನ ಆಸಕ್ತಿಯು

---

1 'ಸುವಾಸಿನಿ' ೧|೮ ಫೆಬ್ರವರಿ, ೧೯೦೧

ಎಷ್ಟು ಗಾಢವಾಗಿತ್ತೆನ್ನುವುದು ಗೊತ್ತಾಗುತ್ತದೆ. ಕರ್ನಾಟಕ ಏಕೀಕರಣ ವಾಗಬೇಕೆಂಬ ಐತಿಹಾಸಿಕ ಮಹತ್ವದ ಭಾಷಣವನ್ನು ಅವರು ವಿದ್ಯಾವರ್ಧಕ ಸಂಘದ ಸಭೆಯಲ್ಲಿಯೇ ೧೯೦೩ರಲ್ಲಿ ಮಾಡಿದರು. ಉತ್ತರ ಕರ್ನಾಟಕದಿಂದ ಹೊರತಾದ ಪ್ರದೇಶಗಳಲ್ಲಿರುವ ಕನ್ನಡಿಗರಲ್ಲಿ ರಾಮರಾಯರಷ್ಟು ವಿದ್ಯಾ ವರ್ಧಕ ಸಂಘದೊಂದಿಗೆ ಸಮೀಪವರ್ತಿಗಳಾಗಿದ್ದ ವ್ಯಕ್ತಿ ಇನ್ನೊಬ್ಬರಿರಲಿಲ್ಲ. ಅವರು ತಮ್ಮ ಕೃತಿಯಾದ 'ಸತ್ಯರಾಜ ಪೂರ್ವದೇಶಯಾತ್ರೆ'ಯ ನಾಲ್ನೂರು ಪ್ರತಿಗಳನ್ನು ವಿದ್ಯಾವರ್ಧಕ ಸಂಘಕ್ಕೆ ತಮ್ಮ ಸಹಾಯವಾಗಿ ಕೊಟ್ಟಿದ್ದರು. ತಮ್ಮ ಖಾಸಗಿ ಸಂಗ್ರಹದ ಪುಸ್ತಕಗಳನ್ನೂ ಸಂಘದ ಗ್ರಂಥಾ ಲಯಕ್ಕೆ ಕೊಟ್ಟಿದ್ದರು. ೧೯೦೭ರಲ್ಲೂ ರಾವ್‌ಬಹದ್ದೂರ್ ರಾಘವೇಂದ್ರ ಗಂಗೊಳ್ಳಿಯವರ ಅಧ್ಯಕ್ಷತೆಯಲ್ಲಿ ರಾಮರಾಯರು 'ಕನ್ನಡ ಭಾಷೆಯ ಮಹತ್ವ ಮತ್ತು ಅದರ ಪ್ರಕೃತದ ಸ್ಥಿತಿ'ಯೆಂಬ ವಿಷಯವನ್ನು ಕುರಿತು ಉಪ ನ್ಯಾಸ ಮಾಡಿದುದು 'ಸುವಾಸಿನಿ' ಪತ್ರಿಕೆಯಲ್ಲಿ (ಜೂನ್ ೧೯೦೭) ವರದಿ ಯಾಗಿದೆ.[1]

ಕರ್ನಾಟಕ (ಈಗ ಕನ್ನಡ) ಸಾಹಿತ್ಯ ಪರಿಷತ್ತು ೧೯೧೫ನೆಯ ಇಸವಿ ಮೇ ತಿಂಗಳಲ್ಲಿ ಬೆಂಗಳೂರಿನಲ್ಲಿ ಅಸ್ತಿತ್ವಕ್ಕೆ ಬಂದುದು ಮಹತ್ವಪೂರ್ಣವಾದ ಐತಿಹಾ ಸಿಕ ಘಟನೆ. ಈ ಸಮ್ಮೇಳನದಲ್ಲಿ ಭಾಗವಹಿಸಿ ಕನ್ನಡ ನುಡಿಯ ಹಿತಚಿಂತನೆ ಯನ್ನು ಮಾಡಿದ ಮಹನೀಯರಲ್ಲಿ ರಾಮರಾಯರೊಬ್ಬರು. ಮುಂದೆ ನೆರೆದ ಸಾಹಿತ್ಯ ಸಮ್ಮೇಳನಗಳಲ್ಲಿ ಅವರು ತಪ್ಪದೆ ಭಾಗವಹಿಸಿದ್ದಾರೆ. ಬೆಂಗಳೂರಿನಲ್ಲಿ ಜರುಗುತ್ತಿದ್ದ ಕಾರ್ಯಕಾರಿ ಸಮಿತಿಗಳ ಸಭೆಗಳಲ್ಲೂ ಮದರಾಸಿನ ನಿವಾಸಿ ಯಾಗಿದ್ದರೂ, ರಾಮರಾಯರು ಹೆಚ್ಚಾಗಿ ಹಾಜರಿ ಇರುತ್ತಿದ್ದರು. ಸರಕಾರೀ ಅಧಿಕಾರಿಯಾಗಿದ್ದುಕೊಂಡು ನೇರವಾಗಿ ದೇಶದ ಸ್ವಾತಂತ್ರ್ಯ, ನಾಡಿನ ಏಕೀಕರಣ ಮುಂತಾದ ರಾಜಕೀಯಗಳಲ್ಲಿ ರಾಮರಾಯರು ನೇರವಾಗಿ, ಬಹಿ ರಂಗವಾಗಿ ಭಾಗವಹಿಸುತ್ತಿರಲಿಲ್ಲ. ಹೆಚ್ಚೇಕೆ, ಇವೆರಡೂ ಬ್ರಿಟಿಷ್ ಸರಕಾರದ ಧೋರಣೆಗೆ ವಿರುದ್ಧವಾದ ಕೇಳಿಕೆಗಳು. ರಾಮರಾಯರು ಪರೋಕ್ಷವಾಗಿ ಮಾಡಿದ ಕೆಲಸವು ಅಪಾರವಾದುದು. ಮದರಾಸಿನ ಗವರ್ನರರ ಕೌನ್ಸಿಲಿನ

1 ವಾಗ್ಭೂಷಣ, ನವಂಬರ ೧೯೨೪

ಸದಸ್ಯರಾಗಿ ಡಾ|| ಯು. ರಾಮರಾಯರ ಮೂಲಕ ಏಕೀಕರಣಕ್ಕೆ ಸಂಬಂಧಿಸಿ ಪ್ರಶ್ನೆಗಳನ್ನು ಕೌನ್ಸಿಲಿನಲ್ಲಿ ಬರುವಂತೆ ಮಾಡಿದವರು ಬೆನಗಲ್ ರಾಮರಾಯರು. ಖಾಸಗಿ ನೆಲೆಯಲ್ಲಿ ಕರ್ನಾಟಕ ಏಕೀಕರಣವು ಅವರ ನಿತ್ಯಮಂತ್ರವಾಗಿತ್ತು. ಬೆಂಗಳೂರಲ್ಲಿ ಅವರು ಸ್ಥಾಪಿಸಿದ ಕರ್ನಾಟಕ ಏಕೀಕರಣ ಸಂಘದ ಕಾರ್ಯಗಳಿಗೆ ರಾಮರಾಯರ ಹಣವೇ ಬಹುಮಟ್ಟಿಗೆ ವೆಚ್ಚವಾಗುತ್ತಿತ್ತು. ಮೈಸೂರಿನ ಮೂಲೆಮೂಲೆಗಳಿಗೆ ಪ್ರಚಾರ ಭಾಷಣಗಳಿಗೆ ರಾಮರಾಯರ ಕಾರೇ ಓಡುತ್ತಿತ್ತು ; ಪ್ರಕಟನೆಗಳನ್ನು ತಮ್ಮ ವೆಚ್ಚದಿಂದ ಅವರು ಮುದ್ರಿಸಿದ್ದಾರೆ. ಬೆಂಗಳೂರಿನ ಕೆಲವು ಪ್ರತಿಷ್ಠಿತರು ರಾಮರಾಯರ ಏಕೀಕರಣ ಪ್ರಚಾರವನ್ನು ಅಸಹನೆಯಿಂದ ಕಂಡ ಪ್ರಸಂಗಗಳಿದ್ದವು. ಅಂತಹವರಲ್ಲಿ ಕೆಲವರು ರಾಮರಾಯರ ಗೆಳೆಯರೇ. ಇನ್ನು ಕೆಲವರು ರಾಮರಾಯರಿಂದ ಪ್ರಯೋಜನ ಪಡೆದವರು. ಈ ವ್ಯಕ್ತಿಗಳ ಮಾತ್ಸರ್ಯವು ಕುಹಕವಾದ ರೀತಿಯಲ್ಲೂ ವ್ಯಕ್ತವಾಗದಿರಲಿಲ್ಲ. ಇಂತಹ ಪ್ರಸಂಗಗಳಲ್ಲೂ ಉದಾರಿಗಳಾದ ರಾಮರಾಯರು ಔದಾರ್ಯದಿಂದ, ಸಹನೆಯಿಂದ ವರ್ತಿಸಿ ತಮ್ಮ ಒಳ್ಳೆಯತನವನ್ನು ಮೆರೆದರು. ರಾಮರಾಯರಿಗೆ ಕರ್ನಾಟಕತ್ವದ ಉತ್ಕರ್ಷವೇ ಪ್ರಧಾನವಾಗಿತ್ತಲ್ಲದೆ, ವ್ಯಕ್ತಿ ದ್ವೇಷಕ್ಕೆ ಅವರಲ್ಲಿ ಇಂಬಿರಲಿಲ್ಲ.

ಬೆಳಗಾವಿಯಲ್ಲಿ ಜರುಗಿದ ಸಾಹಿತ್ಯ ಸಮ್ಮೇಳನಾಧ್ಯಕ್ಷರಾಗಿ ರಾಮರಾಯರು ಮಾಡಿದ ಭಾಷಣದಲ್ಲಿ ಕನ್ನಡದ ಏಳಿಗೆಯ ಕುರಿತು ಅವರ ಕಾಳಜಿ, ಆಸಕ್ತಿಗಳು ಎದ್ದು ಕಾಣುತ್ತಿವೆ. ನಮ್ಮ ನುಡಿಯಲ್ಲಿ ನವೀನ ಶೈಲಿ, ವಸ್ತು, ಭಾಷಾಕ್ರಮಗಳು ಬಂದು ಕನ್ನಡ ಮುನ್ನಡೆಯಬೇಕೆಂಬ ಕರೆಯೂ ಈ ಭಾಷಣದಲ್ಲಿದೆ. ಪತ್ರಿಕೆಗಳು ನಾಡಿನ ಬೆಳವಣಿಗೆಯಲ್ಲಿ ವಹಿಸಬೇಕಾದ ಪಾತ್ರದ ವಿವೇಚನೆಯೂ ಇದೆ. ವಿದ್ಯಾವಂತರ ಪ್ರಯತ್ನಗಳಿಂದ ಅನಕ್ಷರಸ್ಥರೂ, ಅಲ್ಪವಿದ್ಯೆಯುಳ್ಳವರೂ ಹೇಗೆ ಪ್ರಗತಿಯನ್ನು ಸಾಧಿಸಬರುತ್ತದೆಯೆಂಬುದನ್ನು ರಾಮರಾಯರು ವಿಶದಪಡಿಸಿದ್ದಾರೆ. " ಈ ವಿಷಯದಲ್ಲಿ ನಮ್ಮ ಕಾಲೇಜಿನ ವಿದ್ಯಾರ್ಥಿಗಳು ಕೂಡಾ ಸುಲಭವೂ ಅಭಿಮಾನಪೂರ್ಣವೂ ಆದ ಈ ಕಾರ್ಯವನ್ನು ಕೈಕೊಳ್ಳುವುದರ ಮೂಲಕ ಬಹಳ ಮಟ್ಟಿಗೆ ಮಾತೃಭೂಮಿಯನ್ನು ಸೇವಿಸಿದ ಯಶಸ್ಸಿಗೆ ಪಾತ್ರರಾಗಬಹುದೆಂದು ನನಗೆ ತೋರುತ್ತದೆ. ಅವರು ತಮ್ಮ ವಿಶ್ರಾಂತಿಯ ದಿನಗಳಲ್ಲಿ ಒಂದು ಭಾಗವನ್ನಾದರೂ

ಈ ಕಾರ್ಯದಲ್ಲಿ ವಿನಿಯೋಗಪಡಿಸಿ, ಗ್ರಾಮಾಂತರಗಳಿಗೆ ಹೋಗಿ ಬುದ್ಧಿವಂತರೂ ಬಹುಶ್ರುತರೂ ಆದ ಜನಗಳನ್ನು ಕಂಡು ಮಾತನಾಡಿ ಮೇಲ್ಕಂಡ ವಿಷಯಗಳಿಗೆ ಸಂಬಂಧಪಟ್ಟ ಸಂಗತಿಗಳನ್ನು ಅವರ ಮೂಲಕ ಕೇಳಿ ತಿಳಿದುಕೊಂಡು ವಾರ್ತಾ ಪತ್ರಿಕೆಗಳ ಮೂಲಕ ಆ ವಿಷಯಗಳನ್ನು ಪ್ರಕಾಶಕ್ಕೆ ತರಬಹುದು....ನಮ್ಮ ನಾಡಿನ ಮತ್ತು ಸಾಹಿತ್ಯದ ಪ್ರಾಚೀನ ವೈಭವವನ್ನು ಉಪನ್ಯಾಸಗಳ ಮೂಲಕ ಆ ಜನರುಗಳಿಗೆ ಬೋಧಿಸಬಹುದು. ಅಲ್ಲದೆ ಅವಕಾಶವಿದ್ದ ಪ್ರದೇಶಗಳಲ್ಲಿ ಕನ್ನಡ ವಾಚನಾಲಯಗಳನ್ನೂ ಗ್ರಂಥಾಲಯಗಳನ್ನೂ ಮಿತ್ರ ಮಂಡಲಿಗಳನ್ನೂ ಸ್ಥಾಪಿಸುವುದಕ್ಕೆ ಸಹಾಯಕರಾಗಬಹುದು. ಹಾಗೆಯೇ ಪ್ರಕೃತದಲ್ಲಿ ಜೀವಿಸಿರುವ ಅಥವಾ ಇತ್ತೀಚೆಗೆ ಗತಿಸಿದ ಕವಿಗಳ, ಕಲಾವಿದರ ಮತ್ತು ಇತರ ಕುಶಲ ವಿದ್ಯಾನಿಪುಣರ ಜೀವನ ಚರಿತ್ರೆಗಳನ್ನೂ ಅವರ ಕಾರ್ಯ ಕಲಾಪಗಳಿಗೆ ಸಂಬಂಧಿಸಿದ ಇತರ ವಿಷಯಗಳನ್ನೂ ಸಂಗ್ರಹಿಸಿ ಅವನ್ನು ಲೋಕಕ್ಕೆ ಪ್ರಕಾಶಗೊಳಿಸಬಹುದು. ಒಬ್ಬನೇ ಒಬ್ಬನಾದರೂ ತನ್ನ ವೈಯಕ್ತಿಕ ಪ್ರಯತ್ನಗಳಿಂದ ಈ ಕಾರ್ಯವನ್ನು ಯೋಗ್ಯತಾನುಸಾರವಾಗಿ ನಡೆಯಿಸಬಹುದಾಗಿದೆ. ಆದರೆ ಈ ಸಂಬಂಧವಾಗಿ ವಿದ್ಯಾರ್ಥಿಗಳು ಬೇರೆ ಬೇರೆ ಗುಂಪುಗಳಾಗಿ ಸೇರಿ, ಕ್ಲುಪ್ತವಾದ ಕಾರ್ಯಕ್ರಮಗಳನ್ನನುಸರಿಸಿ ಕೆಲಸ ಮಾಡಿದ ಪಕ್ಷದಲ್ಲಿ, ವಿಶೇಷವಾದ ಧನ ವ್ಯಯವೂ, ದೇಹಶ್ರಮವೂ ಇಲ್ಲದೆಯೇ ವ ಹತ್ತರವಾದ ಮತ್ತು ಅಮೂಲ್ಯವಾದ ಕೆಲಸವನ್ನು ಮಾಡಿ ಕನ್ನಡ ನಾಡಿನ ಮಹಾ ಜನರ ಪ್ರಶಂಸೆಗೆ ಪಾತ್ರರಾಗಬಹುದು....ಆದರೆ ಇಂತಹ ಕೆಲಸಕ್ಕೆ ವಿದ್ಯಾರ್ಥಿಗಳು ಮಾತ್ರ ತಕ್ಕವರೆಂದು ತಿಳಿಯತಕ್ಕದ್ದಲ್ಲ. ಪ್ರೌಢವಯಸ್ಕರು ಕೂಡ ತಕ್ಕಂತೆ ವಿರಾಮ ದೊರೆಯುವ ಪಕ್ಷದಲ್ಲಿ ಕೆಲಸಗಳನ್ನು ಕೈಕೊಂಡು ದೇಶಸೇವೆಯನ್ನು ಮಾಡಬಹುದಾಗಿದೆ." [1]

ರಾಮರಾಯರ ಅಧ್ಯಕ್ಷ ಭಾಷಣದಲ್ಲಿ ಇನ್ನೂ ಅನೇಕ ಬೆಲೆ ಬಾಳುವ ವಿಚಾರಗಳಿವೆ. ಕನ್ನಡ ಪಂಡಿತರ ಸ್ಥಾನ ಮಾನ, ಕನ್ನಡ ಅಧ್ಯಾಪಕರುಗಳಲ್ಲಿ ಸಾಹಿತ್ಯಿಕ ಸಮಾಲೋಚನೆ, ಸ್ಪರ್ಧೆಗಳ ಮೂಲಕ ಹೊಸ ಕೃತಿಗಳ

---

1 ಸಾಹಿತ್ಯ ಸಮ್ಮೇಳನದ ಭಾಷಣ—ಅಧ್ಯಕ್ಷರ ಭಾಷಣಗಳು—ಸಂಪುಟ I

ನಿರ್ಮಾಣ, ಗ್ರಂಥಾಲಯ ಚಳುವಳಿ, ಕರ್ನಾಟಕಕ್ಕೊಂದು ವಿಶ್ವವಿದ್ಯಾಲಯ ಮುಂತಾದವುಗಳು ಅವುಗಳಲ್ಲಿ ಕೆಲವು. ನಾಡುನುಡಿಗಳ ಶೀಘ್ರ ಅಭಿವೃದ್ಧಿಗಾಗಿ ಶ್ರೀಮಂತರೂ ಜನಸಾಮಾನ್ಯರೂ ಸಹಕರಿಸಿ ಒಂದು ದೊಡ್ಡ ನಿಧಿಯನ್ನು ಶೇಖರಿಸಿ ಕಾರ್ಯಪ್ರವೃತ್ತರಾಗಬೇಕೆಂಬ ಸಲಹೆಯೂ ಈ ಭಾಷಣದಲ್ಲಿತ್ತು. ನಮ್ಮ ದುರ್ದೈವದಿಂದ ಇಂತಹ ಅಮೂಲ್ಯ ಸಲಹೆಗಳು ಅವಗಣನೆಗೆ ಗುರಿಯಾದವು. ರಾಮರಾಯರ ಸಲಹೆಗಳು ಕಾರ್ಯಗತವಾಗಿದ್ದರೆ ನಮ್ಮ ನುಡಿ ಮತ್ತು ನಾಡಿನ ಸ್ಥಿತಿಯು ತುಂಬ ಚೆನ್ನಾದ ರೀತಿಯಲ್ಲಿ ಇರುತ್ತಿತ್ತು.

ಅಖಂಡ ಕರ್ನಾಟಕವು ರೂಪಿತವಾಗುವ ಕುರಿತು ಅನೇಕ ಧುರೀಣರಿಗೆ ಸಂದೇಹವಿತ್ತು. ಕೆಲವರಿಗೆ ಏಕೀಕರಣವೂ ಬೇಕಾಗಿರಲಿಲ್ಲ. ರಾಮರಾಯರಿಗೆ ಅಖಂಡ ಕರ್ನಾಟಕ ನಿರ್ಮಾಣದಲ್ಲಿ ಅಚಲ ವಿಶ್ವಾಸವಿತ್ತು. ಈ ವಿಶ್ವಾಸವು ಒಂದು ಭ್ರಮೆಯೆಂದು ಬಿ. ಎಂ. ಶ್ರೀಯವರು ಬಗೆದಿದ್ದರು. ಕರ್ನಾಟಕ ರಾಜ್ಯರಚನೆಯಿಂದ ರಾಮರಾಯರ ವಿಶ್ವಾಸವೇ ಸತ್ಯವಾಯಿತು ; ಅವರ ಕನಸು ನನಸಾಯಿತು.

ಸಾಹಿತ್ಯ ಸೇವೆ

ಮಂಗಳೂರಿನಲ್ಲಿ ಕಾಲೇಜು ವಿದ್ಯಾರ್ಥಿಯಾಗಿದ್ದಾಗಲೇ ರಾಮರಾಯರ ಸಾಹಿತ್ಯ ರಚನೆಯ ಆರಂಭ. ಉಡುಪಿಯ 'ಸುದರ್ಶನ'ವೆಂಬ ಮಾಸ ಪತ್ರಿಕೆಯಲ್ಲಿ ಆರೋಗ್ಯ ವಿಚಾರದ ಕುರಿತಾದ ನಿಬಂಧವೇ ಮೊತ್ತಮೊದಲು ಪ್ರಕಟವಾದ ಅವರ ಬರಹವಾಗಿರಬೇಕು.[1] ಎರಡು ಮೂರು ವರ್ಷಗಳ ಕಾಲ ಇವರೇ ಆ ಪತ್ರಿಕೆಯ ಪ್ರಧಾನ ಲೇಖಕರಾಗಿದ್ದರಂತೆ. 'ಸುದರ್ಶನ' ದಲ್ಲಿ ಪ್ರಕಟಣೆಗಾಗಿ ಅವರು ಕಳುಹಿಸಿದ 'ಏಕನಾಥ ಚರಿತ್ರೆ'ಯನ್ನು ನಂದಳಿಕೆಯವರ ನೆರವಿನಿಂದ ಮರಳಿ ಪಡೆಯುವ ಪ್ರಯತ್ನವನ್ನು ಅವರು ಮಾಡಿದ್ದು ಅವರ ಲೇಖನವೊಂದರಿಂದ ಗೊತ್ತಾಗುತ್ತದೆ. ೧೮೯೯ರಲ್ಲಿ ಅಣ್ಣಾ ಸಾಹೇಬ ಕಿರ್ಲೋಸ್ಕರರ 'ಸಂಗೀತ ಸೌಭದ್ರ'ವನ್ನು ರಾಮರಾಯರು ಮರಾಠಿಯಿಂದ ಅನುವಾದಿಸಿದರು. ಆ ವೇಳೆಯಲ್ಲಿ ಅವರು ಮದರಾಸಿನಲ್ಲಿ ವಿದ್ಯಾರ್ಥಿ. ಅದೇ ವರ್ಷ 'ವಾಗ್ಭೂಷಣ'ದಲ್ಲಿ ಅವರಿಂದ ಕನ್ನಡದಲ್ಲಿ ರಚಿತವಾದ 'ಕಲಹಪ್ರಿಯಾ ಪ್ರಹಸನ'ವೆಂಬ ನಾಟಕವು 'ವಾಗ್ಭೂಷಣ' ದಲ್ಲಿ ಪ್ರಕಟವಾಗಿತ್ತು.

ವಿದ್ಯಾವಂತರ ಸಂಖ್ಯೆಯು ತೀರಾ ವಿರಳವಾಗಿದ್ದ ದಿನಗಳವು–ವಿದ್ಯಾವಂತರಲ್ಲಿ ಹೆಚ್ಚಿನವರು ಇಂಗ್ಲಿಷ್ ಭಾಷೆಯ ಮೋಹಕ್ಕೆ ಒಳಗಾಗಿದ್ದರು. ಅಂತಹ ಕಾಲದಲ್ಲಿ ರಾಮರಾಯರ ಕನ್ನಡ ಸಾಹಿತ್ಯ ಪ್ರೇಮವು ಸ್ಮರಣೀಯ

---

1 'ಪ್ರಬುದ್ಧ ಕರ್ನಾಟಕ', ಕ್ರೋಧನ, ದೀಪಾವಳಿ ಸಂಚಿಕೆ, ಪುಟ ೩೮

ವಾಗಿದೆ. ಎಲ್ಲೆಡೆಗಳಲ್ಲೂ ಕನ್ನಡಕ್ಕೆ ಅನಾದರದ ಪರಿಸ್ಥಿತಿಯಲ್ಲಿ ಅವರ ಸೇವೆಯು ಸಾಮಾನ್ಯ ವಿಷಯವಾಗಲಾರದು. ನಾಟಕ ಕಲೆಯಲ್ಲಿ ಹೆಚ್ಚು ಒಲವನ್ನು ಬೆಳೆಸಿಕೊಂಡ ಅವರು ಸಹಜವಾಗಿ ನಾಟಕಗಳ ಅನುವಾದಗಳಲ್ಲಿ ಮಗ್ನರಾದರು. ಸಂಸ್ಕೃತ, ತೆಲುಗು, ಮರಾಠಿ ಮತ್ತು ಬಂಗಾಲಿ ನಾಟಕಗಳನ್ನು ಅನುವಾದಿಸಿ ಕನ್ನಡ ನಾಟಕ ಸಂಪತ್ತನ್ನು ಅವರು ಹಿಗ್ಗಿಸಿದರು. 'ಕರ್ನಾಟಕ ಕುಂದಮಾಲೆ,' 'ಪಾರ್ವತೀ ಪರಿಣಯ,' 'ಘೋಷಯಾತ್ರೆ,' ಅವಿಮಾರಕ,' 'ದೂತಾಂಗದ,' 'ತ್ರೈವಿಕ್ರಮ,' 'ಶಾಪ ಸಂಭ್ರಮ'– ಇವು ಸಂಸ್ಕೃತದಿಂದ ರಾಮರಾಯರು ಅನುವಾದಿಸಿದ ನಾಟಕಗಳು. ಬಂಗಾಲದ ಪ್ರಸಿದ್ಧ ಸಾಹಿತಿ ಮಧುಸೂಧನದತ್ತರ ಪ್ರಖ್ಯಾತ ನಾಟಕ 'ಕೃಷ್ಣಾಕುಮಾರಿ'ಯನ್ನು ಅವರು ಭಾಷಾಂತರಿಸಿದ್ದಾರೆ. 'ಸುಭದ್ರಾ ವಿಜಯ'ವು ಮರಾಠಿ ಮೂಲದ ನಾಟಕವಾದರೆ 'ಕಲಹಪ್ರಿಯಾ ಪ್ರಹಸನ'ವು ತೆಲುಗು ಮೂಲದ್ದಾಗಿದೆ.

ರಾಮರಾಯರು ಕನ್ನಡದಲ್ಲಿ ರಚಿಸಿದ ನಾಟಕಗಳಲ್ಲಿ ಎದ್ದು ಕಾಣುವ ಗುಣಗಳೆಂದರೆ ನೇರವೂ ಸರಳವೂ ಆದ ಭಾಷಾಶೈಲಿ. ಆಗಿನ ದಿನಗಳ ಸಾಹಿತ್ಯಭಾಷೆಯು ಪ್ರೌಢವೂ ಕೃತಕವೂ ಆಗಿರುವಾಗ ರಾಮರಾಯರ ದೃಷ್ಟಿ, ಪ್ರಯತ್ನಗಳು ಹೊಸ ಮಾರ್ಗವನ್ನು ತುಳಿಯುತ್ತಿದ್ದವು. ಭಾಷೆಯ ಸರಳತೆಯು ಪಾತ್ರಗಳ ಗಾಂಭೀರ್ಯಕ್ಕೆ ಊನ ತಂದಿಲ್ಲ. ಶೈಶವಾವಸ್ಥೆಯಲ್ಲಿದ್ದ ಕನ್ನಡ ನಾಟಕ ಸಾಹಿತ್ಯದ ವೃದ್ಧಿಕಾರ್ಯದಲ್ಲಿ ರಾಮರಾಯರು ಗಣನೀಯರು.

'ರಮಾಮಾಧವ'ವೆಂಬ ಮರಾಠಿ ಕಾದಂಬರಿಯು ರಾಮರಾಯರಿಂದ ಭಾಷಾಂತರಗೊಂಡು, ೧೯೦೦ ರಲ್ಲಿ 'ಸುವಾಸಿನಿ' ಪತ್ರಿಕೆಯಲ್ಲಿ ಧಾರಾವಾಹಿಯಾಗಿ ಪ್ರಕಟವಾಯಿತು. ಇದರ ಮೂಲ ಲೇಖಕರು 'ಮಾಸಿಕ ಮನೋರಂಜನ' ಪತ್ರಿಕೆಯ ಸಂಪಾದಕರಾದ ಕಾಶಿನಾಥ ಮಿತ್ರರು. ಇಳಿವಯಸ್ಸಿನ ವರನು ಎಳೆವಯಸ್ಸಿನ ಕನ್ಯೆಯನ್ನು ಮದುವೆಯಾಗಲು ಪ್ರಯತ್ನಿಸಿದಾಗ ಆಗುವ ಅವಾಂತರದ ಚಿತ್ರವಿದು. ಇದರಲ್ಲಿರುವ ವಿಚಾರಧಾರೆ, ಸಾಮಾಜಿಕ ಪ್ರಜ್ಞೆ ಅಂದಿನ ಕನ್ನಡಿಗರಿಗೆ ಹೊಸತೇ. ತೆಲುಗು ಸಾಹಿತಿಗಳಲ್ಲಿ ಪ್ರಸಿದ್ಧರಾಗಿದ್ದ ವೀರೇಶಲಿಂಗಂ ಪಂತುಲು ಅವರ 'ಸತ್ಯರಾಜಾ ಪೂರ್ವ

ದೇಶದ ಯಾತ್ರೆ' ಎಂಬ ವ್ಯಂಗ್ಯ ಕಾದಂಬರಿಯನ್ನು ರಾಮರಾಯರು ಅನುವಾದಿಸಿದುದರ ಉಲ್ಲೇಖ ಈಗಾಗಲೇ ಆಗಿದೆ. 'ಇರಾವತಿ'ಯೆಂಬ ಐತಿಹಾಸಿಕ ಕಾದಂಬರಿಯು ಅವರಿಂದ ರಚಿತವಾಗಿ 'ಕರ್ನಾಟಕ ನಂದಿನಿ'ಯಲ್ಲಿ ಪ್ರಕಟವಾಗಿದೆ. ರಾಮರಾಯರಿಂದ ರಚಿತವಾದ 'ತರುಬಾಲ' ಮತ್ತು 'ಪದ್ಮಾವತಿ' ಎಂಬ ಕಾದಂಬರಿಗಳು ಪ್ರಕಟವಾದಂತೆ ಉಲ್ಲೇಖಗಳಿವೆಯಾದರೂ ಆ ಕೃತಿಗಳು ಅಲಭ್ಯವಾಗಿವೆ.

ರಾಮರಾಯರ ಕಾವ್ಯಶಕ್ತಿಯು ಕಾತ್ಯಾಯಿನಿ ದೇವಿ ಮತ್ತು ಕನ್ನಡ ಮಾತೆಯ ಸ್ತುತಿಗಳಲ್ಲೇ ಮುಖ್ಯವಾಗಿ ಅಭಿವ್ಯಕ್ತವಾಗಿದೆ. 'ಸಂಗೀತ ತಾರಾವಳಿ' ಎಂಬ ಸಂಕಲನದಲ್ಲಿ ಕವಿಯು ಭಕ್ತಿಪರವಶನಾಗಿ ತನ್ನ ಆರಾಧ್ಯ ದೇವತೆಯ ಮಹಿಮೆಯನ್ನು ಕೊಂಡಾಡಿದ್ದಾನೆ. ಶ್ರೀದೇವಿಯು ಆಧ್ಯಾತ್ಮಿಕ ಉದ್ಧಾರಕ್ಕಾಗಿ ಅನುಗ್ರಹಿಸುವಂತೆ ಕವಿಯು ಬಗೆಬಗೆಯಿಂದ ಪ್ರಾರ್ಥಿಸಿದ್ದಾನೆ. ಇದರ ಹೊರತಾಗಿ ಸ್ವಂತಕ್ಕೆ ಯಾವುದೂ ಆತನಿಗೆ ಬೇಕಾಗಿಲ್ಲ. ಇಂತಹ ಇಪ್ಪತ್ತೇಳು ಕವನಗಳಲ್ಲದೆ ಸಂಸ್ಕೃತ ರಚನೆಯಾದ ನವರತ್ನಮಾಲಿಕೆಯೂ ಇದರಲ್ಲಿ ಅಡಕವಾಗಿದೆ. ಕೊನೆಯ ಸಂಸ್ಕೃತ ಹಾಡನ್ನು ಅವರು 'ಮಾತೃಭೂಮಿಯ ಸ್ತೋತ್ರ ಗೀತೆ'ಯೆಂದು ಕರೆದಿದ್ದಾರೆ. ಕರ್ನಾಟಕ ಮಾತೆಯನ್ನೇ ಸ್ತುತಿಸುವ ಹಾಡಿದು. ಇದನ್ನು ಭಾರತಮಾತೆಗೂ ಅನ್ವಯಿಸಬಹುದೆಂದು ಕವಿಯು ಸೂಚಿಸಿದ್ದಾನೆ. ಶ್ರೀ ಕಾತ್ಯಾಯಿನಿ ದೇವಿಯನ್ನು ಆರಾಧಿಸುತ್ತಿರುವಾಗ ಕವಿಯು ಕರ್ನಾಟಕ ಮಾತೆಯನ್ನಾಗಲೀ, ಭಾರತ ಮಾತೆಯನ್ನಾಗಲೀ ಮರೆತಿಲ್ಲ. ಆತ್ಮೋದ್ಧಾರದಂತಹ ಮಹಾಕಾರ್ಯವನ್ನು ಕವಿಯು ನಿರ್ಮಲ ಭಕ್ತಿಯಿಂದ ಸಾಧಿಸಲು ವ್ರತತೊಟ್ಟಿದ್ದು ಈ ಹಾಡುಗಳನ್ನು ಓದಿದಾಗ ಮನವರಿಕೆಯಾಗುತ್ತದೆ.

'ಸಂಗೀತ ರತ್ನಾವಳಿ'ಯೆಂಬುದು ರಾಮರಾಯರ ಕವನಗಳ ಇನ್ನೊಂದು ಸಂಕಲನ. ಇದರಲ್ಲಿರುವ ಕವನಗಳು ಕೇವಲ ಕನ್ನಡ ನಾಡನ್ನು ಕುರಿತಾಗಿವೆ. ಕೆಲವು ಕವನಗಳು ಕನ್ನಡ ತಾಯಿಯ ವೈಭವ, ಮಹಿಮೆ, ಸೊಗಸುಗಳನ್ನು ಹೆಮ್ಮೆಯಿಂದ ಹೇಳಿಕೊಳ್ಳುವಂತಹವು. ನಾಡಿನ ಸಂಪದ ಮತ್ತು ಪರಂಪರೆಗಳ ಮೇಲ್ಮೆಯನ್ನು ಸ್ತುತಿಸುವುದರಲ್ಲಿ, ಹಾಡಿ ಹಿಗ್ಗುವುದರಲ್ಲಿ ಕವಿಗೆ ದಣಿವಿಲ್ಲ. ಮಿಕ್ಕ ಕೆಲವು ಕವನಗಳು ಕನ್ನಡ ನಾಡಿನ

ದೈನ್ಯಾವಸ್ಥೆಯನ್ನು ಮನಕರಗುವಂತೆ ಚಿತ್ರಿಸುತ್ತವೆ. ನಿದ್ದೆಯಲ್ಲಿ ಮೈಮರೆತ ಕನ್ನಡಿಗನನ್ನು ಬಗೆಬಗೆಯಾಗಿ ಬಡಿದೆಬ್ಬಿಸುವ ಕಾರ್ಯವನ್ನು ಈ ಕವನಗಳು ಮಾಡುತ್ತವೆ. ಕವಿಗೆ ನಿಸರ್ಗ, ಚೆಲುವು, ಮಾನವನ ಹೃದಯದ ಅನುಭವಗಳು ಮುಖ್ಯವಾಗಿರದೆ ಕನ್ನಡದ ಪ್ರಕೃತ ಪರಿಸ್ಥಿತಿಗಾಗಿ ಕವಿಯ ಚೇತನವು ನೊಂದಿದೆ. ಆದರೆ ಆತ ನಿರಾಶನಾಗಿಲ್ಲ. ಕನ್ನಡಾಂಬೆ ಮತ್ತೊಮ್ಮೆ ಪ್ರಜ್ವಲಳಾಗಿ ಬೆಳಗುತ್ತಾಳೆಂಬ ನಂಬಿಕೆ, ಆತ್ಮವಿಶ್ವಾಸ ಇಲ್ಲಿ ಸ್ಫುಟವಾಗಿವೆ. ಅನನ್ಯವಾದ ಭಕ್ತಿಭಾವ, ಉಜ್ವಲವಾದ ದೇಶಪ್ರೇಮ ರಾಮರಾಯರ ಕವನಗಳಲ್ಲಿವೆ. ಸರಳವಾದ ಪದಗಳ ಸುಲಲಿತವಾದ ಬಂಧದಿಂದ ಕವಿಯ ಭಾವಗಳು ನೇರವಾಗಿ ಓದುಗನ ಹೃದಯವನ್ನು ತಲಪುತ್ತವೆ. ಕಲ್ಪನಾವಿಲಾಸ, ಕವಿಸಮಯ ಅಲಂಕಾರಗಳ ವೈಭವ ಈ ಕವನಗಳಲ್ಲಿಲ್ಲದಿರಬಹುದು. ಆದರೆ ಕವಿಯ ಉತ್ಕಟವಾದ ಭಾವನೆಗಳು ಸರಳವಾದ ನುಡಿಗಟ್ಟುಗಳ ಮೂಲಕ ಪ್ರಭಾವಶಾಲಿಯಾಗಿ ಅಭಿವ್ಯಕ್ತಿಯನ್ನು ಪಡೆದಿವೆ.

ರಾಮರಾಯರು 'ಪುರಾಣನಾಮ ಚೂಡಾಮಣಿ'ಯೆಂಬ ಸಂದರ್ಭ ಗ್ರಂಥವನ್ನು ಪಾನ್ಯಂ ಸುಂದರಶಾಸ್ತ್ರಿಯವರ ಜತೆಯಲ್ಲಿ ರಚಿಸಿದರು. ಇಂತಹ ಗ್ರಂಥವು ನಮ್ಮ ಭಾಷೆಯಲ್ಲಿ ಹೊಸದು. ಇದು ಆಧುನಿಕ ಸಂದರ್ಭ ಗ್ರಂಥಗಳಲ್ಲಿ ಗಣನೀಯವಾದುದು. ಪುರಾಣಗಳಲ್ಲಿ ಉಕ್ತವಾಗಿರುವ ವ್ಯಕ್ತಿ, ದೇಶ, ಗಿರಿ, ನದಿಗಳ ಕುರಿತಾದ ಅಧಿಕೃತ ಮಾಹಿತಿಗಳನ್ನು ಶಾಸ್ತ್ರೀಯವಾಗಿ ಜೋಡಿಸಲಾಗಿದೆ. ಒಂದು ವ್ಯಕ್ತಿಯ ಯಾ ವಸ್ತುವಿನ ಉಲ್ಲೇಖವು ಬೇರೆ ಬೇರೆ ಗ್ರಂಥಗಳಲ್ಲಿ ಇದ್ದಾಗ ಆ ಮೂಲಗಳನ್ನು ಸರಿಯಾದ ನಿರ್ದೇಶನಗಳೊಂದಿಗೆ ತಿಳಿಸಲಾಗಿದೆ. ಇದರಿಂದ ಈ ಗ್ರಂಥವನ್ನು ಉಪಯೋಗಿಸುವವರಿಗೆ ನೇರವಾಗಿ ಮೂಲ ಸಂದರ್ಭವನ್ನು ಕಾಣಲು ಸುಲಭವಾಗಿದೆ. 'ಪುರಾಣನಾಮ ಚೂಡಾಮಣಿ'ಯು ಸಾಹಿತ್ಯಾಭ್ಯಾಸಿಗಳಿಗೆ ಮಾತ್ರವಲ್ಲದೆ, ಪುರಾಣ ಮತ್ತು ವೈದಿಕ ಸಾಹಿತ್ಯದಲ್ಲಿ ಆಸಕ್ತಿಯುಳ್ಳವರಿಗೆ ಯಾವುದೇ ಮಾಹಿತಿ ಬೇಕೆಂದವರಿಗೆ ಪ್ರಯೋಜನಕ್ಕೆ ಬರುತ್ತದೆ.

ಅನೇಕ ಕೈಫಿಯತ್ತು ಮತ್ತು ಇತರ ಐತಿಹಾಸಿಕ ಬರವಣಿಗೆಗಳನ್ನು ಸಂಪಾದಿಸಿ ರಾಮರಾಯರು ನಾಡಿಗೆ ದೊಡ್ಡ ಉಪಕಾರವನ್ನು ಮಾಡಿದ್ದಾರೆ.

ಮದರಾಸಿನ ಪ್ರಾಚ್ಯ ಹಸ್ತಪ್ರತಿಗಳ ಸಂಗ್ರಹಾಲಯದಲ್ಲಿ ಮೂಲೆಪಾಲಾಗಿ ಅವಿತಿದ್ದ ಹಲವಾರು ಐತಿಹಾಸಿಕ ದಾಖಲೆಗಳನ್ನು ಬೆಳಕಿಗೆ ತಂದವರು ಇವರು. ನಮ್ಮ ನಾಡಿನ ಸಮಗ್ರ ಇತಿಹಾಸದ ರಚನೆಯ ಕಾಲ ರಾಮರಾಯರ ಕಾರ್ಯದಿಂದ ಲಭ್ಯವಾಗುತ್ತದೆ. ಒಂದು ಕಾಲದಲ್ಲಿ ಜಯಕರ್ನಾಟಕ' ಮುಂತಾದ ಪತ್ರಿಕೆಗಳಲ್ಲಿ ಕೈಫಿಯತ್ತುಗಳನ್ನೇ ಸಂಪಾದಿಸಿ ಪ್ರಕಟಿಸುತ್ತಿದ್ದುದರಿಂದ ಅವರಿಗೆ 'ಕೈಫಿಯತ್ತಿನ ರಾಮರಾಯ'ರೆಂಬ ಹೆಸರೂ ಬಂದಿತ್ತು. ಭಾಷೆ ಮತ್ತು ಏಕೀಕರಣ ಮುಂತಾದ ವಿಷಯಗಳ ಕುರಿತು ಅವರು ಬರೆದ ಲೇಖನಗಳು 'ಸುದರ್ಶನ,' 'ಸುವಾಸಿನಿ,' 'ಶ್ರೀಕೃಷ್ಣಸೂಕ್ತಿ,' 'ಜಯಕರ್ನಾಟಕ,' 'ಕಂಠೀರವ,' 'ವಾಗ್ಭೂಷಣ,' 'ಶಿವಾನುಭವ' ಪತ್ರಿಕೆಗಳಲ್ಲಿ ಪ್ರಕಟವಾಗಿವೆ.

ಕನ್ನಡ ಅರಸುಗಳಲ್ಲಿ ಒಬ್ಬನಾದ ಕೆಳದಿಯ ಬಸವರಾಜನು ರಚಿಸಿದ 'ಶಿವತತ್ವ ರತ್ನಾಕರ'ವು ಮಹತ್ವದ ಗ್ರಂಥ. ಸಾಹಿತ್ಯ, ಕಲೆ, ತತ್ವಜ್ಞಾನ, ವೈದ್ಯ ಮುಂತಾದ ಅನೇಕ ವಿಷಯಗಳನ್ನೊಳಗೊಂಡ ವಿಶ್ವಕೋಶವಿದು. ಸಂಸ್ಕೃತ ಸಾಹಿತ್ಯ ಇತಿಹಾಸ ದೃಷ್ಟಿಯಿಂದಲೂ, ಕನ್ನಡಿಗನೋರ್ವನು ಇಂತಹ ಕೃತಿಯನ್ನು ಸಂಸ್ಕೃತದಲ್ಲಿ ರಚಿಸಿದ್ದು ಲೋಕಕ್ಕೆ ವ್ಯಕ್ತವಾಗುವ ದೃಷ್ಟಿಯಿಂದ ಓಲೆಗರಿರೂಪದಲ್ಲೇ ಇದ್ದ 'ಶಿವತತ್ವ ರತ್ನಾಕರ' ಪುಸ್ತಕವಾಗಿ ಅಚ್ಚಾಗುವುದು ಅಗತ್ಯದ ಕೆಲಸವಾಗಿತ್ತು. ರಾಮರಾಯರು ತುಂಬ ಶ್ರಮ ವಹಿಸಿ ಈ ಗ್ರಂಥವನ್ನು ಸಂಪಾದಿಸಿ, ತಮ್ಮ ವೆಚ್ಚದಿಂದಲೇ ಮುದ್ರಿಸಿ ಪ್ರಕಟಿಸಿದರು. ಅವರ ಪ್ರಯತ್ನದಿಂದಾಗಿ ಕನ್ನಡಿಗನೊಬ್ಬನ ಸಾಹಿತ್ಯ ಪ್ರತಿಭೆ, ಬೌದ್ಧಿಕ ಸಾಹಸಗಳು ಅಖಿಲ ಭಾರತಕ್ಕೆ ಪರಿಚಯವಾಯಿತು. ಪುಸ್ತಕದ ಪ್ರಕಟನೆಯಿಂದ ಆರ್ಥಿಕ ನಷ್ಟವಾದರೂ ರಾಮರಾಯರು ಬೇಸರಪಡಲಿಲ್ಲ. ತಮ್ಮ ಹಿರಿಯರು ಕೆಳದಿಯ ಅರಸರ ಆಶ್ರಯದಲ್ಲಿ ಅಧಿಕಾರಿಗಳಾಗಿದ್ದ ಋಣದಲ್ಲಿ ಸ್ವಲ್ಪ ಸಂದಾಯವಾಯಿತೆಂಬ ತೃಪ್ತಿ ಅವರದ್ದಾಗಿತ್ತು.

ಕನ್ನಡ ಪತ್ರಿಕೋದ್ಯಮದ ಇತಿಹಾಸದಲ್ಲಿ ರಾಮರಾಯರಿಗೆ ಶಾಶ್ವತವಾದ ಸ್ಥಾನವಿದೆ. ಮಂಗಳೂರಿನ ಮಹಾ ಸಾಹಸಿ ಬೋಳಾರ ವಿಠಲರಾಯರು ೧೯೦೦ ರಲ್ಲಿ 'ಸುವಾಸಿನಿ' ಪತ್ರಿಕೆಯನ್ನು ಆರಂಭಿಸಿದಾಗ ಸಂಪಾದಕತ್ವಕ್ಕೆ ರಾಮರಾಯರನ್ನು ಆರಿಸಿದರು. ಮುಂದೆ ಬಹು ಪ್ರಖ್ಯಾತವಾದ

'ಶ್ರೀಕೃಷ್ಣಸೂಕ್ತಿ', 'ಹಿತಬೋಧಿನಿ', 'ಮಧುರವಾಣಿ' ಪತ್ರಿಕೆಗಳಿಗೆ ಮಾದರಿಯಾಗುವಂತೆ ರಾಮರಾಯರು 'ಸುವಾಸಿನಿ'ಯನ್ನು ಸಂಪಾದಿಸಿದರು. 'ಪ್ರಬುದ್ಧ ಕರ್ನಾಟಕ'ವು ಅವತರಿಸುವ ತನಕ 'ಸುವಾಸಿನಿ'ಯಂತಹ ಮೇಲ್ತರದ ಪತ್ರಿಕೆ ಇನ್ನೊಂದು ಇರಲಿಲ್ಲ. 'ಸುವಾಸಿನಿ'ಯಲ್ಲಿ ಪ್ರಕಟವಾದ ಲೇಖನಗಳು ಎಪ್ಪತ್ತೈದು ವರ್ಷಗಳ ಬಳಿಕವೂ ಓದಿ ಸವಿಯುವಂತಿವೆ. ದಿವಂಗತ ಎ. ಆರ್. ಕೃಷ್ಣಶಾಸ್ತ್ರಿಯವರು ಈ ಪತ್ರಿಕೆಯ ಬಗ್ಗೆ ಬರೆದ ಮಾತುಗಳು ಈ ಅಭಿಪ್ರಾಯವನ್ನು ಸಮರ್ಥಿಸುವಂತಹದ್ದು "ಇದು ವಿದ್ಯಾವರ್ಧನ, ತತ್ವಶಾಸ್ತ್ರ, ಕಲಾಕೌಶಲ್ಯ ಇತ್ಯಾದಿ ವಿಷಯಗಳನ್ನು ವರ್ಣಿಸುವ ಮಾಸಪತ್ರಿಕೆ. ಮ|| ಬೆನಗಲ್ ರಾಮರಾಯರ ಸಂಪಾದಕತ್ವದಲ್ಲಿ ಈಗ್ಗೆ ಇಪ್ಪತ್ತೈದು ವರ್ಷಗಳ ಕೆಳಗೆ ಹೊರಟಿತು. 'ಹಿತಬೋಧಿನಿ'ಯನ್ನು ಬಿಟ್ಟರೆ ಈ ತೆರದ ಒಳ್ಳೆಯ ಮಾಸಪತ್ರಿಕೆಗಳೇ ಇಲ್ಲದ ಕಾಲದಲ್ಲಿ ಅಲ್ಪಾಯುವಾಗಿ ಎರಡೇ ಎರಡು ವರ್ಷ ನಡೆದರೂ ಬಹು ಜನಾದರಣೀಯ....ಮ|| ಗಳಾದ ಎಂ. ಎನ್. ಶ್ರೀನಿವಾಸರಾಯರು, ಪಂಜೆ ಮಂಗೇಶರಾಯರು, ಉಳ್ಳಾಲ ಮಂಗೇಶರಾಯರು, ನಂದಳಿಕೆ ಲಕ್ಷ್ಮೀನಾರಾಯಣಪ್ಪನವರು ಮುಂತಾದವರು ಇದರಲ್ಲಿ ಬರೆದಿದ್ದ ಕವನಗಳೂ ಕಥೆಗಳೂ, ಪ್ರಬಂಧಗಳೂ, ಇಂದಿಗೂ ಅನೇಕರ ಸ್ಮರಣೆಯಲ್ಲಿವೆ."[1] 'ಜಯ ಕರ್ನಾಟಕ'ವೂ ಇದೇ ರೀತಿಯ ಅಭಿಪ್ರಾಯವನ್ನು ವ್ಯಕ್ತಪಡಿಸಿದೆ "ಅದರ ಸುವಾಸನೆಯು ಕನ್ನಡ ವಾಙ್ಮಯದಲ್ಲಿ 'ಸುವಾಸಿನಿ' ಅಡಗಿ ೨೩ ವರ್ಷಗಳಾದರೂ ಅಡಗಿಲ್ಲ." (ಜಯ ಕರ್ನಾಟಕ ೪/೨ ಪುಟ ೧೩೪)

ಈ ಪತ್ರಿಕೆಯ ಸಂಪಾದನದಲ್ಲಿ ರಾಮರಾಯರು ಪಂಜೆಯವರ ಮತ್ತು ಉಳ್ಳಾಲರ ಪೂರ್ಣ ಸಹಕಾರವನ್ನು ಪಡೆದಿದ್ದರು. ಸ್ತ್ರೀಯರ ಮುನ್ನಡೆಗೆ 'ಸುವಾಸಿನಿ'ಯಲ್ಲಿ ಪ್ರಾಶಸ್ತ್ಯವಿದ್ದರೂ, ಅದು ಮುಖ್ಯವಾಗಿ ವೈಚಾರಿಕ, ಜ್ಞಾನವರ್ಧಕ ಬರಹಗಳಿಂದ ಕೂಡಿದ ಸಾಹಿತ್ಯಿಕ ಮಾಸಿಕವಾಗಿತ್ತು. ರಾಮರಾಯರ 'ರಮಾಮಾಧವ' ಕಾದಂಬರಿಯು 'ಸುವಾಸಿನಿ'ಯ ಪ್ರಥಮ ಸಂಚಿಕೆಯಿಂದಲೇ ಧಾರಾವಾಹಿಯಾಗಿ ಪ್ರಕಟಗೊಂಡಿತ್ತು.

---

1 'ಪ್ರಬುದ್ಧ ಕರ್ನಾಟಕ,' ಕ್ರೋಧನ ಸಂವತ್ಸರ, ಸಂಕ್ರಾಂತಿ, ಪುಟ ೮

ದಿವಂಗತ ಬಿ. ವೆಂಕಟಾಚಾರ್ಯರ ' ಉನ್ಮಾದಿನೀ ' ಎಂಬ ಕಾದಂಬರಿಯೂ ಇದೇ ರೀತಿ ಈ ಪತ್ರಿಕೆಯಲ್ಲಿ ಪ್ರಕಟವಾಗಿತ್ತು. ಮುದ್ದಣನ ಕಾದಂಬರಿಯಾದ ' ಗೋದಾವರಿ'ಯ ಪ್ರಥಮ ಭಾಗವು ಪ್ರಕಟನೆಗಾಗಿ ಸ್ವೀಕೃತವಾದ ಉಲ್ಲೇಖವೂ ಇಲ್ಲಿ ಕಾಣಸಿಗುತ್ತದೆ.

ಪ್ರಪ್ರಥಮ ಸಾಮಾಜಿಕ ಕನ್ನಡ ಕಥೆಯಾದ ಪಂಜೆಯವರ ' ನನ್ನ ಚಿಕ್ಕ ತಾಯಿ'ಯಂತೂ ' ಸುವಾಸಿನಿ'ಯಲ್ಲೇ (ಅಗೋಸ್ತು-ಸಪ್ತಂಬರ ಸಂಚಿಕೆ, ೧೯೦೦) ಪ್ರಕಟವಾದುದು. ಪಂಜೆಯವರು ರಚಿಸಿದ ಯಾವತ್ತೂ ಸಾಮಾಜಿಕ ಹಾಗೂ ಐತಿಹಾಸಿಕ ಕಥೆಗಳು ' ಸುವಾಸಿನಿ'ಯಲ್ಲೇ ಮುದ್ರಣವಾದುದನ್ನು ನಾವಿಲ್ಲಿ ಸ್ಮರಿಸಬೇಕು. ಐತಿಹಾಸಿಕ ಕಥೆಗಳ ರಚನೆಯಲ್ಲಿ ಉಲ್ಲಾಳರ ಸಹಭಾಗಿತ್ವವೂ ಇತ್ತು. ಪಂಜೆಯವರ ಒಂದೇ ಒಂದಾದ ಪತ್ತೇದಾರಿ ಕಾದಂಬರಿಯ ಒಂದು ಭಾಗವು ಈ ಪತ್ರಿಕೆಯಲ್ಲಿ ಪ್ರಕಟವಾಗಿದೆ.

' ಸುವಾಸಿನಿ 'ಯ ಸಂಚಿಕೆಗಳಲ್ಲಿ ಬುದ್ಧ, ಅಶೋಕ, ವೀರೇಶಲಿಂಗಂ ಪಂತುಲು, ಸಯ್ಯಾಜಿರಾವ್ ಮುಂತಾದ ಮಹನೀಯರ ಜೀವನಚರಿತ್ರೆಗಳಿಗೆ ಪ್ರಾಶಸ್ತ್ಯ ದೊರಕಿದೆ. ವೈಜ್ಞಾನಿಕ ಬರಹಗಳಲ್ಲಿ ಹತ್ತಂಗಡಿ ನಾರಾಯಣ ರಾಯರ ' ಭೂಮಿಶಾಸ್ತ್ರ'ವೆಂಬ ಸಚಿತ್ರ ಲೇಖನಮಾಲೆಯು ಉಲ್ಲೇಖನೀಯ. ಆಧುನಿಕ ಶಾಸ್ತ್ರೀಯ ವಿಚಾರಗಳನ್ನು ಸರಳವಾದ ಭಾಷೆಯಲ್ಲಿ ೧೯೦೦ ರಲ್ಲೇ ಬರೆಯುತ್ತಿದ್ದರು. ಇದೇ ರೀತಿಯ ಉತ್ತಮ ಲೇಖನಮಾಲೆಗಳೆಂದರೆ ರಾ. ಕೃ. ಇನಾಮತಿಯವರ ' ಭಾರತ ವರ್ಷೀಯ ಭೂವರ್ಣನೆ'ಯೂ 'ಉಳ್ಳಾಲರ ಚೀಣಾ ಸಾಮ್ರಾಜ್ಯ'ವು. ' ಸ್ಫುಟವಿಚಾರ 'ವೆಂಬ ಸಂಪಾದಕೀಯ ಸಮಾಚಾರ ಸಂಗ್ರಹ, ವಿವಿಧ ವಿಷಯ ಸಂಗ್ರಹ, ಪುಸ್ತಕ ವಿಮರ್ಶೆ ಹಾಸ್ಯಾರ್ಣವ ಮುಂತಾದ ಸ್ಥಿರಶೀರ್ಷಿಕೆಗಳಿಂದ ' ಸುವಾಸಿನಿ'ಯು ಸ್ವಾರಸ್ಯಪೂರ್ಣವಾಗಿತ್ತು.

' ಸುವಾಸಿನಿ 'ಯ ಲೇಖಕ ಮತ್ತು ವಾಚಕ ವರ್ಗಗಳು ಅಖಿಲ ಕರ್ನಾಟಕಸ್ಥವಾಗಿದ್ದವು. ಈ ಬಗ್ಗೆ ಸಂಪಾದಕರ ಧೋರಣೆಯು ಗಮನಾರ್ಹ. "ಈ ಪತ್ರಿಕೆ ಮಂಗಳೂರಿನಿಂದ ಹೊರಡುವುದಾದರೂ ನಾವು ಪುರುಷರ ಅಥವಾ ಪ್ರಾಂತ್ಯಗಳ ಕಡೆಗೆ ಲಕ್ಷ್ಯವಿಡದೆ ಕೇವಲ ಲೇಖನಗಳ ಯೋಗ್ಯತೆಯನ್ನು ಪರೀಕ್ಷಿಸಿ, ಯಾರು, ಯಾವ ಸ್ವತಂತ್ರ ಅಥವಾ ಭಾಷಾಂತರ

ಮಾಡಿದ ಲೇಖನವನ್ನು ಕಳುಹಿಸಿದರೂ ಅದಕ್ಕೆ ಆದರಪೂರ್ವಕ ಸ್ಥಳವನ್ನು ಕೊಡುವೆವು. ಮುಖ್ಯವಾಗಿ ನಮಗೆ ಕಳುಹುವ ಲೇಖನಗಳು ಪಾಠಕರ ಮನಸ್ಸಿಗೆ ರಂಜನೆಯನ್ನೂ ಜ್ಞಾನವನ್ನೂ ಉಂಟುಮಾಡತಕ್ಕವುಗಳಾಗಿರ ಬೇಕು. ನೂತನವಾಗಿ ಬರೆಯಲಭ್ಯಾಸಿಸುವವರು ನಮಗೆ ಲೇಖನಗಳನ್ನು ಕಳುಹಿದರೂ ಅವನ್ನು ಆದಮಟ್ಟಿಗೆ ತಿದ್ದಿ ಪ್ರಕಟಗೊಳಿಸುವೆವು. ಸ್ತ್ರೀಯರು ಬರೆದು ಕಳುಹುವ ಲೇಖನಗಳಿಗೆ ಎಲ್ಲರಿಗಿಂತಲೂ ಮುಂದಾಗಿ ಸ್ಥಳ ಕೊಡು ವೆವು." [1] ಮೈಸೂರು ವಿಭಾಗದಿಂದ ಬಿ. ವೆಂಕಟಾಚಾರ್, ಎಸ್. ಎನ್. ನರಹರಯ್ಯ, ತಮ್ಮಯ್ಯಶಾಸ್ತ್ರಿ, ಶ್ರೀನಿವಾಸಯ್ಯಂಗಾರ್, ಎಸ್. ಜಿ. ನರ ಸಿಂಹಾಚಾರ್, ಎಂ. ಎಸ್. ತಮ್ಮಣ್ಣ, ಎಂ. ಅಣ್ಣಾಜಿರಾವ್ ಮುಂತಾದ ವರೂ ಉತ್ತರ ಕರ್ಣಾಟಕದಿಂದ ಕಾವ್ಯಾನಂದ, ವ್ಯಾಸರಾವ್ ರೊದ್ದ, ರಾ. ಕೃ. ಇನಾಮತಿಯವರೂ ದಕ್ಷಿಣ ಕನ್ನಡದಿಂದ ಹತ್ತಂಗಡಿ, ಪಂಜೆ, ಉಳ್ಳಾಲ, ಬೆನಗಲ್, ನಂದಳಿಕೆ ಕರೋಡಿಯವರೂ, ಮದರಾಸಿನಿಂದ ಶಿವ ಶಂಕರ ಶಾಸ್ತ್ರಿಯವರೂ 'ಸುವಾಸಿನಿ'ಗೆ ಲೇಖನಗಳನ್ನು ಒದಗಿಸಿದ್ದಾರೆ.

ಕನ್ನಡ ಸಾಹಿತ್ಯದ ಬೆಳವಣಿಗೆಯತ್ತ ರಾಮರಾಯರಿಗಿದ್ದ ಕಾಳಜಿ ಯನ್ನು ಅವರು ಬರೆದ ಸಂಪಾದಕೀಯಗಳಿಂದ ನಾವು ತಿಳಿಯಬಹುದಾಗಿದೆ. "ಪಾಶ್ಚಾತ್ಯ ವಿದ್ಯಾಪಾರಂಗತರಾದ ನಮ್ಮ ಜನರು ಈಗಿನ ದಿನಗಳಲ್ಲಿ ಮನಃಪೂರ್ವಕವಾಗಿ ದೇಶ ಭಾಷೆಯ ಪುಸ್ತಕಗಳನ್ನು ಅಥವಾ ಪತ್ರಿಕೆಗಳನ್ನು ಓದುವುದು ಅಪರೂಪವಾಗಿದೆ. ಅವರು ಅದೊಂದು ಬಗೆಯ ಅಪಮಾನವೆಂದು ತಿಳಿಯುವರು. ಎಷ್ಟು ಯೋಗ್ಯವಾದ ಗ್ರಂಥವೇ ಆದರೂ ಅವರು ಇಂಗ್ಲಿಷ್ ಭಾಷಾಂತರವನ್ನು ಓದಿ ಮೆಚ್ಚುವರಲ್ಲದೆ, ದೇಶಭಾಷೆಯಲ್ಲಿದ್ದಾಗ ಅದನ್ನು ಓದಿಕೊಳ್ಳರು. ಇದರ ದೆಸೆಯಿಂದ ಒಂದು ಕಡೆಗೆ ಜನರಲ್ಲಿ ದೇಶ ಭಾಷೆಯ ಜ್ಞಾನವೇ ಕಡಮೆಯಾಗುತ್ತ ಬರುತ್ತಿದೆ; ಇನ್ನೊಂದು ಕಡೆಗೆ ದೇಶೀಯರ ಭಾಷೆಗಳೂ ಈ ಅನಾದರದಿಂದ ಕುಂದುತ್ತ ಬರುತ್ತಿವೆ. ಎಲ್ಲೆಲ್ಲಿ ಜನರು ಸ್ವಲ್ಪ ಮಟ್ಟಿಗಾದರೂ ಆದರಿಸುವರೋ, ಅಲ್ಲಲ್ಲಿ ಆ ಭಾಷೆಗಳು (ಉದಾ

---

1 'ಸುವಾಸಿನಿ' ೧-೩ ಪುಟ ೩೬, ಸಪ್ತಂಬರ ೧೯೦೦

ಹರಣಾರ್ಥವಾಗಿ ಬಂಗಾಳೀ, ಮರಾಠಿ) ಉಚ್ಚ ದೆಶೆಗೆ ಬಂದಿವೆ. ಪೂರ್ವ ಗ್ರಂಥಗಳನ್ನು ಕುರಿತು ವಿಚಾರಿಸ ಹೋದರೆ, ಕನ್ನಡವೇ ಬಂಗಾಳೀ ಮರಾಠೀ ಭಾಷೆಗಳಿಗಿಂತ ಸಂಖ್ಯೆಯಲ್ಲಿಯೂ ಯೋಗ್ಯತೆಯಲ್ಲಿಯೂ ಉಚ್ಚವಾದ ಪುಸ್ತಕಗಳಿಂದ ಸಮೃದ್ಧವಾಗಿತ್ತೆಂದು ತೋರುತ್ತದೆ. ಆ ಭಾಷೆಗಳು ಹುಟ್ಟುವ ಮೊದಲೇ ಕನ್ನಡದಲ್ಲಿ ಉದ್ದಾಮ ಕವಿಗಳು ತಮ್ಮ ಕವಿತೆಗಳನ್ನು ಹಾಡಿದರು. ಬಂಗಾಳಿ ಜನರಂತೆ ಕನ್ನಡಿಗರೂ ತಮ್ಮ ಭಾಷೆಯನ್ನು ಉತ್ಸಾಹದಿಂದ ಪ್ರೀತಿಸುತ್ತಿದ್ದರೆ, ಈ ದಿನ ಕನ್ನಡವೇ ಭಾರತೀಯ ಭಾಷೆಗಳಲ್ಲಿ ಅಗ್ರಪೂಜೆಗೆ ಯೋಗ್ಯವಾಗುತ್ತಿತ್ತು. ಆದರೆ ನಮ್ಮ ಜನರ ದುರ್ದೈವದಿಂದ ಅದು ಹಾಗೆ ಆಗಲಿಲ್ಲ. ಇದರ ಕಾರಣವನ್ನು ಭಾಷಾವಾತ್ಸಲ್ಯವುಳ್ಳವರು ಹುಡುಕಿಕೊಂಡು ಅದಕ್ಕೆ ತಕ್ಕ ಪ್ರತಿಕ್ರಿಯೆಗಳನ್ನು ಯೋಚಿಸುವುದು ಯೋಗ್ಯವಾಗಿದೆ." ಈ ಲೇಖನದಲ್ಲಿಯೇ ಶಿಕ್ಷಣ ಮಾಧ್ಯಮವು ಕನ್ನಡವಾಗಬೇಕೆಂದು ರಾಮರಾಯರು ಪ್ರತಿಪಾದಿಸಿದ್ದಾರೆ. ಆ ದಿನಗಳಲ್ಲಿ ಇದೊಂದು ಕ್ರಾಂತಿಕಾರಕ ವಿಚಾರವೇ ಸರಿ. ಬಿ. ಎ. ತೇರ್ಗಡೆಯಾದ ವ್ಯಕ್ತಿಗಳು ಕನ್ನಡದಲ್ಲಿ ಗ್ರಂಥರಚನೆಯನ್ನು ಮಾಡಬೇಕೆಂದು ಕೋರಲಾಗಿದೆ. ಗ್ರಂಥ ಪ್ರಸಾರ ಮಾಡಬೇಕೆಂದೂ ಸೂಚಿಸಲಾಗಿದೆ. ಹಳೆಯ ಕನ್ನಡ 'ಪಂಡಿತರು ಆಧುನಿಕ ದೃಷ್ಟಿಯನ್ನು ಬೆಳೆಸಿಕೊಂಡು ಕನ್ನಡ ಸೇವೆಯನ್ನು ಮಾಡಬೇಕಾದ ಆವಶ್ಯಕತೆಯನ್ನೂ ಇಲ್ಲಿ ರಾಮರಾಯರು ಒತ್ತಿ ಹೇಳಿದ್ದಾರೆ."....ಕನ್ನಡದಲ್ಲಿಯಾದರೋ ಅವು ಕನ್ನಡ ಪಂಡಿತರೇ ರಚಿಸಿ, ಕನ್ನಡ ಪಂಡಿತರೇ ಪ್ರಯಾಸದಿಂದ ಅರ್ಥ ಮಾಡಿಕೊಳ್ಳಬೇಕಾದ ಒಗಟುಗಳಾಗಿವೆ. ಇಂತಹ ಮಸ್ತಿಷ್ಕದ ಚಮತ್ಕಾರಗಳನ್ನು ತೊಲಗಿಸಿ, ನಿರ್ಮಲವಾಗಿಯೂ ಸುಲಭಗ್ರಾಹ್ಯವಾಗಿಯೂ ಇರುವ ಗ್ರಂಥಗಳನ್ನೂ ಗದ್ಯಗ್ರಂಥಗಳನ್ನೂ ಯಾವ ಮಾರ್ಗದಿಂದ ಬರುವಂತೆ ಮಾಡಬಹುದೋ ಎಂಬುದು ದೇಶಾಭಿಮಾನಿಗಳು ಮನಸ್ಸಿಟ್ಟು ಯೋಚಿಸತಕ್ಕ ವಿಷಯವಾಗಿದೆ." [1]

ಕಾಯ್ಕಿಣಿ, ಗಂಗೊಳ್ಳಿ, ಕರಗುದರಿ, ದೇಶಪಾಂಡೆಯವರ ಪ್ರಯತ್ನದಿಂದ ಮುಂಬಯಿ ವಿಶ್ವವಿದ್ಯಾಲಯದಲ್ಲಿ ಕನ್ನಡ ಎಂ. ಎ. ಶಿಕ್ಷಣಕ್ಕೆ ಅವಕಾಶ

---

1 'ಸುವಾಸಿನಿ' ೧-೮ ಫೆಬ್ರವರಿ, ೧೯೦೧

ಉಂಟಾದಾಗ ರಾಮರಾಯರು ಹಿಗ್ಗಿ 'ಸುವಾಸಿನಿ'ಯಲ್ಲಿ ಅಭಿನಂದನೆಗಳನ್ನು ತಿಳಿಸಿದ್ದಾರೆ. ಪ್ರತಿಯೋರ್ವ ಕನ್ನಡಿಗನು ಕಡ್ಡಾಯವಾಗಿ ಮರಾಠಿ ಕಲಿಯ ಬೇಕೆಂಬ ವೆಂಕಟರಂಗೋ ಕಟ್ಟಿಯವರ ವಿಚಿತ್ರ ಸಲಹೆಯನ್ನು ರಾಮರಾಯರು ಬಲವಾಗಿಯೂ ಸಕಾರಣವಾಗಿಯೂ ವಿರೋಧಿಸಿದ್ದಾರೆ. ಮರಾಠಿ-ಕನ್ನಡ ಭಾಷೆಗಳ ಸೌಹಾರ್ದ ಸಂಬಂಧವನ್ನು ಅವರು ಮರೆತಿಲ್ಲ. "ಕನ್ನಡಿಗರೆಲ್ಲರೂ ಮರಾಠಿ ಕಲಿಯಬೇಕೆಂದು ಯಾರೊಬ್ಬರಾದರೂ ಬಲತ್ಕಾರ ಮಾಡುವುದು ನ್ಯಾಯವೆಂದು ನಾವು ಎಣಿಸುವುದಿಲ್ಲ. ಕನ್ನಡಿಗರು ಕನ್ನಡದಿಂದಲೇ ಉಚ್ಚದೆಶೆಗೆ ಬರಬೇಕು. ಬೇರೆ ಯಾವ ಭಾಷೆಯೂ ಕನ್ನಡದಷ್ಟು ಅವರ ಉನ್ನತಿಗೆ ಅನುಕೂಲವಾಗಿ ಪರಿಣಮಿಸಲಾರದು." [1]

ಭಿನ್ನಭಿನ್ನ ಪ್ರದೇಶಗಳ ಕನ್ನಡಿಗರಿಗೆ ತಿಳಿಯುವಂತಹ ತಿಳಿಗನ್ನಡ ಶೈಲಿಯ ಅಗತ್ಯವನ್ನು ರಾಮರಾಯರು ಮನಗಂಡಿದ್ದರು. ಸಾರ್ವತ್ರಿಕವಾಗಿ ಒಪ್ಪುವ ಶೈಲಿಯಲ್ಲಿ ಅವರು ಬರೆಯುತ್ತಿದ್ದರಲ್ಲದೆ ಆ ಸಮಸ್ಯೆಯ ಕುರಿತಾದ ಅವರ ಸಲಹೆಯು 'ಸುವಾಸಿನಿ'ಯಲ್ಲಿ ವ್ಯಕ್ತವಾಗದಿರಲಿಲ್ಲ. "ಈಗ ಧಾರವಾಡಿನವರು ಮೈಸೂರಿನ ಕನ್ನಡದಲ್ಲಿ ಸಂಸ್ಕೃತವೇ ಅಧಿಕವೆಂದೂ, ಏತತ್ಕಾರಣದಿಂದ ಅವರು ಬರಿಯುವ ಭಾಷೆ ಸಾಮಾನ್ಯರಾದ ಜನರಿಗೆ ತಿಳಿಯದಷ್ಟು ಕ್ಲಿಷ್ಟವೆಂದೂ ಹೇಳುವರು. ಮೈಸೂರಿನವರು ಧಾರವಾಡಿನವರ ಭಾಷೆಗೆ ವ್ಯಾಕರಣವೇ ಇಲ್ಲವೆನ್ನುವರು. ಮಂಗಳೂರಿನವರು ಏನೊಂದೂ ತಿಳಿಯದೆ, ಮೌನಧಾರಣವೇ ಪಂಡಿತ ಲಕ್ಷಣವೆಂದು ಅಲಕ್ಷ್ಯಭಾವದಿಂದ ಇರುವರು. ಹೀಗಾಗಿ ಒಂದು ಪಕ್ಷದವರು ಹೊರಡಿಸುವ ಪತ್ರಿಕೆಗೆ ಇನ್ನೊಂದು ಕಡೆಯವರ ಆಶ್ರಯ ದೊರೆಯುವುದು ವಿರಳವೇ ಎನ್ನಬೇಕಾಗಿದೆ. ಕರ್ನಾಟಕ ರಾಜ್ಯವನ್ನು ಎರಡು, ಮೂರು ಸರಕಾರಗಳ ಕೆಳಗೆ ವಿಭಾಗಿಸಿದುದೂ, ಇದರಿಂದ ಒಂದು ಪ್ರಾಂತ್ಯದವರೊಡನೆ ಅಷ್ಟೊಂದು ಸಲುಗೆ ಇಲ್ಲದುದೂ ಇನ್ನೊಂದು ಕಾರಣ....ನಾವು ಧಾರವಾಡದ ಕನ್ನಡಿಗರ ಮರಾಠೀ ಪ್ರಯೋಗಗಳನ್ನೂ, ಮೈಸೂರಿನವರ ಕ್ಲಿಷ್ಟಗೀರ್ವಾಣ ಪ್ರಯೋಗಗಳನ್ನೂ ತ್ಯಜಿಸಿ ಸರ್ವರೂ ಒಪ್ಪುವಂತೆ ಸುಲಭವಾಗಿಯೂ ವ್ಯಾಕರಣ ಸಮ್ಮತವಾಗಿಯೂ,

---

1 'ಸುವಾಸಿನಿ' ೧-೭ ಜನವರಿ ೧೯೦೧

ಲಲಿತವಾಗಿಯೂ ಇರುವ ಕನ್ನಡವನ್ನೇ 'ಸುವಾಸಿನಿ'ಯಲ್ಲಿ ಉಪಯೋಗಿಸ ಬೇಕೆಂದು ಉದ್ದೇಶಿಸಿರುವೆವು."[1] ಈ ಉದ್ದೇಶಕ್ಕನುಗುಣವಾಗಿಯೇ ರಾಮರಾಯರು ಸರಳ ಮತ್ತು ತಿಳಿಯಾದ ಭಾಷೆಯಲ್ಲಿ ಬರೆಯುತ್ತಿದ್ದರು. ಪ್ರಾದೇಶಿಕ ಭಾಷಾಬೇಧಗಳನ್ನು ತೊಡೆದುಹಾಕಿ ಸಮನ್ವಯಗೊಳಿಸುವ ಪ್ರಯತ್ನವು ಮುಂದೆ ವಿದ್ಯಾವರ್ಧಕ ಸಂಘದಿಂದ ಆಯಿತು. ರಾ. ಹ. ದೇಶ ಪಾಂಡೆಯವರೊಂದಿಗೆ ರಾಮರಾಯರೂ ಭಾಷಾ ಸಮನ್ವಯ ಸಮಿತಿಯ ಸದಸ್ಯರಾಗಿ ದುಡಿದರು. ಮುದ್ರಣ ಪೂರ್ವದಲ್ಲಿ ಕರಡನ್ನು ಈ ಸಮಿತಿಯ ಸದಸ್ಯರು ಓದಿ ತಮ್ಮ ಸಲಹೆಗಳನ್ನೀಯುತ್ತಿದ್ದರು. ಅದಕ್ಕನುಸಾರವಾಗಿ ಪುಸ್ತಕವನ್ನು ಪರಿವರ್ತಿಸಿ ಮುದ್ರಿಸಲಾಗುತ್ತಿತ್ತು. ಅದಕ್ಕೊಂದು ನಿಯಮಾ ವಳಿಯೂ ಇತ್ತು. ದೇಶಪಾಂಡೆಯವರ ಅಕ್ಬರ, ಬೀರಬಲವೆಂಬ ಕೃತಿಯು ಈ ನಿಯಮಾವಳಿಯಂತೆ ಪರಿಷ್ಕಾರಗೊಂಡಿದೆ. ಕನ್ನಡನಾಡಿನ ಮತ್ತು ನುಡಿಯ ಅನೇಕ ಸಮಸ್ಯೆಗಳನ್ನು ಗ್ರಹಿಸಿ ಅದರ ಸುಧಾರಣೆಯತ್ತ ಗಮನ ವಿರಿಸಿ ಸಾಧ್ಯವಿದ್ದ ಪ್ರಯತ್ನವನ್ನು ರಾಮರಾಯರು ಮಾಡುತ್ತಿದ್ದರು.

'ಸುವಾಸಿನಿ' ಪತ್ರಿಕೆಯು ಉತ್ತಮಮಟ್ಟದ್ದಾಗಿದ್ದರೂ ಮೂರು ವರ್ಷ ಗಳಿಗಿಂತ ಹೆಚ್ಚು ಬಾಳಲಿಲ್ಲ. ಅದಕ್ಕೆ ಕಾರಣ ಆರ್ಥಿಕ ನಷ್ಟವೊಂದೇ. ಉತ್ತಮವಾದುದು ಯಾವುದೂ ಅಭಿಮಾನಶೂನ್ಯವಾದ ನಮ್ಮ ಸಮಾಜದಲ್ಲಿ ಹೆಚ್ಚುಕಾಲ ಬಾಳಲಾರದು. ಜನಬೆಂಬಲವಿಲ್ಲದೆ ಈ ಪತ್ರಿಕೆಯು ೧೯೦೩ ರಲ್ಲಿ ಅಸ್ತಂಗತವಾಯಿತು. ಆದರ್ಶಪ್ರಾಯವಾದ ಪತ್ರಿಕೆಯ ಮೂಲಕ ವಿದ್ಯಾ ವಂತರಲ್ಲಿ ಕರ್ತವ್ಯ ಪ್ರಜ್ಞೆಯನ್ನು ಜಾಗೃತಗೊಳಿಸಿದ ರಾಮರಾಯರ ಪ್ರಯ ತ್ನವು ಸ್ಮರಣೀಯ. ರಾಮರಾಯರು 'ವಾಗ್ಭೂಷಣ'ದ ಸಹಸಂಪಾದಕರೂ ಆಗಿದ್ದರು. 'ಸುವಾಸಿನಿ,' 'ಕೃಷ್ಣಸೂಕ್ತಿ.' 'ವಾಗ್ಭೂಷಣ'ಗಳಲ್ಲಿ ಹಾಸ್ಯದ ಚಟಾಕಿಗಳ ಸಂಗ್ರಾಹಕರಾದ ಆರ್. ಎಂ. ಬಿ (ಅಂದರೆ ರಾಮರಾವ್ ಮಂಜು ನಾಥಯ್ಯ ಬೆನಗಲ್) ಇವರೇ ಆಗಿದ್ದರು.

ರಾಮರಾಯರು ಹುಟ್ಟಿದ್ದು ತೌಳವದಲ್ಲಿ. ಮನೆಮಾತು ಕೊಂಕಣಿ

1 'ಸುವಾಸಿನಿ' ೧-೩. ಸಪ್ತಂಬರ ೧೯೦೦.

ಹೃದಯದಲ್ಲಿ ಅಪಾರವಾದ ಕನ್ನಡ ಪ್ರೇಮ. ಅವರ ಬಾಳಿನ ಮೂಲ ಮಂತ್ರವೆಂದರೆ :

" ಕನ್ನಡದ ಚಿರಕೀರ್ತಿ | ಯೆನ್ನ ಚಿತ್ತದ ಸ್ಫೂರ್ತಿ |
ಕನ್ನಡದ ಒಗ್ಗೂಟ | ಎನಗಡುವೆ ಕಿರೀಟ | "

ರಾಮರಾಯರು ಕನ್ನಡ ನಾಡಿನಲ್ಲಿ ಹುಟ್ಟಿದುದರಿಂದ ತಾವು ಧನ್ಯರೆಂದು ತಿಳಿದಿದ್ದರು. ಕನ್ನಡನಾಡು ರಾಮರಾಯರಂತಹ ಸುಪುತ್ರರಿಂದ ಧನ್ಯವಾಗಿದೆಯೆಂಬುದು ಅಷ್ಟೇ ಸತ್ಯ.

ಅನುಬಂಧ-೧

ರಾಮರಾಯರ ಜೀವನದ ಮುಖ್ಯ ಘಟನೆಗಳು

ಜನನ	:	೧೮೭೬, ಏಪ್ರಿಲ್ ೨.
ಮೆಟ್ರಿಕ್ ಪರೀಕ್ಷೆ ತೇರ್ಗಡೆ	:	೧೮೯೧
ಬಿ.ಎ. ಪದವಿ	:	೧೮೯೭
ಉದ್ಯೋಗಾರಂಭ	:	೧೮೯೭
ಎಂ.ಎ. ಪದವಿ	:	೧೯೦೦
'ಸುವಾಸಿನಿ' ಪತ್ರಿಕೆಯ ಸಂಪಾದಕತ್ವ	:	೧೯೦೦-೧೯೦೩
ಮೈಸೂರು ನಾರ್ಮಲ್ ಸ್ಕೂಲ್‌ನಲ್ಲಿ ಲೆಕ್ಚರರ್ ಹುದ್ದೆ	}	೧೯೦೦, ಡಿಸೆಂಬರ್ ೧೫ರಿಂದ
ಮದುವೆ	:	೧೯೦೧ ಫೆಬ್ರವರಿ ೧೨
ಮುಂಬಯಿಯ ಉದ್ಯೋಗ	:	೧೯೦೨, ಅಕ್ಟೋಬರ್ ೧
ಎಲ್‌ಎಲ್.ಬಿ. ಪದವಿ	:	೧೯೦೪
ಪತ್ನಿಯ ನಿಧನ	:	೧೯೦೯, ಫೆಬ್ರವರಿ ೯
ಎರಡನೆಯ ಮದುವೆ	:	೧೯೧೦
ಮದರಾಸಿನ ಉದ್ಯೋಗ	:	೧೯೧೦, ಏಪ್ರಿಲ್
ಪ್ರಧಾನ ಭಾಷಾಂತರಕಾರರಾಗಿ ಬಡತಿ	:	೧೯೧೭
ಬೆಳಗಾವಿ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ	}	೧೯೨೫
ಸೇವಾನಿವೃತ್ತಿ	:	೧೯೩೯
ಕನ್ನಡ ಸಾಹಿತ್ಯ ಪರಿಷತ್ತಿನ ಮಂದಿರದಲ್ಲಿ ಭಾವಚಿತ್ರ ತೂಗಿದ್ದು	}	೧೯೪೩, ಮಾರ್ಚ್ ೨೮
ನಿಧನ	:	೧೯೪೩, ಮೇ ೮

ಅನುಬಂಧ-೨

ಸಾಹಿತ್ಯ ಕೃತಿಗಳು

೧ ನಾಟಕಗಳು :

ಅಭಿಷೇಕ ನಾಟಕ (' ವಾಗ್ಭೂಷಣ'ದಲ್ಲಿ ೧೯೨೫)
ಅವಿಮಾರಕ
ಕಲಹಪ್ರಿಯಾ ಪ್ರಹಸನ ('ವಾಗ್ಭೂಷಣ'ದಲ್ಲಿ ೧೮೯೮)
ಕೃಷ್ಣಾಕುಮಾರಿ (೧೮೯೯)
ಕುಂದಮಾಲಾ (೧೯೨೩)
ಘೋಷಯಾತ್ರೆ (೧೯೨೨)
ತ್ರೈವಿಕ್ರಮ
ಡಾಮಕ ಪ್ರಹಸನ
ದೂತಾಂಗದ
ಪಾರ್ವತೀ ಪರಿಣಯ
ಶಾಪ ಸಂಭ್ರಮ
ಸುಭದ್ರಾ ವಿಜಯ (೧೮೯೬)
ಸುಭದ್ರಾ ಹರಣ

೨. ಕಾವ್ಯ : ಸಂಗೀತ ತಾರಾವಳಿ (೧೯೩೮)
ಸಂಗೀತ ರತ್ನಾವಳಿ (೧೯೪೦)

೩. ಕಾದಂಬರಿ: ಮತ್ತು ಸಣ್ಣಕಥೆಗಳು
ಇರಾವತಿ (ಕರ್ನಾಟಕ ನಂದಿನಿ)
ತರುಬಾಲ
ಸತ್ಯರಾಜಾಪೂರ್ವದೇಶದ ಯಾತ್ರೆಗಳು-೧
ಸತ್ಯರಾಜಾಪೂರ್ವದೇಶದ ಯಾತ್ರೆಗಳು-೨
ಚಿಕ್ಕಕಥೆಗಳು

೪. ವಿಚಾರ ಸಾಹಿತ್ಯ ಮತ್ತು ಜೀವನ ಚರಿತ್ರೆ.

ಪೌರ್ವಾತ್ಯರ ವರ್ಣವ್ಯವಸ್ಥೆ ಮತ್ತು ಪಾಶ್ಚಿಮಾತ್ಯರ ವರ್ಗವ್ಯವಸ್ಥೆ ಮನೆವಾಳ್ತೆ
ಸದಾಹಾರ ವಿವೇಚನೆ
ಸತ್ಯಾಗ್ರಹಾಶ್ರಮ
ಮಹನೀಯ ಚರಿತ್ರಮಾಲೆ (೧೯೦೦)

೫. ಸಂದರ್ಭ ಗ್ರಂಥ :

ಪುರಾಣನಾಮ ಚೂಡಾಮಣಿ (೧೯೪೧-ಪಾಸ್ಯಂ ಜತೆಯಲ್ಲಿ)

೬. ಗ್ರಂಥಸಂಪಾದನೆ ಮತ್ತು ಕೈಫಿಯತ್ತುಗಳು :

ಅ) ಶಿವತತ್ವ ರತ್ನಾಕರ (೧೯೨೩, ಸಂಸ್ಕೃತ)
ಆ) ಕೆಳದಿ ಅರಸುಗಳ ವಂಶಾವಳಿ (ಶಿವಾನುಭವ)
ಕೊಡಗಿನ ರಾಜೇಂದ್ರನಾಮೆ (ಶಿವಾನುಭವ ೧೯೩೦)
ಬೀಳಗಿ ಅರಸುಗಳ ಚರಿತ್ರೆ
ಇ) ಕಣಕುಪ್ಪೆ ಕಟ್ಟೆದ ಕೈಫಿಯತ್ತು
ಕಮಲಾಚಲ ಕೋಟೆಯ ಕೈಫಿಯತ್ತು
ಜಮಲಾಬಾದ್ ಕೈಫಿಯತ್ತು
ತಂಜಾವೂರಿನ ನಾಯಕ ಮನೆತನದ ಕೈಫಿಯತ್ತು
ಬಳ್ಳಾರಿಯ ಕೈಫಿಯತ್ತು
ಬಿದನೂರು ಕೈಫಿಯತ್ತು
ಶೃಂಗೇರಿಯ ಕೈಫಿಯತ್ತು
ರಾಮರಾಜನ ಕೈಫಿಯತ್ತು
ವಸುಧಾರೆಯ ಕೈಫಿಯತ್ತು
ಹೊಳೆ ಹೊನ್ನೂರಿನ ಕೈಫಿಯತ್ತು

೭. ಪತ್ರಿಕಾ ಸಂಪಾದನಾ

'ಸುವಾಸಿನಿ' ಮಂಗಳೂರು ೧೯೦೦-೧೯೦೩
'ವಾಗ್ಭೂಷಣ'ದ (ಜತೆ ಸಂಪಾದಕರಾಗಿದ್ದರು.
ಪರಿಷತ್ಪತ್ರಿಕೆಯ ಸಲಹಾ ಮಂಡಳಿಯ ಸದಸ್ಯರು.

ಗ್ರಂಥಋಣ

ಗ್ರಂಥಗಳು: ಸಾಂಗಲಿ, ವೆಂಕಟೇಶ: 'ಸಿರಿಗನ್ನಡ ಗ್ರಂಥಕರ್ತರ ಚರಿತ್ರ ಕೋಶ'

ಕುಲಮರ್ವ ಬಾಲಕೃಷ್ಣ ಮತ್ತು ದಾನಿ, ಸುರೇಂದ್ರ: ಕನ್ನಡ ಸಾಹಿತ್ಯ ಸಮ್ಮೇಳನದ ಕಥೆ:

ಕನ್ನಡ ಸಾಹಿತ್ಯ ಪರಿಷತ್ತು: ಅಧ್ಯಕ್ಷರ ಭಾಷಣಗಳು, ಭಾಗ ೧.

ಪತ್ರಿಕೆಗಳು: 'ಸುವಾಸಿನಿ', ಮಂಗಳೂರು ೧೯೦೦-೧೯೦೩

'ಕಂಠೀರವ' ಮಂಗಳೂರು ೧೯೩೮ ದಸರಾ ಸಂಚಿಕೆ.

'ಪ್ರಬುದ್ಧ ಕರ್ನಾಟಕ' ೭/೨.

'ಸ್ವದೇಶಾಭಿಮಾನಿ' ೨೧-೫-೧೯೪೩

'ಕನ್ನಡ ನುಡಿ' ಸಂಪಾದಕೀಯ ೧೪-೫-೧೯೪೩

ಪತ್ರಿಕಾಲೇಖನಗಳು:

'ಗುಣಪಕ್ಷಪಾತಿ.' 'ಬೆನಗಲ್ ರಾಮರಾವ್ ಅವರ ಜೀವನ ಚರಿತ್ರ ಸಂಗ್ರಹ' 'ವಾಗ್ಭೂಷಣ' ೨೯/೪ ಪುಟ ೧೭-೨೫

ಭಾರದ್ವಾಜ, ದ.ಕೃ: ಬೆನಗಲ್ ರಾಮರಾಯರು 'ಕನ್ನಡನುಡಿ' ೯೪-೧೯೪೩, ಸುಂದರ ಶಾಸ್ತ್ರಿ, ಪಾನ್ಯಂ: 'ಬೆನಗಲ್ ರಾಮರಾಯರು' ಕನ್ನಡ ನುಡಿ ೧೪-೫-೪೩, ಶರ್ಮ, ತಿ.ತಾ.: 'ಅಮೂಲ್ಯ ಸ್ನೇಹ' ಉತ್ಥಾನ ಆಗಸ್ಟ್ ೧೯೭೧.